# ಮೂಲ ಶಿಕ್ಷಣದಲ್ಲಿ ಡಿಪ್ಲೊಮಾ
# (ಡಿ.ಎಲ್.ಇಡಿ)

## ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಣ ಸಂಬಂಧಿ ಕಾರ್ಯ ಪ್ರಕ್ರಿಯೆಗಳು

## ವಿಭಾಗ –1

## ಸಾಮಾಜಿಕ ವಿಜ್ಞಾನವನ್ನು ಒಂದು ಶಿಸ್ತು ಎಂದು ಅರ್ಥೈಸಿಕೊಳ್ಳುವ (

**ರಾಷ್ಟ್ರೀಯ ಮುಕ್ತ ವಿದ್ಯಾಲಯ ಶಿಕ್ಷಣ ಸಂಸ್ಥೆ**

**ಎ–24/25, ಇನ್‌ಸ್ಟಿಟ್ಯೂಷನಲ್ ಏರಿಯಾ, ಸೆಕ್ಟರ್–62 ನೋಯಿಡಾ,**
**ಗೌತಮ ಬುದ್ಧ ನಗರ, ಉತ್ತರ ಪ್ರದೇಶ –201309**

**ಜಾಲತಾಣ : www.nios.ac.in**

## ಪರಿಣಿತರ ಸಮಿತಿ

| | | |
|---|---|---|
| ಡಾ॥ ಸಿತಾಂಶು ಎಸ್.ಜೆನಾ<br>ಅಧ್ಯಕ್ಷರು, ಎನ್.ಐ.ಓ.ಎಸ್. ನೊಯಿಡಾ<br>ಶ್ರೀ ಬಿ.ಕೆ. ತ್ರಿಪಾಠಿ<br>ಭಾ.ಆ.ಸೆ. ಪ್ರಮುಖ ಸಚಿವರು,<br>ಮಾನವ ಸಂಪನ್ಮೂಲ ಅಭಿವೃದ್ಧಿ ವಿಭಾಗ,<br>ಝಾರ್ಖಂಡ್ ಸರ್ಕಾರ, ರಾಂಚಿ<br>ಪ್ರೋ ಎ.ಕೆ. ಶರ್ಮಾ<br>ಭೂತಪೂರ್ವ ನಿರ್ದೇಶಕರು ಎನ್‌ಸಿಇಆರ್‌ಟಿ<br>ನವದೆಹಲಿ<br>ಪ್ರೋ.ಎಸ್.ವಿ.ಎಸ್.ಚೌಧರಿ<br>ಭೂತಪೂರ್ವ ಉಪಾಧ್ಯಕ್ಷರು ಎನ್.ಸಿಟಿ.ಇ.<br>ನವದೆಹಲಿ<br>ಪ್ರೋ.ಸಿ.ಬಿ.ಶರ್ಮಾ<br>ಶಾಲಾ ಶಿಕ್ಷಣ ಇಂದಿರಾಗಾಂಧಿ ರಾಷ್ಟ್ರೀಯ<br>ಮುಕ್ತ ವಿಶ್ವವಿದ್ಯಾಲಯ, ನವದೆಹಲಿ<br>ಪ್ರೋ. ಎಸ್.ಸಿ. ಅಗರ್‌ಕರ್<br>ಪ್ರಾಧ್ಯಾಪಕರು ಹೋಲಿಭಾಭಾ ವಿಜ್ಞಾನ ಶಿಕ್ಷಣ<br>ಕೇಂದ್ರ, ಮುಂಬಯಿ | ಪ್ರೋ.ಸಿ.ಎಸ್. ನಾಗರಾಜು<br>ಭೂತಪೂರ್ವಪ್ರಾಚಾರ್ಯರು<br>ಆರ್‌ಐ.ಇ. (ಎನ್.ಸಿಇಆರ್‌ಟಿ) ಮೈಸೂರು<br>ಪ್ರೋ. ಕೆ.ದೊರೈಸ್ವಾಮಿ<br>ಭೂತಪೂರ್ವ ಮುಖ್ಯಸ್ಥರು, ಶಿಕ್ಷಕರ ಶಿಕ್ಷಣ ಮತು<br>ವಿಸ್ತರಣಾ ವಿಭಾಗ, ಎನ್‌ಸಿಇಆರ್ಟಿ ನವದೆಹಲಿ<br>ಪ್ರೊ. ಬಿ. ಫಾಲಚಂದ್ರ<br>ಭೂತಪೂರ್ವ ಮುಖ್ಯಸ್ತರು, ಶಿಕ್ಷಣ ವಿಭಾಗ,<br>ಹಾಗೂ ಭೋಧನಾ ವಿಭಾಗದ ವರಿಷ್ಟರು ಆರ್‌ಇಐ<br>(ಎನ್‌ಸಿಇಆರ್‌ಟಿ) ಮೈಸೂರು<br>ಪ್ರೋ. ಕೆ.ಕೆ. ವಸಿಷ್ಠ<br>ಭೂತಪೂರ್ವ ಮುಖ್ಯಸ್ಥರು, ಡಿಇಇ,<br>ಎನ್‌ಸಿಇಜರ್‌ಟಿ, ನವದೆಹಲಿ<br>ಪ್ರೊ. ವಸುಧಾ ಕಾಮತ್<br>ಉಪಕುಲಪತಿಗಳು ಎಸ್‌ಎನ್‌ಡಿಟಿ ಮಹಿಳಾ<br>ವಿಶ್ವವಿದ್ಯಾಲಯ, ಮುಂಬಯಿ | ಡಾ. ಹೂಮ ಮಸೂದ್<br>ಶಿಕ್ಷಣ ತಜ್ಞರು ಯುನಿಸ್ಕೋ ನವದೆಹಲಿ<br>ಪ್ರೊ॥ ಪವನ್ ಸುಧೀರ್<br>ಮುಖ್ಯಸ್ಥರು, ಕಲಾ ಮತ್ತು ಕಲಾತ್ಮಕ ಶಿಕ್ಷಣ<br>ವಿಭಾಗ, ಎನ್‌ಸಿಇಆರ್‌ಟಿ, ನವದೆಹಲಿ<br>ಶ್ರೀ ಬಿನಯ ಪಟ್ನಾಯಕ್<br>ಶಿಕ್ಷಣ ತಜ್ಞರು, ಯುಎನ್‌ಐಸಿಇಎಫ್,<br>ರಾಂಚಿ<br>ಡಾ. ಕುಲದೀಪ್ ಅಗರವಾಲ್<br>ನಿರ್ದೇಶಕರು (ಶೈಕ್ಷಣಿಕ) ಎನ್‌ಐಓಎಸ್,<br>ನೊಯಿಡಾ<br>ಪ್ರೋ. ಎಸ್.ಸಿ. ಪಾಂಡಾ<br>ವರಿಷ್ಠ ಸಮಾಲೋಚಕರು (ಶೈಕ್ಷಣಿಕ)<br>ಡಾ॥ ಕುಜನ್ ಬಲಾ<br>ಕಾರ್ಯನಿರ್ವಾಹಣಾಧಿಕಾರಿಗಳು (ಶೈಕ್ಷಣಿಕ)<br>ಎನ್.ಐ.ಓ.ಎಸ್. ನೊಯಿಡಾ. |

## ಪಠ್ಯಕ್ರಮ ಸಂಯೋಜಕರು ಮತ್ತು ಸಂಪಾದಕರು

ಪ್ರೋ॥ ಎಂ.ಎಂ. ಮೊಹಂತಿ ಭೂತಪೂರ್ವ ನಿರ್ದೇಶಕರು ಎಸ್‌ಐಇಎಂಎಟಿ, ಒಡಿಸಾ

## ಪಠ್ಯಲೇಖಕರು

| | | |
|---|---|---|
| ಡಾ॥ ಮೊಹಿತ್ ಮೋಹನ್ ಮೊಹಂತಿ<br>ನಿವೃತ್ತ ನಿರ್ದೇಶಕರು ಎಸ್‌ಐಇಎಂಎಟಿ<br>ಒಡಿಶಾ<br>ಡಾ॥ ಪರಶುರಾಮ್ ರಾಯಸಿಂಗ್<br>ನಿವೃತ್ತ ರೀಡರ್ (ಶಿಕ್ಷಣ)<br>ಎನ್.ಡಿ.ಡ್ಲ್ಯೂ ಅಧ್ಯಾಪಕ ಶಿಕ್ಷಣ<br>ಮಹಾವಿದ್ಯಾಲಯ, ಭುವನೇಶ್ವರ<br>ಶ್ರೀ ಸುದರ್ಶನ ಸಂತಾರ<br>ವರಿಷ್ಟ ಅಧ್ಯಾಪಕ ಶಿಕ್ಷಕರು<br>ಜಿಲ್ಲಾ ಸಂಪನ್ಮೂಲ ಕೇಂದ್ರ ಸೊನೆಪುರ<br>ಶ್ರೀ ತಪಸ್ ಕುಮಾರ್ ನಾಯಕ್<br>ವರಿಷ್ಟ ಅಧ್ಯಾಪಕರ ಶಿಕ್ಷಕರು<br>ಅಧ್ಯಾಪಕ ಶಿಕ್ಷಣ ನಿರ್ದೇಶಾನಾಲಯ ಮತ್ತು<br>ಎಸ್‌ಸಿಇಆರ್‌ಟಿ, ಒಡಿಶಾ, ಭುವನೇಶ್ವರ<br>ಶ್ರೀಮತಿ. ಸುಚಪ್ರವಾ ಮೊಹಾಪಾತ್ರ<br>ವರಿಷ್ಟ ಅಧ್ಯಾಪಕ ಶಿಕ್ಷಕರು<br>ಡಿ.ಐ.ಇ.ಟಿ. ಕಟಕ್ ನರಸಿಂಗಪುರ್ | ಡಾ॥ ಜೆ.ಸಿ. ನಂದಾ<br>ಮುಖ್ಯಸ್ಥರು (ಶಿಕ್ಷಣ) , ಬಿ.ಜೆ.ಬಿ ಸ್ವಾಯುಕ್ತ<br>ಮಹಾವಿದ್ಯಾಲಯ ಭುವನೇಶ್ವರ<br>ಶ್ರೀ ಕಾರ್ತಿಕೇಶ್ವರ ಜಿಹರಾ<br>ನಿವೃತ್ತವರಿಷ್ಠ ಅಧ್ಯಾಪಕರ ಶಿಕ್ಷಕರು<br>ಡಿ.ಐ.ಇ.ಟಿ ಕೊರಾಪುಟ್ ಜೆಪುರ್<br>ಶ್ರೀಮತಿ. ಲಿಪಿಕಾ ಸಾಹು<br>ವರಿಸ್ಠ ಅಧ್ಯಾಪಕ ಶಿಕ್ಷಕರು<br>ಡಿ.ಐ.ಇ. ಟಿ. ನಯಾಘರ್ ರಜಸುನಖಾಲ<br>ಶ್ರೀ ಪೂರ್ಣಚಂದ್ರಬ್ರಹ್ಮ<br>ವರಿಷ್ಠ ಅಧ್ಯಾಪಕರ ಶಿಕ್ಷಕರು<br>ಜಿಲ್ಲಾ ಸಂಪನ್ಮೂಲ ಕೇಂದ್ರ ಚೌದ್ಧ<br>ಡಾ॥ ರಾಜೇಂದ್ರ ಕುಮಾರ ನಾಯಕ್<br>ಉಪನ್ಯಾಸಕರು ಶಿಕ್ಷಣ ವಿಭಾಗ<br>ರೆರ್ವೆಷಾ, ವಿಶ್ವವಿದ್ಯಾಲಯ ಕಟಕ್ | ಶ್ರೀಮತಿ ಚಂದ್ರಿಕಾ ನಾಯಕ್<br>ವರಿಷ್ಠ ಅಧ್ಯಾಪಕರ ಶಿಕ್ಷಕರು<br>ಡಿ.ಐ.ಇಟಿ. ನವಘರ್ ರಾಜಸುಂಬಾಲ<br>ಡಾ ಶ್ರೀಮತಿ. ಸುಸಂಧ್ಯಾ ಮೊಹಂತಿ<br>ಪ್ರಾಂಶುಪಾಲರು ಡಿ.ಐ.ಇಟಿ. ಅಂಗುಲ್<br>ಥೆಂಡಿಪಾಡ<br>ಶ್ರೀ ಪ್ರಶಾಂತಕುಮಾರ ರಥ್<br>ಪ್ರಾಂಶುಪಾಲರು ಡಿ.ಐ.ಇಟಿ. ಪುರಿ<br>ಡಾ॥ ದುರ್ಗಾಚರಣ ರಾಣಾ<br>ನಿವೃತ್ತರೀಡರ್ (ಶಿಕ್ಷಣ)<br>ಭದ್ರಕ್ ಸ್ವಾಯುತ್ತ ಮಹಾವಿದ್ಯಾಲಯ ಭದ್ರಕ್<br>ಶ್ರೀ ಅನಂತ ಕಿಶೋರ ಸ್ವಾರ್ಯಿ<br>ಯೋಜನ ಪ್ರಬಂಧಕರು ಯುವ ಮತ್ತು<br>ಸಾಮಾಜಿಕ ಅಭಿವೃದ್ಧಿ<br>ಕೇಂದ್ರ (ಸಿವೈಎಸ್‌ಡಿ) ಭುವನೇಶ್ವರ |

| ವಿಷಯ ಸಂಪಾದಕರು | ಭಾಷಾ ಸಂಪಾದಕರು |
|---|---|
| ಡಾ॥ ಸುಶ್ಮಿತಾ ಮಿತ್ರ<br>ಭೂತಪೂರ್ವ ನಿರ್ದೇಶಕರು<br>ಎಸ್‌ಎಸ್‌ಎಸ್. ಎಂಐಓಕೆಎಸ್. ನೋಯಿಡಾ. | ಡಾ. ಎ.ಡಿ. ತಿವಾರಿ<br>ಸಂಯುಕ್ತ ಪ್ರಾಧ್ಯಾಪಕರು ಶಿಕ್ಷಣ ಸರ್ವೇಕ್ಷಣ ವಿಭಾಗ<br>ಎನ್‌ಸಿಇಆರ್‌ಟಿ ನವದೆಹಲಿ |

## ಕಾರ್ಯಕ್ರಮ ಸಂಯೋಜಕರು

| | | |
|---|---|---|
| ಡಾ॥ ಕುಲದೀಪ ಅಗರವಾಲ್<br>ನಿರ್ದೇಶಕರು (ಶೈಕ್ಷಣಿಕ)<br>ಎನ್.ಐ.ಓ.ಎಸ್. ನೊಯಿಡಾ | ಪ್ರೋ॥ ಎಸ್.ಪಿ. ಪಾಂಡ<br>ವರಿಷ್ಠ ಸಮಾಲೋಚಕರು (ಅಧ್ಯಾಪಕ ಶಿಕ್ಷಣ)<br>ಶೈಕ್ಷಣಿಕ ವಿಭಾಘ ಎನ್.ಓ.ಎಸ್. ನೊಯಿಡಾ | ಡಾ॥ ಕರ್ಂಚ್ ಬಾಲಾ<br>ಕಾರ್ಯಪಾಲಕ ಅಧಿಕಾರಿ (ಆಧ್ಯಾಪಕ ಶಿಕ್ಷಣ)<br>ಶೈಕ್ಷಣಿಕ ವಿಭಾಗ. ಎನ್.ಐ.ಓ.ಎಸ್. ನೊಯಿಡಾ |

| ಮುಖಪುಟ ಪರಿಕಲ್ಪನೆ ಮತ್ತು ವಿನ್ಯಾಸ | ಬೆರಳಚ್ಚು | ಕಛೇರಿ ಸಹಾಯಕರು |
|---|---|---|
| ಶ್ರೀ. ಖಿ.ಎನ್. ಉಪ್ರೇತಿ.<br>ಪ್ರಕಾಶಣ ಅಧಿಕಾರಿ, ಮುದ್ರಣ, ಎನ್‌ಐಓಎಸ್.<br>ನೊಯಿಡಾ<br>ಶ್ರೀ ಧರ್ಮಾನಂದ ಜೋಶಿ<br>ಕಾರ್ಯಪಾಲಕ ಸಹಾಯಕರು, ಮುದ್ರಣ<br>ಎನ್.ಐ.ಓ.ಎಸ್. ನೊಯಿಡಾ | ಶಿವಂ ಗ್ರಾಫಿಕ್ಸ್<br>431, ರಿಶಿನಗರ್, ದೆಹಲಿ–34 | ಶ್ರೀಮತಿ. ಸುಷ್ಮಾ<br>ಕಿರಿಯ ಸಹಾಯಕರು, ಶೈಕ್ಷಣಿಕ ವಿಭಾಗ,<br>ಎನ್.ಐ.ಓ.ಎಸ್. ನೊಯಿಡಾ. |

## ಅಧ್ಯಕ್ಷರ ಸಂದೇಶ .....

### ಎನ್.ಐ.ಓ.ಎಸ್ ಗೆ ಸ್ವಾಗತ

*ಪ್ರಿಯ ಕಲಿಕಾರ್ಥಿ*

ರಾಷ್ಟ್ರೀಯ ಮತ್ತು ವಿದ್ಯಾಲಯ ಶಿಕ್ಷಣ ಸಂಸ್ಥೆಯ (ಎನ್ಐಓಎಸ್) ಭಾರತ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯದ ಅಡಿಯಲ್ಲಿರು ಒಂದು ಸ್ವಾಯುಕ್ತ ಸಂಸ್ಥೆಯಾಗಿದೆ. ಇದು ವಿಶ್ವದಲ್ಲೇ ಅತಿದೊಡ್ಡ ಮುಕ್ತ ವಿದ್ಯಾಲಯ ಶಿಕ್ಷಣ ವ್ಯವಸ್ಥೆಯಾಗಿದ್ದು, ಸುಮಾರು 2.02 ದಶಲಕ್ಷ್ ಕಲಿಕಾರ್ಥಿಗಳಿದ್ದು, ಮಾಧ್ಯಮಿಕ ಮತ್ತು ಉಚ್ಚಮಾಧ್ಯಮಿಕ ಹಂತಗಳಲ್ಲಿದ್ದಾರೆ. ಎನ್.ಐ.ಓ.ಎಸ್. ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಜಾಲ ಹೊಂದಿದದು, 15 ಕ್ಷೇತ್ರೀಯ ಕೇಂದ್ರಗಳು 2 ಉಪಕೇಂದ್ರಗಳು ಮತ್ತು ಸುಮಾರು 5000 ಅಧ್ಯಯನ ಕೇಂದ್ರಗಳನ್ನು ಶೈಕ್ಷಣಿಕ ಮತ್ತು ವೃತ್ತಿಪರ ಕಾರ್ಯಕ್ರಮಗಳನ್ನು ದೇಶದ ಒಳಗೂ ಮತ್ತು ಹೊರಗೂ ಒದಗಿಸಲು ಅನುಕೂಲ ಮಾಡಿಕೊಟ್ಟಿದೆ. ಇದು ಕಲಿಕಾರ್ಥಿ ಕೇಂದ್ರಿತವಾಗಿದ್ದು ಗುಣಮಟ್ಟದ ಶಿಕ್ಷಣ ಕೌಶಲ್ಯಾಭಿವೃದ್ಧಿ ಮತ್ತು ತರಬೇತಿಯನ್ನು ಮುಕ್ತ ಮತ್ತು ದೂರಶಿಕ್ಷಣದ ಮೂಲಕ ಒದಗಿಸುತ್ತಿದೆ. ಕಾರ್ಯಕ್ರಮಗಳನ್ನು ಮುದ್ರಿತ ಕಲಿಕಾ ಸಾಮಗ್ರಿ ಮತ್ತು ಮುಖಾಮುಖಿ ಪಾಠ್ಯ ವಿಧಾನ (ವೈಯಕ್ತಿಕ ಸಂಪರ್ಕ ಕಾರ್ಯಕ್ರಮ) ಮತ್ತು ದೃಶ್ಯ ಶ್ರವಣ ಮುದ್ರಿಕೆಗಳು, ರೇಡಿಯೋ ಬಿತ್ತರಣೆ, ದೂರದರ್ಶನ ಬಿತ್ತರಣೆ, ಮುಂತಾದ ಮಾಹಿತಿ ತಂತ್ರಜ್ಞಾನದ ವಿಧಾನಗಳನ್ನು ಬಳಸಿ ಒದಗಿಸಲಾಗುತ್ತದೆ.

ಈಗ, ಎನ್.ಐ.ಓ.ಎಸ್.ಗೆ ಕಾರ್ಯನಿರತರಾಗಿರುವ ತರಬೇತಿ ರಹಿತ, ಪ್ರಾಥಮಿಕ ಹಂತದಲ್ಲಿರುವ ಶಿಕ್ಷಕರುಗಳಿಗೆ ತರಬೇತಿ ನೀಡುವ ಪ್ರಾಧಿಕಾರವನ್ನು ಕೊಡಲಾಗಿದೆ.

ಡಿ.ಇಎಲ್.ಇಡ್ ತರಬೇತಿಯ ಸಾಮಾಗ್ರಿಗಳನ್ನು ಎನ್.ಐ.ಓ.ಎಸ್‌ಗೆ ಸಂಸ್ಥೆಯು ಇದೇ ಕ್ಷೇತ್ರದಲ್ಲಿ ನಿರತವಾಗಿರುವ ಇತರೆ ಸಂಸ್ಥೆಗಳೊಡಗೂಡಿ, ಪ್ರಾಥಮಿಕ ಶಿಕ್ಷಕರು, ಮೂಲಕ ಶಿಕ್ಷಣದಲ್ಲಿ ಡಿಪ್ಲೊಮಾ ಪಡೆಯಲು ಅನುವಾಗುವಂತೆ ನವೀನವೂ, ಆವಿಷ್ಕಾರಿಯೂ ಸವಾಲಯ ಯುಕ್ತವೂ ಆದ 2 ವರ್ಷಗಳ ಪಠ್ಯಕ್ರಮವನ್ನು ಆರ್‌ಟಿಇ 2009 ಕ್ಕೆ ಅನುಗುಣವಾಗಿ ತಯಾರಿಸಲಾಗಿದ್ದು, ಪ್ರಸ್ತುತಪಡಿಸಲಾಗಿದೆ.

ಈ. ಡಿ.ಇಲ್.ಇಡ್ ಪಾಠ್ಯಕ್ರಮಕ್ಕೆ ನಿಮ್ಮನ್ನು ಸ್ವಾಗತಿಸಲು ನನಗೆ ಹರ್ಷವಾಗುತ್ತಿದೆ. ನೀವು ನಿಮ್ಮ ರಾಜ್ಯಗಳಲ್ಲಿನ ಪ್ರಾಥಮಿಕ ವಿದ್ಯಾರ್ಥಿಗಳ ಶಿಕ್ಷಣದಲ್ಲಿ ನೀಡುತ್ತಿರುವ ಕೊಡುಗೆಯನ್ನು ಮೆಚ್ಚುತ್ತೇನೆ. ಆರ್.ಟಿ.ಈ. 2009 ರ ಪ್ರಕಾರ ಎಲ್ಲಾ ಶಾಲಾ ಶಿಕ್ಷಕರು ವೃತ್ತಿಪರ ತರಬೇತಿ ಪಡೆಯುವುದು. ಅತ್ಯವಶ್ಯವಾಗಿದೆ. ನೀವು ಶಿಕ್ಷಕರಾಗಿ ಗಳಿಸಿರುವ ಅನುಭವದಿಂದ ಸಾಕಷ್ಟು ಕೌಶಲ್ಯಗಳನ್ನು ಉತ್ತಮ ಶಿಕ್ಷಕರಾಗಲು ಕಲಿತಿರಬಹುದು. ಕಾನೂನು ಪ್ರಕಾರ ಈಗ ನೀಡುವ ತರಬೇತಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ಮುಗಿಸುವುದು ಕಡ್ಡಾಯವಾಗಿದೆ.

ನೀವು ಈವರೆವಿಗೆ ಕಲೆಹಾಕಿರುವ ಜ್ಞಾನ ಮತುತ ಅನುಭವಗಳು ಈ ತರಬೇತಿ ಕಾರ್ಯಕ್ರಮವನ್ನು ಪೂರ್ಣಗೊಳಿಸಲು ಅನುಕೂಲವಾಗುತ್ತವೆ ಎಂಬುದು ನನಗೆ ತಿಳಿದಿದೆ.

ಈ ಡಿ.ಇಎಲ್.ಇಡಿ, ಕಾರ್ಯಕ್ರಮವು, ಮುಕ್ತ ದೂರ ಕಲಿಕಾ ರೀತಿಯಲ್ಲಿದ್ದು ನಿಮಗೆ ನಿಮ್ಮ ಶಿಕ್ಷಕ ವೃತ್ತಿ ಕಾರ್ಯಕ್ಕೆ ಯಾವ ರೀತಿಯಲ್ಲೂ ಅಡಚಣೆಯಾಗದಂತೆ ವೃತ್ತಿಪರ ತರಬೇತಿ ಪಡೆಯುವ ನಿಟ್ಟಿನಲ್ಲಿ ಹೇರಳವಾದ ಅವಕಾಶಗಳನ್ನು ಒದಗಿಸುತ್ತದೆ.

ಅಭಿವೃದ್ಧಿ ಪಡಿಸಿರುವ ಸ್ವ–ಕಲಿಕಾ ಸಾಮಗ್ರಿಗಳು , ನಿಮ್ಮ ಉಪಯೋಗಕ್ಕಾಗಿಯೇ ಸಿದ್ಧಪಡಿಸಿದ್ದು, ನೀವು ಒಬ್ಬ. ಅತ್ಯುತ್ತಮ ಶಿಕ್ಷಕರಾಗಲು ಅರಿವು ಮೂಡಿಸುವುದಲ್ಲದೆ, ನೀವು ವೃತ್ತಿಪರ ಅರ್ಹತೆ ಪಡೆಯಲು ಸಹಕಾರಿಯಾಗಿದೆ.

ಈ ಘನಕಾರ್ಯದಲ್ಲಿ ನಿಮಗೆ ಅದೃಷ್ಟ ಒಲಿಯಲಿ!!

ಅಧ್ಯಕ್ಷರು (ಎನ್.ಐ.ಓ.ಎಸ್)

ಅಂಕಾಂಶಗಳು (8=6+2)

| ವಿಭಾಗ | ಪಠ್ಯಭಾಗ | ಪಠ್ಯಭಾಗದ ಹೆಸರು | ಅಧ್ಯಯನ ಕಾಲಾವಧಿ ಗಂಟೆಗಳು | | ಪ್ರಾಯೋಗಿಕ ಅಧ್ಯಯನ |
|---|---|---|---|---|---|
| | | | ವಿಷಯವಸ್ತು | ಚಟುವಟಿಕೆ | |
| ವಿಭಾಗ–1 ಸಾಮಾಜಿಕ ವಿಜ್ಞಾನವನ್ನು ಒಂದು ಶಿಸ್ತು ಎಂದು ಅರ್ಥೈಸಿಕೊಳ್ಳುವ ದು | ಯು1 | ಸಮಾಜ ವಿಜ್ಞಾನದ ಸ್ವರೂಪ | 6 | 4 | ನಿಮ್ಮ ಸ್ವಂತ ಅನುಭವದಿಂದ ಶಿಕ್ಷಕರು ಅನುಕೂಲಕಾರಕರು ಎಂಬುದನ್ನು ಗುರುತಿಸುವಲ್ಲಿ ಶಿಕ್ಷಕರ ಪಾತ್ರ |
| | ಯು2 | ಶಾಲಾ ಪಠ್ಯಕ್ರಮದಲ್ಲಿ ಸಮಾಜ ವಿಜ್ಞಾನ | 8 | 5 | ನಿಮ್ಮ ಸಹೋದ್ಯೋಗಿಗಳ ವರ್ತನೆಯಿಂದ ಕಲಿಕಾರ್ಥಿ ಕೇಂದ್ರಿತ ಮಾರ್ಗೋಪಾಯದ ವಿಶಿಷ್ಟತೆಗಳನ್ನು, ಗುರುತಿಸುವಿಕೆ. |
| ವಿಭಾಗ 2 ಶಾಲಾ ಪಠ್ಯಕ್ರಮದಲ್ಲಿ ಸಾಮಾಜಿಕ ವಿಜ್ಞಾನಗಳು | ಯು3 | ಇತಿಹಾಸ | 6 | 3 | ಶಿಕ್ಷಕ– ಸಹೋದ್ಯೋಗಿಗಳಿಂದ, ತರಗತಿಯಲ್ಲಿ ಅನುತ್ತೇಜಕಾರಿ ಕ್ರಿಯೆಗಳು ಮತ್ತು ಸಾಮಗ್ರಿಗಳು ಗುರುತಿಸುವಿಕೆ. |
| | ಯು4 | ಭೂಗೋಳ | 7 | 3 | ಬೇರೆ ಬೇರೆ ವಿಷಯ ಕ್ಷೇತ್ರಗಳಲ್ಲಿನ ವಿವಿಧ ಕಲಿಕಾ – ಭೋಧನಾ ಸಾಮಗ್ರಿಗಳ ವಿಂಗಡನೆ |
| | ಯು5 | ರಾಜ್ಯಶಾಸ್ತ್ರ / ಅರ್ಥಶಾಸ್ತ್ರ / ಸಮಾಜಶಾಸ್ತ್ರಗಳ ಸಮನ್ವಯ ವಿಷಯವಾಗಿ ಸಾಮಾಜಿಕ ಮತ್ತು ರಾಜಕೀಯ ಜೀವನ | 8 | 5 | ಬೇರೆ ಬೇರೆ ವಿಷಯ ಕ್ಷೇತ್ರಗಳಲ್ಲಿನ ವಿವಿಧ ವರ್ಗಗಳಲ್ಲಿ ಚಟುವಟಿಕೆಗಳ ಯೋಜನೆ ಮತ್ತು ಅಭಿವೃದ್ಧಿ. |
| ವಿಭಾಗ 3 ತರಗತಿಯಲ್ಲಿನ ಕಲಿಕೆಯಲ್ಲಿ ಹೊರಹೊಮ್ಮುವ ಸಮಸ್ಯೆಗಳು | ಯು6 | ವಿದ್ಯಾರ್ಥಿಯ ಅರಿವು/ ತಿಳುವಳಿಕೆಯ ಲಕ್ಷಣ ಹಾಗೂ ಪ್ರಾದೇಶಿಕ ಸಂದರ್ಭ | 5 | 2 | ವಿವಿಧ ವಿಷಯ ಕ್ಷೇತ್ರಗಳಲ್ಲಿನ ಪರಿಕಲ್ಪನೆಗಳನ್ನು ಸಂಯೋಜಿಸಿದ ಚಟುವಟಿಕೆಗಳನ್ನು ಅಭಿವೃದ್ಧಿಸುವುದು. |
| | ಯು7 | ಕಲಿಸುವ ಹಾಗೂ ಕಲಿಯುವ ತಂತ್ರಗಳು | 5 | 2 | ಕಲಿಕಾ ಬೋಧನಾ ಪ್ರಕ್ರಿಯೆಯಲ್ಲಿ ಉಪಯೋಗಕ್ಕಾಗಿ ಜಾನದಪ ಸಾಮಗ್ರಿಗಳನ್ನು ಸಂಗ್ರಹಿಸುವುದು. |
| | ಯು8 | ಸಮಾಜ ವಿಜ್ಞಾನದ ಸಂಪನ್ಮೂಲಗಳ ಕಲಿಕೆ | 6 | 3 | ಪಾಠ ಪ್ರವಚನಕ್ಕಾಗಿ ಕಂಪ್ಯೂಟರ್ ಸಂಯೋಜಿತ ಬೋಧನಾ ಸಲಕರಣೆ ಅಭಿವೃದ್ಧಿ. |
| | ಯು9 | ಸಮಾಜ ವಿಜ್ಞಾನಗಳ ಮೌಲ್ಯಮಾಪನ ಸ್ವರೂಪ | 6 | 3 | ವಿವಿಧ ವಿಷಯಗಳಲ್ಲಿ ಕಲಿಕಾರ್ತಿಯ ಸಾಧನೆಗಳನ್ನು ಕಂಪ್ಯೂಟರ್ ಆಧಾರಿತ ವಿಶ್ಲೇಷಣೆ |
| | | ಟ್ಯೂಟರಿಂಗ್ | 15 | | |
| | | ಮೊತ್ತ | 122 | 58 | 60 |
| ಒಟ್ಟು ಮೊತ್ತ | | | 122+58+60=240 ಗಂಟೆಗಳು | | |

# ವಿಭಾಗ –1

# ಸಾಮಾಜಿಕ ವಿಜ್ಞಾನವನ್ನು ಒಂದು ಶಿಸ್ತು ಎಂದು ಅರ್ಥೈಸಿಕೊಳ್ಳುವ ದು

**ವಿಭಾಗ ಪಠ್ಯಭಾಗ**

***ಪಠ್ಯಭಾಗ 1*** **ಸಮಾಜ ವಿಜ್ಞಾನದ ಸ್ವರೂಪ**

***ಪಠ್ಯಭಾಗ 2*** **ಶಾಲಾ ಪಠ್ಯಕ್ರಮದಲ್ಲಿ ಸಮಾಜ ವಿಜ್ಞಾನ**

# ಪರಿವಿಡಿ


| ಕ್ರ.ಸಂ. | ಪಠ್ಯಭಾಗ | ಪುಟಸಂಖ್ಯೆ |
|---|---|---|
| 1 | ಪಠ್ಯಭಾಗ–1<br>ಸಮಾಜ ವಿಜ್ಞಾನದ ಸ್ವರೂಪ | 01 |
| 2 | ಪಠ್ಯಭಾಗ–2<br>ಶಾಲಾ ಪಠ್ಯಕ್ರಮದಲ್ಲಿ ಸಮಾಜ ವಿಜ್ಞಾನ | 25 |

# ಪಠ್ಯಭಾಗ –1 ಸಮಾಜ ವಿಜ್ಞಾನದ ಸ್ವರೂಪ

ಸಂರಚನೆ

1.0 ಪೀಠಿಕೆ/ಪ್ರಸ್ತಾವನೆ

1.1 ಕಲಿಕಾಉದ್ದೇಶಗಳು

1.2 ಸಮಾಜ ವಿಜ್ಞಾನದ: ವಿಕಾಸ ಮತ್ತು ಕಲ್ಪನೆ

1.2.1 ಸಮಾಜ ವಿಜ್ಞಾನದ ವಿಕಾಸ

1.2.2 ಸಮಾಜ ವಿಜ್ಞಾನದ ಕಲ್ಪನೆ ಮತ್ತು ಸಮಾಜ ಅಧ್ಯಯನದ ಕಲ್ಪನೆಯೊಡನೆ ಅದರ ಸಂಬಂಧ

1.2.3 ಹಿರಿಯ ಪ್ರಾಥಮಿಕ ಶಾಲಾ ಪಠ್ಯಕ್ರಮದಲ್ಲಿ ಸಮಾಜವಿಜ್ಞಾನ

1.3 ಸಮಾಜವಿಜ್ಞಾನ: ವಿವಿಧ ಕಾಲಘಟ್ಟಗಳಲ್ಲಿ

1.3.1 ಪೂರ್ವ – ಆಧುನಿಕ ಪ್ರಪಂಚದಲ್ಲಿ ಸಮಾಜವಿಜ್ಞಾನ

1.3.2 ಆಧುನಿಕ ಹಾಗೂ ಸಮಕಾಲೀನ ಪ್ರಪಂಚ ಸಮಾಜವಿಜ್ಞಾನ

1.3.3 ಸಮಾಜವಿಜ್ಞಾನ ಕುರಿತ ಭಾರತದ ದೃಷ್ಟಿಕೋನ: ವಿವಿಧ ಕಾಲಘಟ್ಟಗಳಲ್ಲಿ

1.4 ಸಮಾಜದ ಪ್ರಚಲಿತ ಸ್ಥಿತಿ ಗತಿ (ಸ್ಥಾನಮಾನ)

1.4.1 ಪ್ರಚಲಿತ ಸಾಮಾಜಿತ ವಿದ್ಯಮಾನಗಳು ಮತ್ತು ಸವಾಲುಗಳು

1.4.2 ತಾರತಮ್ಯವುಳ್ಳ ಸಮಾಜದಲ್ಲಿ ಸಮಾಜವಿಜ್ಞಾನ ವ್ಯಾಪ್ತಿ

1.5 ಸಮಾಜವಿಜ್ಞಾನ ಘಟಕಾಂಶಗಳು

1.5.1 ಸಮಾಜವಿಜ್ಞಾನದ ಕುಟುಂಬದಡಿ ಪರಿಗಣಿಸಲಾದ ವಿಷಯಗಳು

1.5.2 ಶಾಲಾ ಮಟ್ಟದಲ್ಲಿ ಸಮಾಜವಿಜ್ಞಾನದ ಬೋಧನಾ ಘಟಕಾಂಶಗಳು

1.6 ಸಮಾಜವಿಜ್ಞಾನದಲ್ಲಿ ಅಂತಶಾಸ್ತ್ರೀಯ ಮತ್ತು ಸಮನ್ವಯ ದೃಷ್ಟಿಕೋನಗಳು

1.6.1 ಸಮಾಜವಿಜ್ಞಾನದಲ್ಲಿ ಅಂತಶಾಸ್ತ್ರೀಯ ದೃಷ್ಟಿಕೋನ

1.6.2 ಸಮಾಜವಿಜ್ಞಾನದಲ್ಲಿ ಸಮನ್ವಯ ದೃಷ್ಟಿಕೋನ

1.7 ಸಾರಾಂಶಗೊಳಿಸೋಣ

1.8 ಪಾರಿಭಾಷಿಕ ಶಬ್ದಗಳು / ಸಂಕ್ಷಿಪ್ತರೂಪಗಳು

1.9 ನಿಮ್ಮ ಪ್ರಗತಿ ಪರಿಶೀಲಿಸಿ – ಉತ್ತರಗಳು

1.10 ಪರಾಮರ್ಶನಕ್ಕೆ ಸಲಹೆಗಳು

1.11 ಘಟಕಾಂತ್ಯದ ಅಭ್ಯಾಸಗಳು

## 1.0 ಪೀಠಿಕೆ / ಪ್ರಸ್ತಾವನೆ

ಸಮಾಜವಿಜ್ಞಾನವು ಮಹಿಳೆ/ಪರುಷರು ತನ್ನ ಸಾಮಾಜಿಕ ಸಾಂಸ್ಕೃತಿಕ ಪರಿಸರದೊಂದಿಗೆ ಹೊಂದಿರುವ ಸಂಬಂಧವನ್ನು ಅಧ್ಯಯನ ಮಾಡುವ ಜ್ಞಾನದ ಕ್ಷೇತ್ರವಾಗಿದೆ. ಒಂದು ಔಪಚಾರಿಕ ಅಧ್ಯಯನ ಕ್ಷೇತ್ರವಾಗಿ (ಬಹುಮಟ್ಟಿಗೆ ಉನ್ನತ ಶಿಕ್ಷಣ / ವಿಶ್ವವಿದ್ಯಾಲಯ ಶಿಕ್ಷಣದ ಅಧ್ಯಯನ ಕ್ಷೇತ್ರವಾಗಿ) ಸಮಾಜವಿಜ್ಞಾನವು ಹದಿನೆಂಟನೆಯ ಶತಮಾನದಲ್ಲಿಯೇ ಕಂಡುಬಂದಿದೆ. 20 ನೆಯ ಶತಮಾನದಿಂದೀಚೆಗೆ ಭಾರತವೂ ಸೇರಿದಂತೆ ಜಗತ್ತಿನ ಬಹುತೇಕ ರಾಷ್ಟ್ರಗಳಲ್ಲಿ ಶಾಲಾ ಪಠ್ಯಕ್ರಮದ ಭಾಗವಾಗಿ ಹೋಗಿದೆ. ನೀವು ಶಾಲೆಯಲ್ಲಿದ್ದಾಗ ನಿಮ್ಮ ಶಾಲೆಯ ವಿಷಯಗಳ ಭಾಗವಾಗಿ ಸಮಾಜ ವಿಜ್ಞಾನ (ಸಮಾಜ–ಅಧ್ಯಯನ) ವನ್ನು ಅಧ್ಯಯನ ಮಾಡಿರುವಿರೆಂಬುದು ನೆನಪಾಗಬಹುದು. ಈ ಘಟಕದಲ್ಲಿ, ಸಮಾಜ ವಿಜ್ಞಾನದ ವಿಕಾಸ ಹಾಗೂ ಕಲ್ಪನೆಗಳ ವಿಶೇಷ ಉಲ್ಲೇಖದೊಂದಿಗೆ ಅದರ ಸ್ವರೂಪ ವಿವಿಧ ಕಾಲಘಟ್ಟಗಳಲ್ಲಿ ಸಮಾಜ ವಿಜ್ಞಾನ, ಸಮಾಜದ ಪ್ರಚಲಿತ ಸ್ಥಾನಮಾನ, ಸಮಾಜ ವಿಜ್ಞಾನದ ಘಟಕಾಂಶಗಳು, ಮತ್ತು ಸಮಾಜ ವಿಜ್ಞಾನದಲ್ಲಿ ಅಂತಶಾಸ್ತ್ರೀಯ ಮತ್ತು ಸಮನ್ವಯ ದೃಷ್ಟಿಕೋನಗಳ ಪರಿಚಯ ಆಗಲಿದೆ ಈ ಘಟಕದಲ್ಲಿ ನಾವು ತಾತ್ವಿಕ / ಸೈದ್ಧಾಂತಿಕ ಚರ್ಚೆಗಳು ಮತ್ತು ವಾದಗಳ ನೈಜ ಉದಾಹರಣೆಗಳೂ ಮತ್ತು ರೂಢಿಗಳ ಮೂಲಕ ಸಮಾಜವಿಜ್ಞಾನದ ಸ್ವರೂಪವನ್ನು ವಿವರಿಸಲಿದ್ದೇವೆ.

ಈ ಘಟಕದಲ್ಲಿ ಬಳಸಿರುವ ಭಿತ್ತಿಚಿತ್ರಗಳನ್ನು ತಪನ್‌ಕುಮಾರ್ ಬಸಂತಿಯಾ (2006) ಅವರ ಪ್ರೌಢಪ್ರಬಂಧದಿಂದ ತೆಗೆದುಕೊಳ್ಳಲಾಗಿದೆ.

## 1.1 ಕಲಿಕಾ ಉದ್ದೇಶಗಳು

ಈ ಘಟಕ ಅಧ್ಯಯನದ ನಂತರ ನೀವು ಗಳಿಸುವ ಸಾಮರ್ಥ್ಯಗಳು

- ಸಮಾಜ ವಿಜ್ಞಾನದ ವಿಕಾಸವನ್ನು ವಿವರಿಸುವುದು,
- ಸಮಾಜ ವಿಜ್ಞಾನದ ಕಲ್ಪನೆಯನ್ನು ಮತ್ತು ಸಮಾಜ ಅಧ್ಯಯನದೊಡನೆ ಅದರ ಸಂಬಂಧವವನ್ನು ವ್ಯಾಖ್ಯಾನಿಸುವುದು.
- ಹಿರಿಯ ಪ್ರಾಥಮಿಕ ಶಾಲಾ ಪಠ್ಯಕ್ರಮದಲ್ಲಿ ಸಮಾಜ ವಿಜ್ಞಾನದ ಸ್ಥಾನವನ್ನು ವಿವರಿಸುವುದು.
- ಪೂರ್ವ ಆಧುನಿಕ (ಆಧುನಿಕ – ಪೂರ್ವ) ಮತ್ತು ಆಧುನಿಕ ಹಾಗೂ ಸಮಕಾಲೀನ ಜಗತ್ತಿನಲ್ಲಿ ಸಮಾಜ ವಿಜ್ಞಾನದ ಸ್ವರೂಪವನ್ನು ವಿವರಿಸುವುದು (ವಿಷಧೀಕರಿಸುವುದು)
- ವಿವಿವಧ ಕಾಲಘಟ್ಟಗಳಲ್ಲಿ ಸಮಾಜ ವಿಜ್ಞಾನ ಕುರಿತ ಭಾರತದ ದೃಷ್ಟಿಕೋನಗಳನ್ನು ಚರ್ಚಿಸವುದು.
- ಪ್ರಚಲಿತ ಸಾಮಾಜಿಕ ವಿದ್ಯಮಾನಗಳ ಮತ್ತು ಸವಾಲುಗಳಿಗೆ ಸಂಬಂಧಿಸಿದಂತೆ ಸಮಾಜ ವಿಜ್ಞಾನದ ಸ್ಥಾನ

ಮತ್ತು ವ್ಯಾಪಿಯನ್ನು ಸಮರ್ಥಿಸುವುದು.

- ಸಮಾಜ ವಿಜ್ಞಾನದ ಕುಟುಂಬ ದ ಪರಿಗಣಿಸಲ್ಪಟ್ಟ ವಿಷಯಗಳ ಪಟ್ಟಿ ಮಾಡುವುದು.
- ಶಾಲಾ ಮಟ್ಟದಲ್ಲಿ ಸಮಾಜ ವಿಜ್ಞಾನದ ಬೋಧನಾ ಘಟಕಾಂಶಗಳನ್ನು ಗುರುತಿಸುವುದು ಮತ್ತು
- ಸಮಾಜ ವಿಜ್ಞಾನದಲ್ಲಿ ಅಂತಶಾಸ್ತ್ರೀಯ ಹಾಗೂ ಸಮನ್ವಯ ದೃಷ್ಟಿಕೋನಗಳನ್ನು ವಿವರಿಸುವುದು.

## 1.2 ಸಮಾಜ ವಿಜ್ಞಾನ: ವಿಕಾಸ ಮತ್ತು ಪರಿಕಲ್ಪನೆ

ಸಮಾಜ ವಿಜ್ಞಾನವು ಮೂಲತಃ ಮಾನವ ಸಮಾಜ ಅಥವಾ ಮಾನವ ಸಂಬಂಧವನ್ನು ಅಧ್ಯಯನ ಮಾಡುವ ಜ್ಞಾನದ ಒಂದು ಶಾಖೆ / ಕ್ಷೇತ್ರವಾಗಿದೆ. ಸಮಾಜ ವಿಜ್ಞಾನವು ಮಾನವ ಜೀವನದ ಸಾಮಾಜಿಕ ವರ್ತನೆಯ ಅಧ್ಯಯನವಾಗಿದೆ ಆರ್ಥಿಕ ವರ್ತನೆ, ರಾಜಕೀಯ ವರ್ತನೆ, ಸಾಂಸ್ಕೃತಿಕ ವರ್ತನೆ ಮತ್ತು ಪರಂಪರೆ ರೂಢಿರೀತಿಗಳು ನೀತಿಗಳು ಸಮಾಜದಲಲಿ ಅನುಸರಿಸಲಾಗುವ ಮೌಲ್ಯ ವಿನ್ಯಾಸಗಳೇ ಮುಂತಾದವು ಮಾನವ ಜೀವನದ ಸಾಮಾಜಿಕ ವರ್ತನೆಯ ವಿವಿಧ ಕೇಂದ್ರ ಘಟಕಾಂಶಗಳಾಗಿವೆ. ಸಮಾಜ ವಿಜ್ಞಾನವು ವಿಶ್ವವಿದ್ಯಾಲಯ / ಉನ್ನತ ಶಿಕ್ಷಣ ಹಾಗೂ ಶಾಲಾ ಪಠ್ಯಕ್ರಮದ ಮಹತ್ವದ ಘಟಕಾಂಶವನ್ನು ಆಕ್ರಮಿಸಿದೆ. ವಿಶ್ವವಿದ್ಯಾಲಯ / ಉನ್ನತ ಶಿಕ್ಷಣ / ಪ್ರೌಢಶಾಲಾ ಶಿಕ್ಷಣ ಮಟ್ಟದಲ್ಲಿ ಇತಿಹಾಸ ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಮಾನವಶಾಸ್ತ್ರ ಇತ್ಯಾದಿ ವಿವಿಧ ಸಮಾಜ ವಿಜ್ಞಾನ ವಿಷಯಗಳನ್ನು ವಿದ್ಯಾರ್ಥಿಗಳಿಗೆ ಸ್ವತಂತ್ರ / ಐಚ್ಛಿಕ ವಿಷಯಗಳಾಗಿ ಭೋಧಿಸಲಾಗುತ್ತದೆ. ಶಾಲೆ ಅಥವಾ ಕಿರಿಯ ಶಾಲಾ ಮಟ್ಟದಲ್ಲಿ ಸಮಾಜ ಅಧ್ಯಯನ (ಅಥವಾ ಸಮಾಜ ವಿಜ್ಞಾನ) ಎಂಬುದಾಗಿ ಒಂದೇ ಸಂಯೋಜಿಕ (ಸಂಯುಕ್ತ) ಬೋಧನಾ ಕ್ಷೇತ್ರ / ವಿಷಯದ ರೂಪದಲ್ಲಿ ವಿವಿಧ ಸಮಾಜ ವಿಜ್ಞಾನ ವಿಷಯಗಳನ್ನು ಬೋಧಿಸಲಾಗುತ್ತದೆ.

### 1.2.1 ಸಮಾಜ ವಿಜ್ಞಾನ (ಗಳ) ವಿಕಾಸ

ಸಮಾಜ ವಿಜ್ಞಾನವು 18ನೆಯ ಶತಮಾನದಲ್ಲಿ ಒಂದು ಔಪಚಾರಿಕ ಅಧ್ಯಯನ ಕ್ಷೇತ್ರವಾಗಿ ವಿಕಾಸ ಹೊಂದಿ ವಿಶ್ವವಿದ್ಯಾಲಯ / ಉನ್ನತ ಶಿಕ್ಷಣದ ಭಾಗವಾಯಿತಾದರೂ ಸಮಾಜ ಅಧ್ಯಯನವು (ವಿವಿಧ ಸಮಾಜ ವಿಜ್ಞಾನ ವಿಷಯಗಳಿಂದ ತನ್ನ ವಿಷಯ ವಸ್ತುವನ್ನು ಆಯ್ದುತೆಗೆದುಕೊಳ್ಳುವ) ಶಾಲೆ ಅಥವಾ ಕಿರಿಯಹಂತದ ಶಾಲಾ ಪಠ್ಯಕ್ರಮದಲ್ಲಿ ಆಳವಡಿಸಿಕೊಳ್ಳಲು 20 ನೆಯ ಶತಮಾನದಲ್ಲಿ ವಿಕಾಸಗೊಂಡಿತು.

ಸಮಾಜ ವಿಜ್ಞಾನದ ವಿಕಾಸ ಮತ್ತು ಬೆಳವಣಿಗೆಗಳು ಆಧುನೀಕರಣ, ಔದ್ಯೋಗೀಕರಣ, ಪುನರುತ್ಥನ, ನಗರೀಕರಣ, ವಿಜ್ಞಾನದ ಬೆಳವಣಿಗೆ ಮತ್ತಿತರ ಅನೇಕ ಅಭಿವೃದ್ಧಿಗಳ ಉಪಉತ್ಪನ್ನವಾಗಿ ರೂಪುಗೊಂಡಿವೆ. 18ನೆ ಶತಮಾನದ ಅಥವಾ ಅದರ ಅವಧಿಯಲ್ಲಿ ಮತ್ತು ಅನಂತರದ ಕಾಲಕ್ಕೆ ಮೊದಲು ಮಾನವ ಜೀವನ ಮತ್ತು ಜೀವನ ಕ್ರಮದಲ್ಲಿ ಎಂದೂ ಕಾಣದಂತಹ ಹಲವು ಬದಲಾವಣೆಗಳು ಉಂಟಾದವು. ಇಟಲಿ ಮತ್ತಿತರ ಯುರೋಪಿಯನ್ ದೇಶಗಳಲ್ಲಿನ ಪುನರುತ್ಥಾನ (ಪುನರುಜ್ಜೀವನ) 1789 ರ ಫ್ರಾನ್ಸ್‌ನ ಕ್ರಾಂತಿ, 1767 ರಿಂದ ಪ್ರಾರಂಭವಾದ ಕೈಗಾರಿಕಾ ಕ್ರಾಂತಿಗಳು 1776 ಅಮೇರಿಕಾದ ಸ್ವಾತಂತ್ರ್ಯ ಸಂಗ್ರಾಮ, ಹೊಸ ರೂಪದ ಬಂಡವಾಳ ಶಾಹಿಯ ವಿಕಾಸ, ನೈಸರ್ಗಿಕ ವಿಜ್ಞಾನದ ಅಪಾರ ಅಭಿವೃದ್ಧಿ ಇತ್ಯಾದಿಗಳು.

ಪ್ರಪಂಚದಲ್ಲಿ ಮಾನವ ಸಮಾಜಕ್ಕೆ ಸಂತೋಷ ಮತ್ತು ಕಷ್ಟಗಳೆರಡನ್ನು ಉಂಟು ಮಾಡಿದವು. ಉದಾಹರಣೆಗೆ ಧನಾತ್ಮಕ ರೂಪದಲ್ಲಿ ವಾಣಿಜ್ಯ ಬೆಳವಣಿಗೆ ಸಾರಿಗೆ ಮತ್ತು ಸಂವಹನ ಅಭಿವೃದ್ಧಿ ಸೌಕರ್ಯಗಳ ಹೆಚ್ಚಳ, ಶಿಕ್ಷಣ ಮತ್ತು ಆರೋಗ್ಯ ಸ್ಥಿತಿಗಳ ಸುಧಾರಣೆ, ಆರ್ಥಿಕ ಸ್ಥಿತಿಯ ಅಭಿವೃದ್ಧಿ ಮುಂತಾದವು ಕಂಡುಬಂದವು ಮತ್ತು ಋಣಾತ್ಮಕ ರೂಪದಲ್ಲಿ ಸಮಾಜಜೀವನದಲ್ಲಿ ಸಂಕೀರ್ಣತೆಯ ಬೆಳವಣಿಗೆ, ರಾಜಕೀಯ ಅವ್ಯವಸ್ಥೆ, ಸಾಮಾಜಿಕ ಅಸ್ತವ್ಯಸ್ತತೆ ಮತ್ತು ಅಶಾಂತಿ, ಭೌದ್ಧಿಕ ಬಿಕಟ್ಟು, ಜನರಲ್ಲಿ ಆರೋಗ್ಯಕರವಲ್ಲದ ಸ್ಪರ್ಧೆ, ಇತ್ಯಾದಿಗಳು ಕಂಡುಬಂದವು. ಈ ಎಲ್ಲ ಸಮಸ್ಯೆಗಳನ್ನು ಹಾಗೂ ಸವಾಲುಗಳನ್ನು ಎದುರಿಸಲು ಸಮಾಜ ವಿಜ್ಞಾನವು ಉಗಮಿಸಿತು ಹಾಗೂ ಶಿಕ್ಷಣ / ಕಲಿಕೆ ವ್ಯವಸ್ಥೆಯ ಒಂದು ಭಾಗವಾಯಿತು.

ಹದಿನೆಂಟನೆಯ ಶತಮಾನದಲ್ಲಿ ಆಧುನಿಕ ಸಮಾಜದ ಗುಣ ಲಕ್ಷಣ ಮತ್ತು ಭವಿಷ್ಯವನ್ನು ಗ್ರಹಿಸುವ ಪ್ರಯತ್ನದಲ್ಲಿ ಸಮಾಜ ವಿಜ್ಞಾನದ ಉಗಮವಾಯಿತು (ರಾಸ್, 1991, ಪುಟ–3) ಮಾಂಟೆಸ್ಕ್ಯೂರವರ 'ಸ್ಪೀರಿಟ್ ಆಫ್ ದಿ ಲಾ

**(1748)** ಆಡಮ್ ಸ್ಮಿತ್‌ರವರ ವಾಲತ್ ಆಪ್ ನೇಷನ್ಸ್ **(1776)** ಕಾಂಡೋರ್‌ಸೆಟ್‌ರವರ **outline of an historical view of the progress of the Human kind (1795)** ಮತ್ತು ಜೆ.ಜಿ. ಹರ್ಡ್‌ರವರ **Idea towards a philosophy of history (1784-91)** ಕೃತಿಗಳು ಸಮಾಜ ವಿಜ್ಞಾನ ಕುರಿತ ಆದರ್ಶಪ್ರಾಯ ಪಠ್ಯಗಳಾಗಿದ್ದುವು. ಆಧುನಿಕ ಸಮಾಜ ಹಾಗೂ ಅದರ ಊಳಿಗಮಾನ್ಯ ಮತ್ತು ಪ್ರಾಚೀನ ರೂಪಗಳ ನಡುವಿನ ವ್ಯತ್ಯಾಸವನ್ನು ಗಮನಿಸುತ್ತ, ಈ ಸಮಾಜವಿಜ್ಞಾನಿಗಳು ಆಧುನಿಕ ಸಮಾಜವನ್ನು
ಭವಿಷ್ಯದ ಕಡೆಗೆ ಮಾರ್ಗದರ್ಶಿಸಬಲ್ಲ ಸಮಾಜ ವಿಜ್ಞಾನವನ್ನು ಕಲ್ಪಿಸಿಕೊಂಡರು.

ಹೆಚ್ಚುತ್ತಿರುವ ಔದ್ಯೋಗೀಕರಣ ಆಧುನೀಕರಣ, ವೈಜ್ಞಾನಿಕ ಅಭಿವೃದ್ಧಿ ಇತ್ಯಾದಿಗಳಿಂದಾಗಿ ಹಲವಾರು ಹೊಸ ಸಾಮಾಜಿಕ ಸಮಸ್ಯೆಗಳು ಉದ್ಭವಿಸುತ್ತಿವೆ ಹಾಗೂ ಇಡೀ ಸಾಮಾಜಿಕ ವ್ಯವಸ್ಥೆಯ ಮೇಲೆ ಪರಿಣಾಮ ಬೀರಿ ಅದನ್ನು ನಿಷ್ಕ್ರಿಯಗೊಳಿಸುತ್ತಿವೆ ಔದ್ಯೋಗೀಕರಣ ಮತ್ತು ಆಧುನೀಕರಣದ ಕ್ಷಿಪ್ರ ಬೆಳವಣಿಗೆಯು ಕಾಯಿಲೆಗಳು, ಸಾಮಾಜಿಕ ಪರಾಧೀನತೆ, ಕಾರ್ಮಿಕರ ಶೋಷಣೆ ಮುಂತಾದ ಬಹುಸಂಖ್ಯಾತ ಸಾಮಾಜಿಕ ಸಮಸ್ಯೆಗಳನ್ನು ಉಂಟು ಮಾಡಿದರೆ ಆಧುನಿಕ ವಿಜ್ಞಾನವು ಸೂಕ್ಷ್ಮಾಣು ಯುದ್ಧ, ಮಾನವತೆಯ ವಿನಾಶಕ್ಕಾಗಿ ಅಣುಗಳು, ಹಲವಾರು ಅಪಾಯಕಾರಿ ರಾಸಾಯನಿಕ ಮತ್ತು ಪರಮಾಣು ಪ್ರತಿಕ್ರಿಯೆಗಳು ಮುಂತಾದವುನ್ನು ಸೃಷ್ಟಿಸುತ್ತವೆ. 20ನೇ ಶತಮಾನದ ಎರಡು ಮಹಾಯುದ್ಧಗಳು (ಎಂದರೆ ಪ್ರಥಮ ಮತ್ತು ದ್ವಿತೀಯ ಜಾಗತಿಕ ಯುದ್ಧ) ಮಾನವ ಜನಾಂಗಕ್ಕೆ ಅನಿರ್ವಚನೀಯ ದುಃಖವನ್ನುಂಟು ಮಾಡಿದುವು. ಈ ಎರಡು ಮಹಾಯುದ್ಧಗಳ ಜೊತೆಗೆ ಮಾನವ ಜನಾಂಗಕ್ಕೆ ನಿಜವಾಗಿಯೂ ಹಾನಿಕರವಾದ ಅನೇಕ ಯುದ್ಧಗಳು ಪ್ರಪಂಚದ ವಿವಿಧ ಬಾಗಗಳಲ್ಲಿ ನಡೆದಿವೆ / ನಡೆಯುತ್ತಿವೆ. ವಿಜ್ಞಾನ ನಗರೀಕರಣ ಔದ್ಯೋಗೀಕರಣ ಮುಂತಾದುವುಗಳ ದುರುಪಯೋಗವು ವಾಸ್ತವವಾಗಿ ಈ ಜಗತ್ತಿನಲ್ಲಿ ಮಾನವ ಜನಾಂಗಕ್ಕೆ ಬೆದರಿಕೆ ಉಂಟು ಮಾಡಿವೆ. 1930 ರಿಂದ 1940ರ ವೆರೆಗಿನ ತೀವ್ರ ಆರ್ಥಿಕ ಕುಸಿತದ ಅನುಭವವು ಪ್ರಪಂಚದ ಜನತೆಯಲ್ಲಿ ಅಸುರಕ್ಷತೆ, ಭಯ, ಸಂದೇಹಗಳ ಭಾವನೆಯನ್ನು ಸೃಷ್ಟಿಸಿತು.

ಕಳೆದ ನೂರು ವರ್ಷಗಳಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನಗಳಲ್ಲಿ ಉಂಟಾದ ಕ್ಷಿಪ್ರ ಬೆಳವಣಿಗೆಯ ಹಲವು ಧನಾತ್ಮಕ ಪರಿಣಾಮಗಳನ್ನು ಹೊಂದಿದ್ದರು ಅದು ಅನೇಕ ಹೊಸ ಸಾಮಾಜಿಕ ಸಮಸ್ಯೆಗಳನ್ನು ಸೃಷ್ಟಿಸಿದೆ. ಸಮಾಜ ವಿಜ್ಞಾನವು ಒಂದೆಡೆ ವಿಜ್ಞಾನ, ಔದ್ಯೋಗೀಕರಣ ಮತ್ತು ಆಧುನೀಕರಣ ಇತ್ಯಾದಿಗಳ ದುಷ್ಪರಿಣಾಮಗಲನ್ನು ತಡೆದು ಪ್ರತಿಬಂಧಿಸಲು ಮತ್ತೊಂದೆಡೆ ಉತ್ತಮ ಭವಿಷ್ಯಕ್ಕಾಗಿ ಆಧುನಿಕ ಸಮಾಜವನ್ನು ಮಾರ್ಗದರ್ಶಿಸಲು ಸಮಾಜ ವಿಜ್ಞಾನ ವಿಷಯವು ಹೊರಹೊಮ್ಮಿದೆ. ಇಂದಿನದಾರ್ಶನಿಕರು, ರಾಜನೀತಿಜ್ಞರು, ವಿಜ್ಞಾನಿಗಳು, ರಾಜಕಾರಣಿಗಳು ಹಾಗೂ ಇತರ ಅನೇಕ ಬುದ್ಧಿಜೀವಿಗಳು ಭೌತ ವಿಜ್ಞಾನಗಳು ಅಥವಾ ಜೈವಿಕ ವಿಜ್ಞಾನವೂ ಸೇರಿದಂತೆ ಇತರ ವಿಜ್ಞಾನಗಳಿಗಿಂತ ಸಮಾಜ ವಿಜ್ಞಾನ ಯಾವ ರೀತಿಯಲ್ಲೂ ಕೀಳಲ್ಲ ಎಂಬುದನ್ನು ಮನಗಂಡಿದ್ದಾರೆ. ಒಂದೇ ಒಂದು ಸ್ಫೋಟದಿಂದ ಜಗತ್ತಿನ ಸಂಪೂರ್ಣ ಮಾನವ ಜನಾಂಗವನ್ನೇ ನಾಶಮಾಡುವಂತೆ ಅಣುವಿನ ಶಕ್ತಿಗಳನ್ನು ಸಂಘಟಿಸಬಲ್ಲ ಶಕ್ತಿ ತನಗಿದೆ ಎಂದು ಸಾಮಾನ್ಯ ವಿಜ್ಞಾನವು ಸಾಬೀತುಪಡಿಸಿದೆ. ಇಂತಹ ಶಕ್ತಿಗಳಿಂದ ಮಾನವ ಸಮಾಜದ ವಿನಾಶವನ್ನು ತಡೆಯಲು ಸಮಾಜ ವಿಜ್ಞಾನದ ಅಧ್ಯಯನ ಅವಶ್ಯವಾಗಿದೆ.

ಆಧುನಿಕ ಸಮಾಜಕ್ಕೆ ಸಮಾಜ ವಿಜ್ಞಾನವು ಅತಿ ಹೆಚ್ಚಿನ ಸುಸಂಗತತೆ ಹೊಂದಿರುವುದರಿಂದ ಅದು ಆಧುನಿಕ ಕಾಲದ ಶಿಕ್ಷಣ / ಪಠ್ಯಕ್ರಮ ವ್ಯವಸ್ಥೆಯ ಪ್ರಮುಖ ಘಟಕ / ಭಾಗವಾಗುತ್ತದೆ 18ನೇಯ ಶತಮಾನದ ಆದಿಯಿಂದಲೂ ಸಮಾಜ ವಿಜ್ಞಾನವು ವಿಶ್ವದಾದ್ಯಂತ ವಿಶ್ವವಿದ್ಯಾಲಯ / ಉನ್ನತ ಶಿಕ್ಷಣ ವ್ಯವಸ್ಥೆಯ ಭಾಗವಾಗಿ ಹೋಗಿದೆ. ವ್ಯಕ್ತಿಗಳಲ್ಲಿ ಆರೋಗ್ಯಕರ ಸಾಮಾಜಿಕ ಮತ್ತು ಪ್ರಜಾಸತ್ತಾತ್ಮಕ ಪೌರತ್ವದ ಗುಣಗಳನ್ನು ಬೆಳೆಸುವಲ್ಲಿ ಸಮಾಜ ವಿಜ್ಞಾನದ ಮಹತ್ವವನ್ನು ಮನಗಂಡು ವಿಶ್ವದ ಬಹುತೇಕ ದೇಶಗಳು ಸಮಾಜ ಅಧ್ಯಯನ ಎಂಬ ಹೆಸರಿನಿಂದ ಅಥವಾ, ಸಮಾಜ ವಿಜ್ಞಾನ ಎಂಬ ಹೆಸರಿನಿಂದ ಶಾಲಾಪಠ್ಯಕ್ರಮದಲ್ಲಿ ಅಳವಡಿಸಿವೆ. ಈ ಘಟಕದ ಮುಂದಿನ ಭಾಗಗಳಲ್ಲಿ ಸಮಾಜ ವಿಜ್ಞಾನವು ಶಾಲಾ ಶಿಕ್ಷಣ ಹಾಗೂ ಉನ್ನತ ಶಿಕ್ಷಣ ಪಠ್ಯಕ್ರಮದ ಘಟಕಾಂಶವಾಗಿದೆ ಎಂಬುದನ್ನು ವಿವರವಾಗಿ ಕಲಿಯುವಿರಿ.

### 1.2.2 ಸಮಾಜ ವಿಜ್ಞಾನದ ಪರಿಕಲ್ಪನೆ ಹಾಗೂ ಸಮಾಜ ಅಧ್ಯಯನದ ಪರಿಕಲ್ಪನೆಯೊಂದಿಗೆ ಅದರ ಸಂಬಂಧ

ಪರಿಕಲ್ಪನಾತ್ಮಕವಾಗಿ, ಸಮಾಜ ವಿಜ್ಞಾನ ಮತ್ತು ಸಮಾಜ ಅಧ್ಯಯನಗಳು ಪರಸ್ಪರ ಸಂಬಂಧ ಹೊಂದಿವೆ ಹಾಗೂ ಅನೇಕ ಅಂಶಗಳಲ್ಲಿ ಭಿನ್ನವಾಗಿಯೂ ಇದೆ. ಇವುಗಳ ನಡುವೆ ಇರುವ ಪರಿಕಲ್ಪನಾತ್ಮಕ ಸಂಬಂಧಗಳನ್ನು ಹಾಗೂ

ಕಂಡುಬರುವ ವ್ಯತ್ಯಾಸಗಳನ್ನು ಪರಿಶೀಲಿಸೋಣ.

ಸಮಾಜ ವಿಜ್ಞಾನದ ಪರಿಕಲ್ಪನೆ

ಸಮಾಜ ವಿಜ್ಞಾನವು ವಿಶಾಲವಾದ ಸಾಮಾಜಿಕ – ಸಾಂಸ್ಕೃತಿಕ ಅಲೆಸಾಲಿನಲ್ಲಿ (ವರ್ಣಪಟಲ) ಮಾನವ ವ್ಯವಹಾರಗಳಿಗೆ ಸಂಬಂಧಿಸಿದ ಜ್ಞಾನರಾಶಿಯಾಗಿದೆ. ಸಮಾಜ ವಿಜ್ಞಾನವು ಪ್ರೌಢಶಾಲಾ / ಉನ್ನತ ಶಿಕ್ಷಣ ಪಠ್ಯಕ್ರಮದ ಮುಖ್ಯ ಘಟಕಾಂಶವಾಗಿದೆ. ಪ್ರೌಢಶಾಲಾ / ಉನ್ನತ ಶಿಕ್ಷಣ ಹಂತಗಳಲ್ಲಿ ಇತಿಹಾಸ, ಮಾನವಶಾಸ್ತ್ರ, ತತ್ವಶಾಸ್ತ್ರ, ಅರ್ಥಶಾಸ್ತ್ರ ಮುಂತಾದ ಸಮಾಜ ವಿಜ್ಞಾನ ವಿಷಯಗಳು ಸ್ವತಂತ್ರ ಸ್ಥಾನಮಾನ ಹೊಂದಿವೆ. ಚಾರ್ಲ್ಸ್ ಬಿಯರ್ಡ್ ಮತ್ತು ಜೇಮ್ಸ್ ಹೈ ರವರ ಕೆಳಗಿನ ವ್ಯಾಖ್ಯೆಗಳು ಸಮಾಜ ವಿಜ್ಞಾನದ ಪರಿಕಲ್ಪನೆಗೆ ಸ್ಪಷ್ಟತೆ ಸೇರಿಸಬಹುದು.

ಚಾಲ್ಸ್ ಬಿಯರ್ಡ್: ಸಮಾಜವಿಜ್ಞಾನವು ಕಡ್ಡಿಗಳು, ಕಲ್ಲುಗಳು, ನಕ್ಷತ್ರಗಳು ಮತ್ತು ಭೌತವಸ್ತುಗಳಿಗಿಂತ ಭಿನ್ನವಾದ, ಮಾನವ ವ್ಯವಹಾರಗಳಿಗೆ ಸಂಬಂಧಿಸಿದ ಜ್ಞಾನರಾಶಿ ಮತ್ತು ಚಿಂತನೆಯಾಗಿದೆ. (**S.K.Kochhar,** The teaching of social studies, 1984 first edition)

ಜೇಮ್ಸ್ ಹೈ: ಸಮಾಜ ವಿಜ್ಞಾನವು ಸಾಮಾಜಿಕ ಪ್ರತಿಕ್ರಿಯೆ ಉಂಟುಮಾಡುವ ಭೌತಿಕ ಮತ್ತು ಭೌತಿಕವಲ್ಲದ ಪ್ರಚೋದನೆಗಳ ಏಕಕಾಲದ ಹಾಗೂ ಪರಸ್ಪರ ಕ್ರಿಯೆಗಳನ್ನು ಗುರುತಿಸುವ ಕಲಿಕೆಯ ಮತ್ತು ಅಧ್ಯಯನದ ರಾಶಿಯಾಗಿದೆ. (**Dr. Y.K.Singh,** Teaching of Social studies, 2008)

ಈ ಕೆಳಗಿನ ಅಂಶಗಳು ಸಮಾಜ ವಿಜ್ಞಾನದ ಸ್ವರೂಪವನ್ನು ನಿರೂಪಿಸಬಹುದು.

1. ಮಾನವ ಚಟುವಟಿಕೆಯ ಮೇಲೆ ನೇರ ಸಂಬಂಧವೆಂದರೆ, ಸಮಾಜ ವಿಜ್ಞಾನವು, ವಿವಿಧ ಸಾಮಾಜಿಕ – ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಮಾನವ ಚಟುವಟಿಕೆಗಳಿಗೆ ನೇರ ಸಂಬಂಧ ಹೊಂದಿರುವ ಜ್ಞಾನದ ಅಂಶಗಳಾಗಿವೆ.
2. ಮಾನವ ಸಮಾಜದ ಮುಂದುವರೆದ ಅಧ್ಯಯನ : ಸಮಾಜ ವಿಜ್ಞಾನವು ಮಾನವ ಸಮಾಜದ ಉನ್ನತ ಮಟ್ಟದ
ಅಧ್ಯಯನವಾಗಿದೆ. ಮತ್ತು ಸಾಮಾನ್ಯವಾಗಿ ಅದನ್ನು ಉನ್ನತ ಶಿಕ್ಷಣ ಮಟ್ಟದಲ್ಲಿ ಭೋಧಿಸಲಾಗುತ್ತದೆ.
3. ಮಾನವ ಸಂಬಂಧಗಳ ಬಗ್ಗೆ ಸತ್ಯಗಳನ್ನು ಕಂಡುಕೊಳ್ಳುವುದು. ಅಂತಿಮವಾಗಿ ಸಾಮಜಿಕ ಉಪಯುಕ್ತತೆ ಮತ್ತು ಜ್ಞಾನದ ಉನ್ನತೀಕರಣಗಳಿಗೆ ಕೊಡುಗೆ ನೀಡುವ ಮಾನವ ಸಂಬಂಧಗಳ ಬಗ್ಗೆ ಸತ್ಯಾಂಶಗಳನ್ನು ಕಂಡುಕೊಳ್ಳಲು ಸಮಾಜ ವಿಜ್ಞಾನಯತ್ನಿಸುತ್ತದೆ.

ಸಮಾಜ ಅಧ್ಯಯನದ ಪರಿಕಲ್ಪನೆ.

ಸಮಾಜ ಅಧ್ಯಯನದ ಪರಿಕಲ್ಪನೆ ಇತ್ತೀಚಿನದಾಗಿದೆ. ಸಮಾಜ ಅಧ್ಯಯನವು ಶಾಲಾ ಪಠ್ಯಕ್ರಮದ ಭಾಗವಾಗಿ ಪರಿಗಣಿಸುವ ಕಾರಣಕ್ಕಾಗಿ ಹುಟ್ಟಿ ವಿಕಾಸಗೊಂಡಿತು. ಸಮಾಜ ಅಧ್ಯಯನದ ವ್ಯಾಪಕ ಬಳಕೆಯು 1916 ರಿಂದ ಅಮೇರಿಕಾದಲ್ಲಿ ಆರಂಭವಾಯಿತು. ಭಾರತದಲ್ಲಿ ಅದರ ಬಳಕೆಯನ್ನು 1937 ರ ಗಾಂಧೀಜಿಯವ ಮೂಲ ಶಿಕ್ಷಣಕ್ಕೆ ಸಂಬಂಧಿಸಬಹುದಾಗಿದೆ.

ಸಮಾಜ ಅಧ್ಯಯನವು ಹಲವು ಸಾಮಾಜಿಕ ವಿಜ್ಞಾನಗಳಾದ ಇತಿಹಾಸ, ಭೂಗೋಳ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ ಇತ್ಯಾದಿಗಳಿಂದ ವಿಷಯವಸ್ತುವನ್ನು ಆಯ್ದುಕೊಂಡ ಬೋಧನಾ ಕ್ಷೇತ್ರವಾಗಿದೆ. ಸಮಾಜ ಅಧ್ಯಯನವು ಸಮಾಜ ವಿಷಯಗಳನ್ನು ಅಸಂಬದ್ಧವಾಗಿ ಒಟ್ಟುಗೂಡಿಸುವುದಿಲ್ಲ. ಬದಲಾಗಿ ವಿದ್ಯಾರ್ಥಿಗಳಿಗೆ ತಾವು ಜೀವಿಸುವ ಸಮಾಜ / ಪರಿಸರದೊಂದಿಗೆ ಮಾನವನ ಸಂಬಂಧವನ್ನು ಗ್ರಹಿಸಲು ಸಹಾಯಕವಾಗುವಂತೆ ಅರ್ಥಪೂರ್ಣವಾಗಿ ಸಮನ್ವಯಗೊಳಿಸಲಾಗುತ್ತದೆ. ಆರೋಗ್ಯಕರ ಸಾಮಾಜಿಕ ಜೀವನಕ್ಕೆ ಸಂಬಂಧಿಸಿದ ಸಾಮರ್ಥ್ಯಗಳನ್ನು ಬೆಳೆಸುವುದು ಸಮಾಜ ಅಧ್ಯಯನ ಕಲಿಕೆಯ ಮುಖ್ಯ ಗುರಿಯಾಗಿದೆ. ಸಮಾಜ ಅಧ್ಯಯನವು ಸಮಾಜದ ಪ್ರಾಯೋಗಿಕ ಅಂಶಗಳಿಗೆ ಸಂಬಂಧಿಸಿದೆ. ಜೇಮ್ಸ್‌ಹೈ ಮತ್ತು ಜಾನ್ ವಿ ಮೈಕೇಲ್‌ರವರು ನೀಡಿರುವ ಸಮಾಜ ಅಧ್ಯಯನ ಕುರಿತ ವ್ಯಾಖ್ಯೆಗಳನ್ನು ಗಮನಿಸೋಣ.

ಜೇಮ್ಸ್ ಹೈ: ಅತ್ಯಂತ ಸರಳವಾಗಿ ಹೇಳುವುದಾದರೆ, ಸಮಾಜ ಅಧ್ಯಯನವು ಸಮಾಜ ವಿಜ್ಞಾನದ ಸಂಶೋಧನೆಗಳ ಶಾಲಾ ಕನ್ನಡಿ ಆಗಿದೆ. ಸಮಾಜ ವಿಜ್ಞಾನಿಗಳು ಸಂಗ್ರಹಿಸಬಹುದಾದ ಇಂತಹ ಮಾಹಿತಿ / ದತ್ತಾಂಶಗಳನ್ನು ಎಲ್ಲ ತರಗತಿಗಳ ಮಕ್ಕಳಿಗಾಗಿ ಅಭಿವ್ಯಕ್ತಿಯ ಸೂಕ್ತ ಮಟ್ಟಗಳಿಗೆ ಸಮನ್ವಯಗೊಳಿಸಿ ಸರಳಗೊಳಿಸಲಾಗಿರುತ್ತದೆ. **(S.K. Kochar the teaching of social studies, 1984- First Edition)**

ಜಾನ್ ವಿ ಮೈಕೇಲ್ : ಸಮಾಜ ಅಧ್ಯಯನವು ಸಾಮಾಜಿಕ ಮತ್ತು ಭೌತಿಕ ಪರಿಸರದೊಂದಿಗೆ ಮಾನವ ಮತ್ತು ಆತನ ಅಂತರ್‌ಕ್ರಿಯೆಗೆ ಸಂಬಂಧಿಸಿದೆ, ಅದು ಮಾನವ ಸಂಬಂಧಗಳ ಜೊತೆ ವ್ಯವಹರಿಸುತ್ತದೆ. ಸಮಾಜ ಅಧ್ಯಯನದ ಮುಖ್ಯ

ಕಾರ್ಯವು ಶಿಕ್ಷಣದ ಮುಖ್ಯ ಉದ್ದೇಶಕ್ಕೆ ಸಮನಾಗಿದೆ – ಅದೆಂದರೆ ಪ್ರಜಾಸತ್ತಾತ್ಮಕ ಪೌರತ್ವದ ಬೆಳವಣಿಗೆ. (S.K. Kochhar the teaching of social studies, 1984- First Edition) ಈ ಕೆಳಕಂಡ ಅಂಶಗಳು ಸಮಾಜ ವಿಜ್ಞಾನದ ಸ್ವರೂಪವನ್ನು ನಿರೂಪಿಸಬಹುದು.

1. ಸಮಾಜ ಅಧ್ಯಯನವು ಸಾಮಾಜಿಕ – ಸಾಂಸ್ಕೃತಿಕ ಪರಿಸರಕ್ಕೆ ಸಂಬಂಧಿಸಿದಂತೆ ಮಾನವ ಅಧ್ಯಯನ ಕುರಿತಾಗಿದೆ.
2. ಸಮಾಜ ಅಧ್ಯಯನವು ವಿದ್ಯಾರ್ಥಿಗಳಲ್ಲಿ ಆರೋಗ್ಯಕರ ಸಾಮಾಜಿಕ / ಪ್ರಜಾಸತ್ತಾತ್ಮಕ ಜೀವನವನ್ನು ಪ್ರೋತ್ಸಾಹಿಸಲು ಶಾಲಾ ಮಟ್ಟದಲ್ಲಿ ಬೋಧಿಸುವುದಕ್ಕಾಗಿ ಒಂದು ಬೋಧನಾ ಕ್ಷೇತ್ರವಾಗಿ ಸಮಾಜ ವಿಜ್ಞಾನದಿಂದ ವಿಕಾಸಗೊಳಿಸಲಾಗಿದೆ.
3. ಸಮಾಜ ಅಧ್ಯಯನವು ವರ್ತಮಾನ, ಭೂತ ಮತ್ತು ಭವಿಷ್ಯಗಳ ನಡುವಿನ ಸಂಬಂಧಗಳನ್ನು ಪ್ರಮಾಣೀಕರಿಸುತ್ತದೆ.
4. ಸಮಾಜ ಅಧ್ಯಯನವು ಮಾನವ ಇತಿಹಾಸಕ್ಕಿಂತ ಹೆಚ್ಚಾಗಿ ಸಮಕಾಲೀನ ಮಾನವ ಜೀವನ ಮತ್ತು ಅದರ ಸಮಸ್ಯೆಗಳಿಗೆ ಹೆಚ್ಚು ಒತ್ತು ನೀಡುತ್ತಿದೆ.
5. ಸಮಾಜ ಅಧ್ಯಯನವು ವಿದ್ಯಾರ್ಥಿಗಳನ್ನು ಕುಟುಂಬ ಸಮುದಾಯ, ರಾಜ್ಯ, ರಾಷ್ಟ್ರ ಮತ್ತು ವಿಶಾಲವಾಗಿ ಸಂಪೂರ್ಣ ಮಾನವತೆಯನ್ನೇ ಒಳಗೊಂಡ ಸಾಮಾಜಿಕ – ಸಾಂಸ್ಕೃತಿಕ ಪರಿಸರಕ್ಕೆ ಹೊಂದಿಕೊಳ್ಳುವ ಸಾಮರ್ಥ್ಯ ಬೆಳೆಸುವ ಗುರಿಹೊಂದಿದೆ.
6. ಸಮಾಜ ಅಧ್ಯಯನವು ಸಮಾಜದ ಪ್ರಾಯೋಗಿಕ ಅಂಶಗಳಿಗೆ ಸಂಬಂಧಿಸಿದ ಅಥವಾ ಒಂದು ವಾಸ್ತವಿಕ ವಿಷಯವಾಗಿದೆ.
7. ಸಮಾಜ ಅಧ್ಯಯನವು ಈಗ ಬೆಳೆದು ವಿಕಾಸ ಹೊಂದುತ್ತಿರುವ ಹಂತದಲ್ಲಿದೆ. ಅದು ತನ್ನ ವ್ಯಾಪ್ತಿಯನ್ನು ವಿಶಾಲಗೊಳಿಸಲು ಪ್ರಯತ್ನಿಸುತ್ತಿದೆ.
8. ಸಮಾಜ ಅಧ್ಯಯನವು ಆರೋಗ್ಯಕರ ಸಾಮಾಜಿಕ ಜೀವನಕ್ಕೆ ಸಂಬಂಧಿಸಿದ ಅಗತ್ಯ ಸಾಮರ್ಥ್ಯಗಳನ್ನು ಬೆಳೆಸಲು ಶಾಲಾ ಮಟ್ಟದಲ್ಲಿ ಒಂದು ಮುಖ್ಯ ವಿಷಯವಾಗಿ ಪರಿಗಣಿಸಲ್ಪಟ್ಟಿದೆ.

ಸಮಾಜ ವಿಜ್ಞಾನ ಮತ್ತು ಸಮಾಜ ಅಧ್ಯಯನಗಳ ನಡುವೆ ಕ್ರಿಯಾತ್ಮಕ ಸಮಾನತೆಗಳು ಮತ್ತು ವ್ಯತ್ಯಾಸಗಳು ಸಮಾಜ ವಿಜ್ಞಾನ ಮತ್ತು ಸಮಾಜ ಅಧ್ಯಯನಗಳು ಒಂದೇ ನಾಣ್ಯದ ಎರಡು ಮುಖಗಳು. ಅವೆರಡೂ ಪರಸ್ಪರ ಸಂಬಂಧಿಸಿವೆ ಹಾಗೂ ಹಲವು ರೀತಿಯಲ್ಲಿ ಪರಸ್ಪರ ಭಿನ್ನವಾಗಿವೆ. ಅವುಗಳ ನಡುವಿನ ಸಮಾನತೆ ಹಾಗೂ ವ್ಯತ್ಯಾಸಗಳನ್ನು ಗಮನಿಸೋಣ.

ಸಮಾನತೆಗಳು:

1. ಸಮಾಜ ವಿಜ್ಞಾನ ಮತ್ತು ಸಮಾಜ ಅಧ್ಯಯನಗಳೆರೆಡೂ ಒಂದೇ ಕುಲ / ಆವರಣದಿಂದ ಹೊಮ್ಮಿದವುಗಳಾಗಿವೆ.
2. ಅವೆರಡೂ ಸಮಾನ ವಿಷಯವಸ್ತು ರಾಶಿಯನ್ನು ಹಂಚಿಕೊಂಡಿವೆ
3. ಎರಡೂ ಕ್ಷೇತ್ರಗಳಲ್ಲಿ ಮಹಿಳೆಯ / ಪುರಷನ ಪರಿಸರದೊಂದಿಗೆ ಅವಳ / ಅವನ ಸಂಬಂಧವೇ ಗಮನದ ಕೇಂದ್ರವಾಗಿದೆ.
4. ಸಮಾಜ ವಿಜ್ಞಾನ ಮತ್ತು ಸಮಾಜ ಅಧ್ಯಯಗಳೆರಡರಲ್ಲೂ ಮಾನವ ಸಂಬಂಧವೇ ಸಮಾನಭಾಜಕಾಂಶವಾಗಿದೆ.
5. ಮಹಿಳೆ / ಪುರಷನು ತನ್ನ ಮೂಲಭೂತ ಅವಶ್ಯಕತೆಗಳ ಪೂರೈಕೆ, ತನ್ನ ವಿಚಾರ ಮತ್ತು ಭಾವನೆಗಳ ಸಂವಹನ

ಜೀವನ ಅವಶ್ಯಕತೆಗಳ ಉತ್ಪಾದನೆ ಮತ್ತು ಬಳಕೆ ಮತ್ತು ಮಾನವ ಹಾಗೂ ನೈಸರ್ಗಿಕ ಸಂಪನ್ಮೂಲಗಳ ಉಳಿತಾಯ ಮುಂತಾದ ಉದ್ದೇಶಕ್ಕಾಗಿ ವೈವಿಧ್ಯಮಯ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದೇ ಎರಡೂ ವಿಷಯಗಳ ಕೇಂದ್ರಬಿಂದುವಾಗಿದೆ.

ಚಿತ್ರ. 1.1 ಸಮಾಜ ಅಧ್ಯಯನ ಮತ್ತು ಸಮಾಜ ವಿಜ್ಞಾನಗಳ ನಡುವಿನ ಕ್ರಿಯಾತ್ಮಕ ಸಂಬಂಧವನ್ನು ತಿಳಿಸುತ್ತದೆ.




ಮೂಲ ಜಾನ್ ಜೆರೋಲಿಮೆಕ್ "Social studies in Elementary education the Macmillan", company (1959) New york.

ವ್ಯತ್ಯಾಸಗಳು:

| ವ್ಯತ್ಯಾಸದ ಅಂಶಗಳು | ಸಮಾಜ ವಿಜ್ಞಾನ | ಸಮಾಜ ಅಧ್ಯಯನ |
|---|---|---|
| ನಿಷ್ಪತ್ತಿ (ವುತ್ಪತ್ತಿ) | ಸಮಾಜ ವಿಜ್ಞಾನವು ಸಮಾಜ– ಅಧ್ಯಯನದ ಪೋಷಕ ವಿಷಯಗಳು ಅಥವಾ ಉತ್ಪತ್ತಿ ಮೂಲಗಳಾಗಿವೆ | ಸಮಾಜ ಅಧ್ಯಯನವು ಸಮಾಜ ವಿಜ್ಞಾನದ ಫಲಿತ ಅಥವಾ ಉತ್ಪನ್ನವಾಗಿದೆ. |
| ವ್ಯವಹಾರ ಗಳ ಕ್ಷೇತ್ರ | ಮಾನವ ವ್ಯವಹಾರಗಳ ತಾತ್ವಿಕ ಅಂಶಗಳಿಗೆ ಸಂಬಂಧಿಸಿದೆ | ಮಾನವ ವ್ಯವಹಾರಗಳ ಪ್ರಾಯೋಗಿಕ ಅಂಶಗಳಿಗೆ ಸಂಬಂಧಿಸಿದೆ. |
| area of Affaire | ಸಮಾಜ ವಿಜ್ಞಾನವು ಸಾಮಾಜಿಕ ಉಪಯುಕ್ತತೆಯನ್ನು ಅರಸುತ್ತದೆ | ಸಮಾಜ ಅಧ್ಯಯನವು ಬೋಧನಾತ್ಮಕ ಉಪಯುಕ್ತಕತೆಯನ್ನು ಅರುಸತ್ತದೆ. |
| ಕ್ರಮ / ಪದ್ಧತಿ | ವಯಸ್ಕ ಕ್ರಮ / ಪದ್ಧತಿಯನ್ನು ಪ್ರತಿನಿಧಿಸುತ್ತದೆ | ಶಿಶು ಕೇಂದ್ರಿತ ಕ್ರಮವನ್ನು ಪ್ರತಿನಿಧಿಸುತ್ತದೆ. |
| ಕ್ರಮ | ಆದರ್ಶವಾದಿ ಕ್ರಮದ ಮೂಲಕ ಅಧ್ಯಯನ ಮಾಡಲಾಗುವುದು | ವ್ಯಾವಹಾರಿಕ / ಆಚರಣೀಯ ಕ್ರಮದ ಮೂಲಕ ಅಧ್ಯಯನ |
| ಗುರಿ | ಜ್ಞಾನದ ಕೊಡುಗೆ ಮತ್ತು ಬೌದ್ಧಿಕ ದಿಗಂತವನ್ನು ಹೆಚ್ಚಿಸುವ ಗುರಿ ಹೊಂದಿದೆ | ಸಮಾಜದ ವಿವಿಧ ಪ್ರಾಯೋಗಿಕ (ನೈಜ) ಸಮಸ್ಯೆಗಳನ್ನು ಪರಿಹರಿಸಲು ಅಗತ್ಯ ಜ್ಞಾನಗಳಿಕೆಯ ಗುರಿ ಹೊಂದಿದೆ |

| | | |
|---|---|---|
| ರಚನೆ / ಸಂಯೋಜನೆ | ಇತಿಹಾಸ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಮಾನವಶಾಸ್ತ್ರ ಅರ್ಥಶಾಸ್ತ್ರ ಮುಂತಾದ ಹಲವಾರು ವಿಷಯಗಳನ್ನು ಒಳಗೊಂಡಿದೆ. | ಹಲವಾರು ಸಮಾಜ ವಿಜ್ಞಾನಗಳಿಂದ ವಿಷಯವಸ್ತುವನ್ನು ಆಯ್ದು ಅವುಗಳನ್ನು ಶಾಲೆ / ಕಿರಿಯ ಶಾಲೆಗಳಲ್ಲಿ ಕಲಿಸಲು 3–4 ವಿಶಾಲ ಶೀರ್ಷಿಕೆಗಳಡಿ ಆಳವಡಿಸಿದೆ. (ಇತಿಹಾಸ, ಅರ್ಥಶಾಸ್ತ್ರ ಇತ್ಯಾಧಿ. |
| ಸಂಯೋಜನೆಯ ಸ್ವರೂಪ | ಇದು ವಿವಿಧ ವಿಷಯಗಳ ಮಿಶ್ರಣವಾಗಿದ್ದು ಪ್ರತಿ ವಿಷಯವೂ ವಿಶಿಷ್ಟ ಗುರುತನ್ನು ಹೊಂದಿ, ಇತರ ವಿಷಯಗಳಿಂದ ಸುಲಭವಾಗಿ ಬೇರ್ಪಡಿಸಬಹುದಾಗಿದೆ. | ಇದು ಒಂದು ಸಂಯೋಜನೆಯಾಗಿದ್ದು, ಈ ಸಂಯೋಜನೆಯಿಂದ ಹೊಸ ತೊಂದು ಹೊರ ಹೊಮ್ಮುತ್ತದೆ. ಸಮಾಜ ಅಧ್ಯಯನದ ಭಾಗಗಳನ್ನು ಸ್ಪಷ್ಟರೂಪದಲ್ಲಿ ಪ್ರತ್ಯೇಕಿಸುವುದು ಬಲು ಕಠಿಣ. |
| ಓದುಗ | ಸಾಮಾಜಿಕ ವಿಜ್ಞಾನಗಳ ಓದುಗರ ಸಂಖ್ಯೆ ಅತಿ ಕಡಿಮೆ ಕೇವಲ ಸಾಮರ್ಥ್ಯವುಳ್ಳ ಮತ್ತು ಆಸಕ್ತರು ಇದನ್ನು ಅಧ್ಯಯನ ಮಾಡಬಹುದು. | ಪೌರತ್ವ ಸಿದ್ಧತೆ ಮುಖ್ಯ ಗುರಿಯಾದುದರಿಂದ ಪ್ರತಿಯೊಬ್ಬರು ಅಧ್ಯಯನ ಮಾಡುತ್ತಾರೆ. |
| ಅಧ್ಯಯಂ ಬನದ ಹಂತ | ಸಮಾಜ ವಿಜ್ಞಾನವು ಮಾನವ ಸಮಾಜದ ಉನ್ನತ ಮಟ್ಟದ ಅಧ್ಯಯನ ಇದನ್ನು ಪ್ರೌಢಶಾಲೆ ವಿಶ್ವವಿದ್ಯಾಲಯ ಹಂತದಲ್ಲಿ ಭೋಧಿಸಲಾಗುತ್ತದೆ. | ಇದು ಸಮಾಜ ವಿಜ್ಞಾನದ ಸರಳೀಕೃತ ಅಂಶವಾಗಿದ್ದು ಕಿರಿಯ / ಶಾಲಾ ಹಂತದಲ್ಲಿ ಭೋಧಿಸಲಾಗುತ್ತದೆ. |
| ವ್ಯಾಪ್ತಿ | ಪ್ರತಿ ಸಾಮಾಜಿಕ ವಿಜ್ಞಾನದ ವ್ಯಾಪ್ತಿಯು ತನ್ನದೇ ಕ್ಷೇತ್ರದ ಒಳಗೆ ಸೀಮಿತವಾಗಿದೆ ಉದಾ. ಅರ್ಥಶಾಸ್ತ್ರವು ಆರ್ಥಿಕ ಕ್ಷೇತ್ರಕ್ಕೆ ಸಂಬಂಧಿಸಿದ ಚಟುವಟಿಕೆಗಳಿಗೆ ಮಾತ್ರ ಸಂಬಂಧಿಸಿದೆ. | ಮಾನವ ಸಮಾಜ ಜೀವನದ ಎಲ್ಲ ಅಂಶಗಳನ್ನು ಸಂಯೋಜಿತ ರೀತಿಯಲ್ಲಿ ಮುಟ್ಟುತ್ತದೆ. |

| | | |
|---|---|---|
| ವ್ಯಾಪ್ತಿ | ಹಲವಾರು ವಿಷಯಗಳನ್ನು ಒಳಗೊಂಡಿರುವುದರಿಂದ ವಿಶಾಲ ವ್ಯಾಪ್ತಿ ಹೊಂದಿದೆ | ಇದು ಸಮಾಜ ವಿಜ್ಞಾನದ ಭಾಗವಾಗಿದೆ. ಆದ್ದರಿಂದ ವ್ಯಾಪ್ತಿಯು ಸಮಾಜವಿಜ್ಞಾನಕ್ಕಿಂತ ಕಡಿಮೆ. |
| ಸಂಕೀರ್ಣತೆ | ಸಾಮಾಜಿಕ ವಿದ್ಯಮಾನಗಳ ಸಂಕೀರ್ಣ ಅಧ್ಯಯನವಾಗಿದೆ. | ಪ್ರಾಥಮಿಕ ಶಾಲೆಗಳಲ್ಲಿ ವಿದ್ಯಾರ್ತಿಗಳಿಗೆ ಬೋಧಿಸುವ ಸಮಾಜ ವಿಜ್ಞಾನದ ಸರಳೀಕೃತ ಅಂಶ. |

**1.1 ಸಮಾಜ ವಿಜ್ಞಾನದೊಂದಿಗೆ ಸಮಾಜಶಾಸ್ತ್ರದ ಕ್ರಿಯಾತ್ಮಕ ಸಂಬಂಧ**

**1.2.3 ಹಿರಿಯ ಪ್ರಾಥಮಿಕ ಶಾಲಾ ಪಠ್ಯಕ್ರಮದಲ್ಲಿ ಸಮಾಜವಿಜ್ಞಾನ.**

ಇಂದಿನ ದಿನಗಳಲ್ಲಿ ಪ್ರಪಂಚದ ಬಹುತೇಕ ರಾಷ್ಟ್ರಗಳಲ್ಲಿ ಸಮಾಜ ವಿಜ್ಞಾನವು ಶಾಲಾ ಪಠ್ಯಕ್ರಮದ ಭಾಗವಾಗಿ ಕಂಡುಬರುತ್ತದೆ.

ಭಾರತದ ಪ್ರಚಲಿತ ಶಾಲಾ ಪಠ್ಯಕ್ರಮದಲ್ಲಿ ಸಮಾಜ ವಿಜ್ಞಾನದ ಸ್ಥಾನವನ್ನು ಚರ್ಚಿಸೋಣ. ಭಾರತದಲ್ಲಿ ಕಿರಿಯ ಪ್ರಾಥಮಿಕ ಶಾಲಾ ಮಟ್ಟದಲ್ಲಿ (1–5 ನೇ ತರಗತಿವರೆಗೆ) ಸಮಾಜ ವಿಜ್ಞಾನವನ್ನು ವಿದ್ಯಾರ್ಥಿಗಳಿಗೆ ಪರಿಸರ ಅಧ್ಯಯನ ಅಥವಾ ಪರಿಸರ ವಿಜ್ಞಾನ ಪಠ್ಯಕ್ರಮದ ಭಾಗವಾಗಿ ಕಲಿಸಲಾಗುತ್ತದೆ. ಹಿರಿಯ ಪ್ರಾಥಮಿಕ ಶಾಲಾ ಹಂತದಲ್ಲಿ (6ರಿಂದ 8ನೇ ತರಗತಿಗಳು) ಮತ್ತು ಪ್ರೌಢಶಾಲಾ ಮಟ್ಟದಲ್ಲಿ (9 ಮತ್ತು 10ನೇ ತರಗತಿ) ವಿದ್ಯಾರ್ಥಿಗಳಿಗೆ ಪಠ್ಯಕ್ರಮದ ಮುಖ್ಯ ಸಂಯೋಜಿಕ ಬೋಧನಾ ಕ್ಷೇತ್ರವಾಗಿ ಸಮಾಜವಿಜ್ಞಾನವನ್ನು ಕಲಿಸಲಾಗುತ್ತದೆ. ಮತ್ತು ಪಠ್ಯಕ್ರಮದ ಈ ಭಾಗವನ್ನು ಸಮಾಜ ಅಧ್ಯಯನ ಅಥವಾ ಸಮಾಜವಿಜ್ಞಾನ ಎಂದು ಕರೆಯಲಾಗಿದೆ.

ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲಾ ಮಟ್ಟಗಳಲ್ಲಿ ಮುಖ್ಯವಾಗಿ ಮೂರು ನಾಲ್ಕು ಬೋಧನಾ ವಿಷಯಗಳು / ಘಟಕಾಂಶಗಳು (ಉದಾ. ಇತಿಹಾಸ ಭೂಗೋಳ ಇತ್ಯಾದಿ) ಸಮಾಜವಿಜ್ಞಾನ, ಸಮಾಜ ಅಧ್ಯಯನ ಪಠ್ಯಕ್ರಮದಲ್ಲಿರುತ್ತವೆ. ಈ ಬೋಧನಾ ವಿಷಯಗಳ / ಘಟಕಾಂಶಗಳ ಬಗೆಗಿನ ವಿವರಗಳನ್ನು ಈ ಘಟಕದ ಮುಂದಿನ ಭಾಗದಲ್ಲಿ ನೀವು ಕಾಣುವಿರಿ (ಭಾಗ 1.5.2) ಉನ್ನತ ಪ್ರೌಢ ಶಾಲಾ ಹಂತದಲ್ಲಿ (ತರಗತಿ 11 ಮತ್ತು 12) ವಿದ್ಯಾರ್ಥಿಗಳಿಗೆ ಐಚ್ಛಿಕ / ವಿಶೇಷ ಪರಿಣತಿಯ ವಿಷಯಗಳಾಗಿ ವಿವಿಧ ಸಮಾಜ ವಿಜ್ಞಾನ ವಿಷಯಗಳಾದ ರಾಜ್ಯಶಾಸ್ತ್ರ, ಮಾನವಶಾಸ್ತ್ರ, ಅರ್ಥಶಾಸ್ತ್ರ, ಮನೋವಿಜ್ಞಾನ ಮುಂತಾದವುಗಳನ್ನು ಬೋಧಿಸಲಾಗುತ್ತದೆ.

ಹಿರಿಯ ಪ್ರಾಥಮಿಕ ಮತ್ತು / ಅಥವಾ ಪ್ರೌಢಶಾಲಾ ಹಂತಗಳಲ್ಲಿ ಸಮಾಜವಿಜ್ಞಾನ ಮತ್ತು ಸಮಾಜ ಅಧ್ಯಯನ ಎಂಬ ಪದಗಳನ್ನು ಬಹುಮಟ್ಟಿಗೆ ಪರಸ್ಪರ ಪರ್ಯಾರ್ಯವಾಗಿ ಬಳಸಲಾಗುತ್ತದೆ. ಉದಾಹರಣೆ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (ಎನ್.ಸಿಎಫ್ 2005, ಪುಟ–53) ಹಿರಿಯ ಪ್ರಾಥಮಿಕ ಹಂತದ ಪಠ್ಯಕ್ರಮಕ್ಕೆ ಸಂಬಂಧಿಸಿದಂತೆ ಸಮಾಜ ಅಧ್ಯಯನ ಎಂಬ ಪದ ಬಳಸಿದೆ. ಆದರೆ ವಸ್ತುಸ್ಥಿತಿ ಪತ್ರಿಕೆ – ಸಮಾಜ ವಿಜ್ಞಾನ ಬೋಧನೆ ಕುರಿತ ರಾಷ್ಟ್ರೀಯ ವಿಷಯ ಕೇಂದ್ರಿತ

ಸಮೂಹ (2006 ಪುಟ–5)ವು ಹಿರಿಯ ಪ್ರಾಥಮಿಕ ಹಂತದ ಪಠ್ಯಕ್ರಮಕ್ಕೆ ಸಂಬಂಧಿಸಿದಮತೆ ಸಮಾಜ ವಿಜ್ಞಾನ ಎಂಬ ಪದ ಬಳಸಿದೆ. ಹಿರಿಯ ಪ್ರಾಥಮಿಕ ಮಟ್ಟದ ಸಿ.ಬಿ.ಎಸ್.ಇ ಪಠ್ಯಕ್ರಮದ ಇತಿಹಾಸ ಭೂಗೋಳ ಮತ್ತು ಸಾಮಾಜಿಕ ಹಾಗೂ ರಾಜಕೀಯ ಜೀವನ ಪಠ್ಯಪುಸ್ತಕಗಳು (ಎನ್‌ಸಿಇಆರ್‌ಟಿ ಪ್ರಕಟಣೆ) ಸಮಾಜ ವಿಜ್ಞಾನ ಎಂಬ ಪದ ಬಳಕ ಆಗಿದೆ. ಪದ ಯಾವುದೇ ಆಗಿರಲಿ (ಸಮಾಜ ಅಧ್ಯಯನ ಅಥವಾ ಸಮಾಜ ವಿಜ್ಞಾನ) ಸಮಾಜ ವಿಜ್ಞಾನದ ಬೋಧನೆ ಕಲಿಕೆಯ ಕೇಂದ್ರವು ಈಗಾಗಲೇ ಚರ್ಚಿಸಿರುವಂತೆ ಶಿಕ್ಷಣದ ಹಂತಗಳಿಗನುಗುಣವಾಗಿ ಬದಲಾಗುತ್ತದೆ. ಶಾಲಾ ಹಂತದಲ್ಲಿ ಸಮಾಜ ಅಧ್ಯಯನ / ಸಮಾಜ ವಿಜ್ಞಾನವು ಉನ್ನತ ಶಿಕ್ಷಣ ಹಂತದ ಸಮಾಜ

ವಿಜ್ಞಾನದ ಕಲಿಕೆಗಿಂತ ಕ್ರಿಯಾತ್ಮಕವಾಗಿ ಭಿನ್ನವಾದ ವಿಚಾರಗಳ ಮೇಲೆ ಕೇಂದ್ರಿತವಾಗಿರುತ್ತದೆ. ಹಿರಿಯ ಪ್ರಾಥಮಿಕ ಶಾಲಾ ಹಂತದಲ್ಲಿ ಸಮಾಜ ವಿಜ್ಞಾನ ಕಲಿಕೆಯ ಸಾಮಾನ್ಯ ಗುರಿಗಳು ಈ ಕೆಳಕಂಡಂತೆ ಇವೆ.

1. ವಿದ್ಯಾರ್ಥಿಗಳಿಗೆ ತಮ್ಮ ಭೌಗೋಳಿಕ ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿಸರಗಳನ್ನು ಪರಿಚಯಿಸುವುದು.
2. ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಸಾಮರ್ಥ್ಯ ಮತ್ತು ಸಾಮಾಜಿಕ ಬದ್ಧತೆಯ ಅರಿವು ಬೆಳೆಸುವುದು.
3. ವಿದ್ಯಾರ್ಥಿಗಳಲ್ಲಿ ಪ್ರಜಾಸತ್ತಾತ್ಮಕ ಪೌರತ್ವದ ಗುಣಗಳನ್ನು ಬೆಳೆಸುವುದು.
4. ವಿದ್ಯಾರ್ಥಿಗಳಲ್ಲಿ ದೇಶಪ್ರೇಮ, ರಾಷ್ಟ್ರೀಯ ಭಾವನೆ ಮತ್ತು ಅಂತರಾಷ್ಟ್ರೀಯ ತಿಳುವಳಿಕೆಯನ್ನು ಬೆಳೆಸುವುದು.
5. ಸಾಮಾಜಿಕ – ಆರ್ಥಿಕ ಸಂಸ್ಥೆಗಳಲ್ಲಿ ಭಾಗವಹಿಸಲು ವಿದ್ಯಾರ್ಥಿಗಳಿಗೆ ಸಹಾಯ ಮಾಡುವುದು.
6. ವರ್ತಮಾನದ ಹಾಗೂ ಮುಂಬುರುವ ಸಾಮಾಜಿಕ (ವಿವಾದಾಂಶಗಳು) ವಿಚಾರಗಳು ಹಾಗೂ ಸವಾಲುಗಳನ್ನು ಪರಹರಿಸಿಕೊಳ್ಳಲು ತರಬೇತಿ ನೀಡುವುದು.
7. ವಿದ್ಯಾರ್ಥಿಗಳಲ್ಲಿ ನೈತಿಕ ಮೌಲ್ಯಗಳು, ಸಂವೇದನಾತ್ಮಕ ಗುಣಗಳು ಮತ್ತು ಆತ್ಮೀಯತೆಯ (ಸೇರಿರುವಿಕೆಯ) ಭಾವನೆಗಳನ್ನು ಬೆಳೆಸುವುದು.

ಹಿರಿಯ ಪ್ರಾಥಮಿಕ ಹಂತದಲ್ಲಿ ಸಮಾಜ ವಿಜ್ಞಾನ ಬೋಧನೆ ಕುರಿತು ಸಮಾಜ ವಿಜ್ಞಾನ ಬೋಧನೆ ಬಗ್ಗೆ ರಾಷ್ಟ್ರೀಯ ವಿಷಯ ಕೇಂದ್ರಿತ ಸಮೂಹ (ಎನ್‌ಎಫ್‌ಜಿ) ದ ಅಭಿಪ್ರಾಯಗಳು. ಹಿರಿಯ ಪ್ರಾಥಮಿಕ ಹಂತದಲ್ಲಿ ಸಮಾಜ ವಿಜ್ಞಾನ ಬೋಧನೆಯ ಉದ್ದೇಶಗಳು.

- ಮಾನವ ಜನಾಂಗ ಮತ್ತು ಇತರ ಜೀವಿರೂಪಗಳ ವಾಸಸ್ಥಳವಾದ ಭೂಮಿಯ ಬಗ್ಗೆ ಗ್ರಹಿಕೆ ಉಂಟುಮಾಡುವುದು.
- ಕಲಿಕಾರ್ಥಿಯನ್ನು ಜಾಗತಿಕ ಹಿನ್ನಲೆಯಲ್ಲಿ ತನ್ನ ಸ್ವಂತ ಪ್ರದೇಶ, ರಾಜ್ಯ ಮತ್ತು ದೇಶದ ಬಗ್ಗೆ ಅಧ್ಯಯನ ಮಾಡಲು ತೊಡಗಿಸುವುದು.
- ಪ್ರಪಂಚದ ಇತರ ಭಾಗಗಳಲ್ಲಿನ ಸಮಕಾಲೀನ ಬೆಳವಣಿಗೆಗಳನ್ನು ಉಲ್ಲೇಖಿಸಿ ಭಾರತದ ಭೂತಕಾಲದ ಅಧ್ಯಯನ ಆರಂಭಿಸುವಂತೆ ಮಾಡುವುದು.
- ದೇಶದ ಸಾಮಾಜಿಕ ಮತ್ತು ರಾಜಕೀಯ ಸಂಸ್ಥೆಗಳು ಮತ್ತು ಪ್ರಕ್ರಿಯೆಗಳ ಕಾರ್ಯ ಮತ್ತು ಚಲನಶೀಲತೆಗಳಿಗೆ ಪರಿಚಯಿಸುವುದು.

ಈ ಹಂತದಲ್ಲಿ ಸಮಾಜವಿಜ್ಞಾನದ ವಿಷಯ ಕ್ಷೇತ್ರಗಳನ್ನು ತಮ್ಮ ವಿಷಯ ವಸ್ತುವನ್ನು ಇತಿಹಾಸ, ಭೂಗೋಳ, ರಾಜ್ಯಶಾಸ್ತ್ರ ಮತ್ತು ಅರ್ಥಶಾಸ್ತ್ರಗಳಿಂದ ಆಯ್ದು – ಪರಿಚಯಿಸಲಾಗುವುದು. ಮಗುವಿಗೆ ಇದೇ ಸಮಯದಲ್ಲಿ ಸಮಕಾಲೀನ (ಪ್ರಚಲಿತ) ವಿವಾದಾಂಶಗಳನ್ನು ಮತ್ತು ಸಮಸ್ಯೆಗಳನ್ನು ಪರಿಚಯಿಸಬಹುದು. ಬಡತನ ಅನಕ್ಷರತೆ, ಬಾಲ ಕಾರ್ಮಿಕತೆ ಹಾಗೂ ಜೀತ, ವರ್ಗ, ಜಾತಿ ಲಿಂಗತ್ವ ಮತ್ತು ಪರಿಸರದಂತಹ ವಿಚಾರಗಳಿಗೆ ಹೆಚ್ಚು ಒತ್ತು ನೀಡುವುದು ಅವಶ್ಯ ಭೂಗೋಳ ಮತ್ತು ಅರ್ಥಶಾಸ್ತ್ರಗಳು ಒಟ್ಟಾಗಿ ಸೇರಿ ಪರಿಸರ, ಸಂಪನ್ಮೂಲಗಳು ಮತ್ತು ವಿವಿಧ ಹಂತಗಳಲ್ಲಿ ಅಭಿವೃದ್ಧಿ (ಸ್ಥಳೀಯದಿಂದ ಜಾಗತಿಕ ಮಟ್ಟದವರೆಗೆ) ಗಳಿಗೆ ಸಂಬಂಧಿಸಿದ ಸರಿಯಾದ ದೃಷ್ಟಿಕೋನ ಬೆಳೆಸಲು ಸಹಾಯಕವಾಗಬಹುದು. ಬಹುತ್ವದ ಪರಿಕಲ್ಪನೆಗಳಿಗೆ ಒತ್ತು ಕೊಡುತ್ತ ಇತಿಹಾಸವನ್ನು ಕಲಿಸಲಾಗುವುದು.

ಮಗುವಿಗೆ ಸ್ಥಳೀಯ ರಾಜ್ಯ, ಮತ್ತು ಕೇಂದ್ರ ಮಟ್ಟಗಳಲ್ಲಿ ಸರ್ಕಾರಗಳ ರಚನೆ ಹಾಗೂ ಕಾರ್ಯಗಳನ್ನು ಮತ್ತು ಭಾಗವಹಿಸುವಿಕೆಯ ಪ್ರಜಾಸತ್ತಾತ್ಮಕ ಪ್ರಕ್ರಿಯೆಗಳನ್ನು ಪರಿಚಯಿಸಲಾಗುವುದು. ಈ ಹಂತದಲ್ಲಿ ಸಮಾಜವಿಜ್ಞಾನದ ವಿಷಯ ಕ್ಷೇತ್ರಗಳನ್ನು ತಮ್ಮ ವಿಷಯ ವಸ್ತುವನ್ನು ಇತಿಹಾಸ, ಭೂಗೋಳ, ರಾಜ್ಯಶಾಸ್ತ್ರ ಮತ್ತು ಅರ್ಥಶಾಸ್ತ್ರಗಳಿಂದ ಆಯ್ದು – ಪರಿಚಯಿಸಲಾಗುವುದು. ಮಗುವಿಗೆ ಇದೇ ಸಮಯದಲ್ಲಿ ಸಮಕಾಲೀನ (ಪ್ರಚಲಿತ) ವಿವಾದಾಂಶಗಳನ್ನು ಮತ್ತು ಸಮಸ್ಯೆಗಳನ್ನು ಪರಿಚಯಿಸಬಹುದು. ಬಡತನ ಅನಕ್ಷರತೆ, ಬಾಲ ಕಾರ್ಮಿಕತೆ ಹಾಗೂ ಜೀತ, ವರ್ಗ, ಜಾತಿ ಲಿಂಗತ್ವ ಮತ್ತು ಪರಿಸರದಂತಹ ವಿಚಾರಗಳಿಗೆ ಹೆಚ್ಚು ಒತ್ತು ನೀಡುವುದು ಅವಶ್ಯ ಭೂಗೋಳ ಮತ್ತು ಅರ್ಥಶಾಸ್ತ್ರಗಳು ಒಟ್ಟಾಗಿ ಸೇರಿ ಪರಿಸರ, ಸಂಪನ್ಮೂಲಗಳು ಮತ್ತು ವಿವಿಧ ಹಂತಗಳಲ್ಲಿ ಅಭಿವೃದ್ಧಿ (ಸ್ಥಳೀಯದಿಂದ ಜಾಗತಿಕ ಮಟ್ಟದವರೆಗೆ) ಗಳಿಗೆ ಸಂಬಂಧಿಸಿದ ಸರಿಯಾದ ದೃಷ್ಟಿಕೋನ ಬೆಳೆಸಲು ಸಹಾಯಕವಾಗಬಹುದು. ಬಹುತ್ವದ ಪರಿಕಲ್ಪನೆಗಳಿಗೆ ಒತ್ತು ಕೊಡುತ್ತ ಇತಿಹಾಸವನ್ನು ಕಲಿಸಲಾಗುವುದು. ಮಗುವಿಗೆ ಸ್ಥಳೀಯ ರಾಜ್ಯ, ಮತ್ತು ಕೇಂದ್ರ ಮಟ್ಟಗಳಲ್ಲಿ ಸರ್ಕಾರಗಳ ರಚನೆ ಹಾಗೂ ಕಾರ್ಯಗಳನ್ನು ಮತ್ತು ಭಾಗವಹಿಸುವಿಕೆಯ ಪ್ರಜಾಸತ್ತಾತ್ಮಕ ಪ್ರಕ್ರಿಯೆಗಳನ್ನು

ಪರಿಚಯಿಸಲಾಗುವುದು.

ನಿಮ್ಮ ಪ್ರಗತಿ ಪರಿಶೀಲಿಸಿಕೊಳ್ಳಿ 1

ನಿಮ್ಮ ಉತ್ತರವನ್ನು ಕೆಳಗೆ ಒದಗಿಸಿರುವ ಸ್ಥಳದಲ್ಲಿ ಬರೆಯಿರಿ ಮತ್ತು ಘಟಕಾಂತ್ಯದಲ್ಲಿ ಕೊಟ್ಟಿರುವ ಮಾದರಿ ಉತ್ತರದೊಂದಿಗೆ ಹೋಲಿಸಿ.

ಪ್ರಶ್ನೆ: ಸಮಾಜ ವಿಜ್ಞಾನ ಬೊಧನೆ ಕುರಿತ (ಎನ್‌ಎಫ್‌ಜಿ2006) ರ ಪ್ರಕಾರ ಹಿರಿಯ ಪ್ರಾಥಮಿಕ ಹಂತದಲ್ಲಿ ಸಮಾಜ ವಿಜ್ಞಾನ ಬೋಧನೆಯ ಉದ್ದೇಶಗಳೇನು?

### 1.3 ಸಮಾಜ ವಿಜ್ಞಾನ: ವಿವಿಧ ಕಾಲಘಟ್ಟಗಳಲ್ಲಿ

ವಾಸ್ತವದಲ್ಲಿ, ಸಮಾಜ ವಿಜ್ಞಾನದ ಕಲಿಕೆಯು ಹೊಸತೇನಲ್ಲ. ಪ್ರಪಂಚದಲ್ಲಿ ನಾಗರೀಕತೆಯ ಸೃಷ್ಟಿಯಾದ ಮೊದಲ ದಿನದಿಂದಲೂ
ಒಂದಲ್ಲ ಒಂದು ರೀತಿಯಲ್ಲಿ ಸಮಾಜ ವಿಜ್ಞಾನ ಕಲಿಕೆಯು ಶಿಕ್ಷಣ ವ್ಯವಸ್ಥೆಯ ಭಾಗವಾಗಿ ಹೋಗಿದೆ. ಸಮಾಜ ವಿಜ್ಞಾನವು ಹಲವು
ಕಾಲಘಟ್ಟಗಳ ಮೂಲಕ ಯಾವ ರೀತಿ ಪ್ರಗತಿಯಾಯಿತು ಎಂಬುದನ್ನು ನೋಡೋಣ.

#### 1.3.1 ಆಧುನಿಕ ಪೂರ್ವ ಜಗತ್ತಿನಲ್ಲಿ ಸಮಾಜ ವಿಜ್ಞಾನ.

ಆಧುನಿಕ ಜಗತ್ತು 18/19 ನೇಯ ಶತಮಾನದಲ್ಲಿ ಆರಂಭವಾದರೆ, ಆಧುನಿಕ – ಪೂರ್ವ ಕಾಲವು ಜಗತ್ತಿನಲ್ಲಿ ಮಾನವ ಸಮಾಜದ ಸೃಷ್ಟಿಯಿಂದ ಆರಂಭಗೊಂಡು 17/18ನೆಯ ಶತಮಾನದ ವರೆಗಿನ ಸುದೀರ್ಘ ಅವಧಿಯವರೆಗೆ ಹರಡಿತ್ತು. ಆಧುನಿಕ ಪೂರ್ವ ಜಗತ್ತು ಬೇಟೆ – ಸಂಗ್ರಹಣಾಯುಗದಿಂದ, ಪಶುಪಾಲನೆ – ಅಲೆಮಾರಿಯುಗ, ಶಿಲಾಯುಗ, ಕಬ್ಬಿಣಯುಗ, ನದಿ ಕೊಳ್ಳದ ನಾಗರೀಕತೆಗಳು ಮತ್ತು ಮಧ್ಯಯುಗ ಹಾಗೂ 18/19 ನೆಯ ಶತಮಾನಗಳವರೆಗಿನ ಅನೇಕ ಘಟ್ಟಗಳನ್ನು ಅನುಭವಿಸಿತು. ಮಾನವರು ಈ ಜಗತ್ತಿನಲ್ಲಿ ಕಾಲಿಟ್ಟು ಕುಟುಂಬ / ಸಮಾಜವನ್ನು ರೂಪಿಸಿದ ಕಾಲದಿಂದಲೂ ಸಮಾಜ / ಸಾಮಾಜಿಕ ವ್ಯವಸ್ಥೆಯನ್ನು ಅರ್ಥಮಾಡಿಕೊಳ್ಳುವುದು ಅವರಿಗೆ ಅವಶ್ಯವಾಯಿತು. ಆದ್ದರಿಂದ ಸಮಾಜ ವಿಜ್ಞಾನವನ್ನು ಕಲಿಯುವ ಅಗತ್ಯವುಂಟಾಯಿತು. ಅಂದಿನ ದಿನಗಳಲ್ಲಿ, ಸಮಾಜ ವಿಜ್ಞಾನ ಕಲಿಕೆಯು ಅಪೌರಿಕವೂ ಅಸಂಘಟಿತವೂ ಆಗಿದ್ದಿತು. ಮಾನವ ಸಮಾಜವು ದಿನೇ ದಿನೇ ಸಂಕೀರ್ಣಗೊಂಡು ಸಾಮಾಜಿಕ ಬೇಡಿಕೆಗಳು ಮತ್ತು ಸವಾಲುಗಳು ದ್ವಿಗುಣಗೊಂಡಂತೆ, ಅದೇ ರೀತಿಯಲ್ಲಿ ಸಮಾಜ ವಿಜ್ಞಾನದ ಅಧ್ಯಯನವೂ ಅತ್ಯವಶ್ಯವಾಯಿತು.

ಪ್ರಾಚೀನ ಮತ್ತು ಮದ್ಯಯುಗದ ಜಗತ್ತಿನಲ್ಲಿ ಆಧುನಿಕ ಜಗತ್ತಿಗೆ ಹೋಲಿಸಿದರೆ ಸಮಾಜವಿಜ್ಞಾನದ ಉಲ್ಲೇಖ ಅತ್ಯಂತ ವಿರಳ / ಅಪರೂಪವಾಗಿತ್ತು. ಪ್ರಾಚೀನ ಜಗತ್ತಿನ ಸಾಕ್ರೆಟಿಸ್, ಪ್ಲೇಟೋ, ಅರಿಸ್ಟಾಟಲ್ ಮತ್ತು ಅನೇಕ ಬುದ್ಧಿಜೀವಿಗಳು ಸಮಾಜವಿಜ್ಞಾನಕ್ಕೆ ಅಪಾರ ಕೊಡುಗೆ ನೀಡಿದರು. ಪ್ಲೇಟೋನ ರಿಪಬ್ಲಿಕ್ ಮತ್ತು ಅರಿಸ್ಟಾಟಲ್‌ನ ಪಾಲಿಟೆಕ್ಸ್ ಗ್ರಂಥಗಳು ಸಮಾಜ ವಿಜ್ಞಾನ ಕ್ಷೇತ್ರದಲ್ಲಿ ಎಂದೂ ಮರೆಯಲಾಗದ ಕೃತಿಗಳು ಗ್ರೀಕರ ನಾಗರೀಕ ಪ್ರತಿಜ್ಞೆಯು ಸಮಾಜ ವಿಜ್ಞಾನ ಕಲಿಕಯೆ ವಿಚಾರವೇ ಮೂರ್ತಿವೆತ್ತಂತಿದ್ದು, ಗ್ರೀಕರು ಪಕ್ವತೆ ಹೊಂದುತ್ತಿದ್ದಂತೆ ಒಂದು ಔಪಚಾರಿಕ ಸಮಾರಂಭದಲ್ಲಿ ಅವರನ್ನು ಪೌರತ್ವಕ್ಕೆ ದಾಖಲು ಮಾಡಲಾಗುತ್ತಿತ್ತು. ನಾವು ಯಾವುದೇ ಅಪ್ರಮಾಣಿಕ ಅಥವಾ ಹೇಡಿತನದ ಕಾರ್ಯದಿಂದ ನಮ್ಮ ನಗರಕ್ಕೆ ಕಳಂಕ ಉಂಟು ಮಾಡುವುದಿಲ್ಲ ಅಥವಾ ಬಾಧೆಗೊಳಗಾದ ನಮ್ಮ ಒಡನಾಡಿಗಳನ್ನು ತೊರೆಯುವುದಿಲ್ಲ. ನಾವು ನಗರದ ಧ್ಯೇಯಗಳು ಮತ್ತು ಪವಿತ್ರ ಅಂಶಗಳಿಗಾಗಿ ಒಬ್ಬಂಟಿಯಾಗಿ ಅತವಾ ಎಲ್ಲರೊಂದಿಗೆ ಹೋರಾಡುತ್ತೇವೆ. ನಾವು ನಗರದ ಕಾನೂನುಗಳನ್ನು ಗೌರವಿಸುತ್ತೇವೆ ಮತ್ತು ವಿಧೇಯರಾಗಿರುತ್ತೇವೆ ಹಾಗೂ ಅವುಗಳನ್ನು ಅಳಿಸಿ ಹಾಕಲು ಅಥವಾ ಇಲ್ಲವಾಗಿಸಲು ಯತ್ನಿಸುವವರಲ್ಲಿ ಇಂತಹ ಗೌರವವನ್ನು ಉತ್ತೇಜಿಸಲು ನಮ್ಮ ಕೈಲಾದುದನ್ನು ಮಾಡುತ್ತೇವೆ, ನಾಗರೀಕ ಚಿಂತನೆಯ ಸಾರ್ವಜನಿಕ ಪ್ರಜ್ಞೆಯನ್ನು ತ್ವರಿತಗೊಳಿಸಲು ನಿರಂತರವಾಗಿ ಶ್ರಮಪಡುತ್ತೇವೆ. ಹೀಗೆ ಈ ಎಲ್ಲ ರೀತಿಗಳಲ್ಲಿ ನಾವು ನಗರವನ್ನು ನಮಗೆ ವರ್ಗಾಯಿಸಿದಾಗ ಇದ್ದುದಕ್ಕಿಂತ ಹೆಚ್ಚಾದ (ಕಡಿಮೆ ಮಾಡದೆ) ಉತ್ತಮವಾದ ಹೆಚ್ಚು ಸುಂದರವಾದ ನಗರವನ್ನಾಗಿ

ಸಾರ (ವರ್ಗ) ಮಾಡುತ್ತೇವೆ, ಮಧ್ಯಯುಗ ಮತ್ತು ಆರಂಭದ ಆಧುನಿಕ ಜಗತ್ತಿನಲ್ಲಿ ಧಾರ್ಮಿಕ ಅಧ್ಯಯನಗಳು ಅರ್ಥಶಾಸ್ತ್ರ ಮತ್ತು ವ್ಯವಹಾರ ಅಧ್ಯಯನ, ರಾಜ್ಯವ್ಯವಹಾರಗಳ ಅಧ್ಯಯನವೇ ಮುಂತಾದ, ಸಾಮಾಜಿಕ ಮೌಲ್ಯಗಳನ್ನು ಬೆಳೆಸಿಕೊಳ್ಳಲು ಉಪಯುಕ್ತವಾಗಬಲ್ಲ ಹಲವಾರು ವಿಷಯಗಳು ಶಿಕ್ಷಣ ವ್ಯವಸ್ಥೆಯ ಭಾಗವಾಗಿ ಬೆಳೆದುವು.

### 1.3.2 ಆಧುನಿಕ ಮತ್ತು ಸಮಕಾಲೀನ ಜಗತ್ತಿನಲ್ಲಿ ಸಮಾಜವಿಜ್ಞಾನ.

ಈ ಘಟಕದ ಹಿಂದಿನ ವಿಭಾಗದಲ್ಲಿ, ಆಧುನಿಕ ಯುಗದಲ್ಲಿ ಔಪಚಾರಿಕ ವಿಷಯವಾಗಿ ಸಮಾಜವಿಜ್ಞಾನದ ವಿಕಾಸಕ್ಕೆ ಸಂಬಂಧಿಸಿದ ಚರ್ಚೆಗಳನ್ನು ಮಾಡಲಾಗಿದೆ. ಸಮಾಜದ ಕಾಲ ಮತ್ತು ಸ್ವರೂಪಗಳು ಸಮಾಜ ವಿಜ್ಞಾನ ಕಲಿಕೆಯು ಹೆಚ್ಚು ಔಪಚಾರಿಕವೂ ವ್ಯವಸ್ಥಿತವೂ ಆಗುವಂತೆ ಮಾಡಿವೆ. ಆಧುನಿಕ ಯುಗದಲ್ಲಿ ದಿನದಿಂದ ದಿನಕ್ಕೆ ಹೊಸ ಸಾಮಾಜಿಕ ಸಮಸ್ಯೆಗಳು ಉದ್ಭವಿಸುತ್ತಿದ್ದು, ಇದಕ್ಕೆ ತಕ್ಕಂತೆ ಇಂತಹ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಕಡಿಮೆ ಮಾಡಲು ಹೊಸ ಸಾಮಾಜಿಕ ವಿಜ್ಞಾನಗಳು ಹೊರಹೊಮ್ಮುತ್ತಿವೆ. ಜೊತೆಗೆ ಈ ಘಟಕದ ಹಿಂದಿನ ವಿಭಾಗದಲ್ಲಿ 18ನೇಯ ಶತಮಾನದಿಂದೀಚೆಗೆ ಸಮಾಜವಿಜ್ಞಾನವು ಉನ್ನತ ಶಿಕ್ಷಣ / ವಿಶ್ವವಿದ್ಯಾಲಯ ಪಠ್ಯಕ್ರಮದ ಔಪಚಾರಿಕ ಘಟಕಾಂಶವಾಗಿದ್ದು, 20ನೆಯ ಶತಮಾನದಿಂದೀಚೆಗೆ ಶಾಲಾ ಪಠ್ಯಕ್ರಮದ ಔಪಚಾರಿಕ ಘಟಕಾಂಶವಾಗಿದೆ ಎಂದು ತಿಳಿಸಲಾಗಿದೆ. ವಿಶೇಷವಾಗಿ ಎರಡು ವಿಶ್ವಮಹಾಯುದ್ಧಗಳ ನಂತರ ಪ್ರಪಂಚದ ಬಹುತೇಕ ಭಾಗಗಳಲ್ಲಿ ಶಾಲಾಪಠ್ಯಕ್ರಮದಲ್ಲಿ ಸಮಾಜವಿಜ್ಞಾನವು ಅತ್ಯಂತ ಹೆಚ್ಚಿನ ಪ್ರಾಮುಖ್ಯತೆ ಹೊಂದಿದೆ. ಮಹಾಯುದ್ಧದ ನಂತರದ ಕಾಲದಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದ ಬಹುತೇಕ ಅಂತರಾಷ್ಟ್ರೀಯ ಸಂಸ್ಥೆಗಳನ್ನು (UNESCO, UNICEF, UNDP, UNO) ಮುಂತಾದ ಪ್ರಪಂಚದ ಜನತೆಯಲ್ಲಿ ಆರೋಗ್ಯಕರ ಸಾಮಾಜಿಕ ಜೀವನವನ್ನು ಪ್ರೋತ್ಸಾಹಿಸ ಬಯಸಿವೆ. ಇದು ಅಂತಿಮವಾಗಿ ಸಮಾಜವಿಜ್ಞಾನ ಕಲಿಕೆಗೆ ಒತ್ತು ನೀಡುತ್ತದೆ. ವಿಶ್ವಸಂಸ್ಥೆಯು ಅಂಗೀಕರಿಸಿದ ಮಾನವ ಹಕ್ಕುಗಳ ಜಾಗತಿಕ ಘೋಷಣೆಗಳು (1948) ಹೇಳುವಂತೆ, ಎಲ್ಲ ಮಾನವರೂ ಸ್ವತಂತ್ರರಾಗಿ ಜನಿಸುತ್ತಾರೆ ಮತ್ತು ಘನತೆ ಹಾಗೂ ಹಕ್ಕುಗಳಲ್ಲಿ ಸಮಾನರು. ಅವರು ವಿವೇಚನೆ ಮತ್ತು ಆತ್ಮಸಾಕ್ಷಿಗಳ ಸಹಜ ಗುಣಗಳಿರುವುದರಿಂದ ಪರಸ್ಪರರೊಂದಿಗೆ ಭ್ರಾತೃತ್ವದಿಂದ ವ್ಯವಹರಿಸಬೇಕು. ಡಿಲೋರ್ಸ್ ಆಯೋಗ (1996)ವು ಒಟ್ಟಾಗಿ ಜೀವಿಸುವುದನ್ನು ಕಲಿಯುವುದಕ್ಕೆ ಹೆಚ್ಚಿನ ಒತ್ತು ನೀಡಿದೆ. ಆಧುನಿಕ ಜಗತ್ತಿನಲ್ಲಿ ಸಾಮರಸ್ಯದಿಂದ ಒಟ್ಟಾಗಿ ಜೀವಿಸುವ, ಮತ್ತು ವೈವಿಧ್ಯಮಯ ಸಾಮಾಜಿಕ – ಸಾಂಸ್ಕೃತಿಕ ಸಮಸ್ಯೆಗಳನ್ನು ಪರಿಹರಿಸುವ ಸದ್ಗುಣಗಳನ್ನು ಪ್ರೋತ್ಸಾಹಿಸಲು ಸಮಾಜ ವಿಜ್ಞಾನವು ಆದುನಿಕ ಜಗತ್ತಿನ ಔಪಚಾರಿಕ ಮತ್ತು ಔಪಚಾರಿಕವಲ್ಲದ ಶಿಕ್ಷಣದ ಮಹತ್ವದ ಭಾಗವಾಗಿ ರೂಪುಗೊಂಡಿದೆ. ಅಲ್ಲದೆ, ರಾಷ್ಟ್ರರಾಜ್ಯಗಳ ಸೃಷ್ಟಿ ಮತ್ತು ಸಮಕಾಲೀನ ಜಗತ್ತಿನ ಈ ಬಹುತೇಕ ರಾಷ್ಟ್ರರಾಜ್ಯಗಳಲ್ಲಿ ಪ್ರಜಾಸತ್ತಾತ್ಮಕ ಮತ್ತು ಸಮಾಜವಾದಿ ಅಡಳಿತ ಮಾದರಿಯು ಶಾಲೆ ಮತ್ತು ವಿಶ್ವವಿದ್ಯಾಲಯಗಳೆರಡು ಹಂತದಲ್ಲಿಯೂ ಸಮಾಜ ವಿಜ್ಞಾನ ಕಲಿಕೆ ಅವಶ್ಯವಾಗುವಂತೆ ಮಾಡಿವೆ ಏಕೆಂದರೆ ಸಮಾಜವಿಜ್ಞಾನವು ರಾಷ್ಟ್ರರಾಜ್ಯಗಳಲ್ಲಿ ಪ್ರಜಾಸತ್ತಾತ್ಮಕ ಮತ್ತು ಸಮಾಜವಾದಿ ಆಡಳಿತದ ಅಭ್ಯಾಸಕ್ಕೆ (ರೂಢಿಗೆ) ಪರಿಣಾಮಕಾರಿ ಪೌರರನ್ನು ಸೃಷ್ಟಿಸುವ ಜವಾಬ್ದಾರಿ ತೆಗೆದುಕೊಳ್ಳುತ್ತದೆ.

### 1.3.3 ವಿವಿಧ ಕಾಲಘಟ್ಟಗಳಲ್ಲಿ ಸಮಾಜ ವಿಜ್ಞಾನ ಕುರಿತ ಭಾರತೀಯ ದೃಷ್ಟಿಕೋನಗಳು.

ಸಮಾಜ ವಿಜ್ಞಾನವು ಹಲವು ಕಾಲಘಟ್ಟಗಳಲ್ಲಿ ಭಾರತದ ಶಿಕ್ಷಣ ವ್ಯವಸ್ಥೆಯ ಭಾಗವಾಗಿ ಹೋಗಿದೆ. ಬಹಳ ಹಿಂದಿನಿಂದಲೂ ನೈತಿಕತೆ, ಆದ್ಯಾತ್ಮಿಕತೆ, ಸಾಮಾಜಿಕ ಮೌಲ್ಯಗಳು, ಮತ್ತು ಪ್ರವೃತ್ತಿಗಳು ಜೀವಗಳ ಮತ್ತು ಜೀವನದ ಮಾರ್ಗದರ್ಶಕ ಭಾರತೀಯ ದರ್ಶನವಾಗಿದೆ. ವೇದಗಳು, ಉಪನಿಷತ್ತುಗಳು, ಸ್ಮೃತಿಗಳು, ಪುರಾಣಗಳು, ರಾಮಾಯಣ, ಮಹಾಭಾರತ ಇತ್ಯಾದಿಗಳು ಸಾಮಾಜಿಕ ಮೌಲ್ಯಗಳು ಮತ್ತು ಆರೋಗ್ಯಕರ ಜೀವನ ತತ್ವಗಳನ್ನೊಳಗೊಂಡಿರುವ ಇತಿಹಾಸ ಪೂರ್ವ (ಪ್ರಾಗೇತಿಹಾಸ) ಆರಂಭಿಕ ಇತಿಹಾಸ ಕಾಲದ ಗ್ರಂಥಗಳಾಗಿವೆ. ಕೌಟಿಲ್ಯನ ಅರ್ಥಶಾಸ್ತ್ರ, ವಿಷ್ಣುಶರ್ಮನ ಪಂಚತಂತ್ರ ಮುಂತಾದವು ಸಮಾಜ ವಿಜ್ಞಾನದ ತತ್ವ ಸಿದ್ಧಾಂತಗಳನ್ನೊಳಗೊಂಡಿರುವ ಪ್ರಾಚೀನ ಭಾರತದ ಕೆಲವು ರಚನೆಗಳು ಅಥವಾ ಕೃತಿಗಳಾಗಿವೆ. ಬೌದ್ಧಗ್ರಂಥಗಳು, ಜೈನ ಗ್ರಂಥಗಳು, ಇಸ್ಲಾಮಿಕ್ ಗ್ರಂಥಗಳು, ಭಕ್ತಿ ಗ್ರಂಥಗಳು ಮುಂತಾದ ಆರಂಭಿಕ ಮಧ್ಯಯುಗದ ಮತ್ತು ಮಧ್ಯಯುಗದ ಸಾಹಿತ್ಯಕ ಪರಂಪರೆಗಳು ಒಂದಲ್ಲ ಒಂದು ರೀತಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳು ಮತ್ತು ಪರಂಪರೆಗಳ ಗ್ರಂಥಗಳೆಂದು ಪರಿಗಣಿಸಲ್ಪಟ್ಟಿವೆ. ಇವೆಲ್ಲ ಸಂದರ್ಭಗಳನ್ನು ಉಲ್ಲೇಖಿಸುತ್ತ ಪ್ರಾಚೀನ ಹಾಗೂ ಮಧ್ಯಯುಗಗಳೆರಡರಲ್ಲೂ ಸಮಾಜವಿಜ್ಞಾನವು ಭಾರತದ ಶಿಕ್ಷಣ ಮತ್ತು ಸಾಂಸ್ಕೃತಿಕ ವ್ಯವಸ್ಥೆಯ ಭಾಗವಾಗಿತ್ತೆಂದು

ನಾವು ಹೇಳಬಹುದು. ಆದರೆ 18/19ನೆಯ ಸಮಾಜ ವಿಜ್ಞಾನವು ಭಾರತದ ಉನ್ನತ ಶಿಕ್ಷಣ / ವಿಶ್ವವಿದ್ಯಾಲಯ ಶಿಕ್ಷಣದ ಭಾಗವಾಗಿದ್ದು ಶತಮಾನದಿಂದೀಚೆಗೆ ಗಾಂಧೀಜಿಯವರ ಮೂಲ ಶಿಕ್ಷಣ ರೂಪಗೊಂಡ ನಂತರ ಸಮಾಜ ವಿಜ್ಞಾನವು ಭಾರತದ ಶಾಲಾ ಶಿಕ್ಷಣ ವ್ಯವಸ್ಥೆಯ ಔಪಚಾರಿಕ ಭಾಗವಾಗಿದೆ ಈಗ ಶಾಲಾ ಮಟ್ಟದ ಸಮಾಜ ವಿಜ್ಞಾನವನ್ನು ಕಾಲಕಾಲಕ್ಕೆ ರೂಪಿಸುವ ಯೋಜನೆಗಳು ಮತ್ತು ನೀತಿಗಳು ಹೇಗೆ ಕಾಣುತ್ತವೆ ಎಂಬುದನ್ನು ಪರಿಶೀಲಿಸೋಣ.

ಪ್ರೌಢಶಿಕ್ಷಣ ಆಯೋಗ (1952– 53) ಹೀಗೆ ಹೇಳಿದೆ

ಒಂದು ಪದವಾಗಿ ಸಮಾಜ ಅಧ್ಯಯನವು ಭಾರತದ ಶಿಕ್ಷಣದಲ್ಲಿ ತುಲನಾತ್ಮಕವಾಗಿ ಹೊಸದಾಗಿದೆ. ಸಾಂಪ್ರದಾಯಿಕವಾಗಿ ಇತಿಹಾಸ ಭೂಗೋಳ ಅರ್ಥಶಾಸ್ತ್ರ, ಪೌರನೀತಿ, ಮುಂತಾದುವುಗಳೊಂದಿಗೆ ಸಂಬಂಧಿಸಿದ ಕ್ಷೇತ್ರವನ್ನು ಆವರಿಸುವ ಉದ್ದೇಶವಿದೆ.

ಆದ್ದರಿಂದ ಅಧ್ಯಯನದ ಈ ಇಡಿಯ ಸಮೂಹವನ್ನು ವಿದ್ಯಾರ್ಥಿಗಳು ಕುಟುಂಬ ಸಮುದಾಯ, ರಾಜ್ಯ ರಾಷ್ಟ್ರಗಳನ್ನೊಳಗೊಂಡ ತಮ್ಮ ಸಾಮಾಜಿಕ ಪರಿಸರಕ್ಕೆ ಹೊಂದಿಕೊಳ್ಳುವಂತೆ ಮಾಡುವ ಉದ್ದೇಶ ಹೊಮದಿರುವ ಅಖಂಡ ಕ್ಷೇತ್ರವೆಂದು ಕಾಣಬೇಕಾಗಿದೆ. ಇದರಿಂದಾಗಿ ಸಮಾಜ ಈಗಿನ ಸ್ವರೂಪ ಪಡೆದುಕೊಂಡಿರುವುದು ಹೇಗೆ ಎಂದುಗ್ರಹಿಸಿ ತಾವು ಜೀವಿಸುತ್ತಿರುವ ಪರಿಸರದ ಸಾಮಾಜಿಕ ಶಕ್ತಿಗಳ ವ್ಯೂಹವನ್ನು ಮತ್ತು ಚಲನೆಯನ್ನು ವ್ಯಾಖ್ಯಾನಿಸಲು ಸಮರ್ಥರಾಗಬಹುದು.

ಶಿಕ್ಷಣ ಆಯೋಗ (1964–66) ಹೀಗೆ ಹೇಳಿದೆ.

ಸಮಾಜ ಅಧ್ಯಯನ ಬೋಧನೆಯ ಗುರಿಯು ವಿದ್ಯಾರ್ಥಿಗಳಿಗೆ ತಮ್ಮ ಸಮುದಾಯ ರಾಜ್ಯ, ರಾಷ್ಟ್ರ ಹಾಗೂ ವಿಶ್ವದ ವ್ಯವಹಾರಗಳಲ್ಲಿ ಚತುರತೆಯಿಂದ ಭಾಗವಹಿಸಲು ಅತ್ಯಗತ್ಯವಾದ, ಪರಿಸರದ ಜ್ಞಾನ, ಮಾನವ ಸಂಬಂಧಗಳ ಗ್ರಹಿಕೆ ಮತ್ತು ಮನೋಭಾವ ಹಾಗೂ ಮೌಲ್ಯಗಳನ್ನು ಬೆಳೆಸಿಕೊಳ್ಳಲು ಸಹಾಯ ಮಾಡುವುದೇ ಆಗಿದೆ.

ಹತ್ತು ವರ್ಷ ಶಾಲೆಗಾಗಿ ಪಠ್ಯಕ್ರಮ ಒಂದು ಚೌಕಟ್ಟು ಎನ್‌ಸಿಇಆರ್‌ಟಿ (1975) ಹೀಗೆ ಹೇಳಿದೆ.
1 ಮತ್ತು 2ನೇ ತರಗತಿಗಳಲ್ಲಿ ಪರಿಸರ ಅಧ್ಯಯನ ವಿಷಯವು ಸ್ವಾಭಾವಿಕ ಮತ್ತು ಸಾಮಾಜಿಕ ಪರಿಸರಗಳೆರಡನ್ನೂ ಒಳಗೊಂಡಿರುತ್ತದೆ. ಪ್ರಾಥಮಿಕ ಹಮತದಲ್ಲಿ ಸಮಾಜ ವಿಜ್ಞಾನ ಎಂಬುದಕ್ಕಿಂತ ಸಮಾಜ ಅಧ್ಯಯನ ಎಂಬ ಪದದ ಬಳಕೆ ಹೆಚ್ಚು ಸಮರ್ಪಕವಾಗಿರುತ್ತದೆ. ಏಕೆಂದರೆ ಅದು ಒಂದು ವಿಶಾಲ ಹಾಗೂ ಸಂಯುಕ್ತ ಬೋಧನಾ ಕ್ಷೇತ್ರವನ್ನು ಪ್ರತಿನಿಧಿಸುತ್ತದೆ.

ಪ್ರಾಥಮಿಕ ಮತ್ತು ಪ್ರೌಢಶಿಕ್ಷಣಕ್ಕಾಗಿ ರಾಷ್ಟ್ರೀಯ ಪಠ್ಯಕ್ರಮ (1988) ಹೀಗೆಂದಿದೆ.
"ರಾಷ್ಟ್ರೀಯ ಶಿಕ್ಷಣ ನೀತಿ (1986) ಯು ಎದುರು ನೋಡಿದ ಎಲ್ಲ ಮುಖ್ಯ ಘಟಕಾಂಶಗಳ ಸನ್ನಿವೇಶದಲ್ಲಿ ಶಿಕ್ಷಣ ಒದಗಿಸಲು ಸಮಾಜ ವಿಜ್ಞಾನವು ಬಹುಶಃ ಏಕೈಕ ಮತ್ತು ಅತ್ಯಂತ ಪರಿಣಾಮಕಾರಿ ಸಾಧನವಾಗಿ ಸಾಬೀತಾಗಬಹುದು. ಎನ್.ಆರ್.ಇ. ಎದುರುನೋಡಿದ ಮುಖ್ಯ ಘಟಕಾಂಶಗಳೆಂದರೆ

1. ಭಾರತದ ಸ್ವಾತಂತ್ರ್ಯ ಹೋರಾಟದ ಇತಿಹಾಸ
2. ಸಂವಿಧಾನಾತ್ಮಕ ಬಾಧ್ಯತೆಗಳು
3. ಭಾರತ ಸಾಮಾನ್ಯ ಸಾಮಸ್ಕೃತಿಕ ಪರಂಪರೆಯಂತ ಮೌಲ್ಯಗಳು
4. ಸಮಾನತೆ, ಪ್ರಜಾಪ್ರಭುತ್ವ, ಜಾತ್ಯತೀತತೆ
5. ಲಿಂಗ ಸಮಾನತೆ
6. ಪರಿಸರ ಸಂರಕ್ಷಣೆ
7. ಸಣ್ಣ ಕುಟಂಬದ ರೂಢಿಗಳು

ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (2005, ಪುಟ–50) ಹೀಗೆಂದಿದೆ.

"ಸಮಾಜ ವಿಜ್ಞಾನವು ಸಮಾಜದ ವೈವಿಧ್ಯಮಯ ಕಾಳಜಿಗಳನ್ನು ಆವರಿಸಿದೆ. ಹಾಗೂ ಇತಿಹಾಸ, ಭ ೂಗೋಲ,

ರಾಜ್ಯಶಾಸ್ತ್ರ ಅರ್ಥಶಾಸ್ತ್ರ ಸಮಾಜಶಾಸ್ತ್ರ ಮತ್ತು ಮಾನವಶಾಸ್ತ್ರ ವಿಷಯಗಳಿಂದ ತೆಗೆದುಕೊಂಡ ವ್ಯಾಪಕ ವಿಷಯವಸ್ತುನ್ನೊಳಗೊಂಡಿದೆ ಸಮಾಜವಿಜ್ಞಾನದ ದೃಷ್ಟಿಕೋನಗು ಮತ್ತು ಜ್ಞಾನವು ನ್ಯಾಯಯುತ ಹಾಗೂ ಶಾಂತಿಯುತ ಸಮಾಜಕ್ಕಾಗಿ ಜ್ಞಾನದ ಬುನಾದಿಯನ್ನು ನಿರ್ಮಿಸಲು ಅನಿವಾರ್ಯವಾಗಿದೆ. ವಿಷಯವಸ್ತುವು ಪರಿಚಿತ ಸಾಮಾಜಿಕ ವಾಸ್ತವಿಕತೆಯನ್ನು ವಿಮರ್ಶಾತ್ಮಕವಾಗಿ ಅನ್ವೇಷಿಸುವುದು ಹಾಗೂ ಪ್ರಶ್ನಿಸುವುದರ ಮೂಲಕ ವಿದ್ಯಾರ್ಥಿಗಳ ಜಾಗೃತಿಯನ್ನು ಹೆಚ್ಚಿಸಬೇಕು. ವಿಶೇಷವಾಗಿ ವಿದ್ಯಾರ್ಥಿಗಳ ಸ್ವಂತ ಜೀವನದ ಅನುಭವಗಳ ಹಿನ್ನಲೆಯಲ್ಲಿ ಹೊಸ ಆಯಾಮಗಳನ್ನು ಮತ್ತು ಕಾಳಜಿಗಳನ್ನು ಆಳವಡಿಸುವ ಸಾಧ್ಯತೆಗಳು ಗಣನೀಯವಾಗಿವೆ. ವಿದ್ಯಾರ್ಥಿಗಳಲ್ಲಿ ಸಮಾಜದ ವಿಮರ್ಶಾತ್ಮಕ ಗ್ರಹಿಕೆಯನ್ನು ಬೆಳೆಸಲು ಸಮರ್ಥವಾದ ಅರ್ಥಪೂರ್ಣ ಪಠ್ಯಕ್ರಮ ರೂಪದಲ್ಲಿ ಸಾಮಗ್ರಿಯನ್ನು ಆಯ್ಕೆ ಮಾಡಿ ಸಂಘಟಿಸುವುದು ಒಂದು ಸವಾಲಿನ ಕಾರ್ಯವೇ ಆಗಿದೆ.

ನಿಮ್ಮ ಪ್ರಗತಿ ಪರಿಶೀಲಿಸಿ –2

ಪ್ರಶ್ನೆ: ಪ್ರಾಚೀನ ಭಾರತದ ಸಾಂಸ್ಕೃತಿಕ / ಶೈಕ್ಷಣಿಕ ವ್ಯವಸ್ಥೆಯಲ್ಲಿ ಸಮಾಜ ವಿಜ್ಞಾನ ಕಲಿಕೆಯ ಸ್ಥಾನವನ್ನು ವಿವರಿಸಿ. (ಕೆಳಗೆ ಕೊಟ್ಟಿರುವ ಸ್ಥಳದಲ್ಲಿ ನಿಮ್ಮ ಉತ್ತರ ಬರೆದು ನಂತರ ಘಟಕದ ಕೊನೆಯಲ್ಲಿ ಕೊಟ್ಟಿರುವ ಮಾದರಿ ಉತ್ತರದೊಂದಿಗೆ ಹೋಲಿಸಿ)

––––––––––––––––––––––––––––––––––––––––––––––––––––––––––––––––––

––––––––––––––––––––––––––––––––––––––––––––––––––––––––––––––––––

––––––––––––––––––––––––––––––––––––––––––––––––––––––––––––––––––

## 1.4 ಸಮಾಜದ ಪ್ರಚಲಿತ ಸ್ಥಿತಿಗತಿ

ಪ್ರಚಲಿತ ಸಮಾಜವು ಹಿಂದಿನ ಸಮಾಜಗಳಿಂದ ವಿಕಾಸಗೊಂಡಿದೆ. ವರ್ತಮಾನ್ದ ಆಧುನಿಕಾ ನಂತರ ಪ್ರಚಲಿತ ಸಮಾಜವು ಪ್ರಾಚೀನ ಮಧ್ಯಕಾಲೀನ ಮತ್ತು ಆರಂಭದ ಆಧುನಿಕ ಸಮಾಜಗಳಿಂದ ಹಿಂದಿನ ಸಮಾಜಗಳಲ್ಲಿ ಕಂಡು ಬರದೇ ಕೆಲವು ನಿರ್ದಿಷ್ಟ ಗುಣಲಕ್ಷಣಗಳನ್ನು ಹೊಂದಿದೆ. ಪ್ರಸ್ತಕ ಸಾಮಾಜಿಕ ವಿದ್ಯಮಾನಗಳು ಮತ್ತು ಸವಾಲುಗಳನ್ನು ಮತ್ತು ಈ ಪ್ರಚಲಿತ ಸಾಮಾಜಿಕ ವಿದ್ಯಮಾನಗಳು ಮತ್ತು ಸವಾಲುಗಳ ಸನ್ನಿವೇಶದಲ್ಲಿ ಸಮಾಜ ವಿಜ್ಞಾನದ ಪಾತ್ರವನ್ನು ಚರ್ಚಿಸೋಣ.

### 1.4.1 ಪ್ರಚಲಿತ ಸಾಮಾಜಿಕ ವಿದ್ಯಮಾನಗಳು ಮತ್ತು ಸವಾಲುಗಳು

21ನೆಯ ಶತಮಾನದ ಪ್ರಚಲಿತ ಸಮಾಜವು ಅಭಿವೃದ್ಧಿ, ಬದಲಾವಣೆಗಳು, ತುಮುಲಗಳು, ವಿವಾದಾಂಶಗಳು, ಮತ್ತು ಸವಾಲುಗಳನ್ನು ಅನುಭವಿಸು ಸಮಾಜವಾಗಿದೆ. ಈ ಕೆಳಕಂಡ ಅಂಶಗಳು ಪ್ರಚಲಿತ ಸಮಾಜದ ವ್ಯವಸ್ಥೆ ಮತ್ತು ವಿದ್ಯಮಾನಗಳನ್ನು ನಿರೂಪಿಸಬಹುದು.

1. ಪ್ರಚಲಿತ ಸಮಾಜವು ವಿಜ್ಞಾನ ಮತ್ತು ತಂತ್ರಜ್ಞಾನಗಳ ಕ್ಷಿಪ್ರ ಬೆಳವಣಿಗೆಯ ಆಧಾರದ ಮೇಲೆ ವೇಗವಾಗಿ ಬೆಳೆಯುತ್ತಿರುವ ಸಮಾಜವಾಗಿದೆ.
2. ಜೀವನದ ಹಲವಾರು ಕ್ಷೇತ್ರಗಳಲ್ಲಿ (ಎಂದರೆ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಧಾರ್ಮಿಕ ಇತ್ಯಾದಿ) ಸಂಕೀರ್ಣತೆ, ವೈವಿದ್ಯತೆ, ವಿಭಿನ್ನತೆ ಮತ್ತು ತಾತಮ್ಯಗಳು ಈಗಿನ ಸಮಾಜದ ಲಕ್ಷಣಗಳಾಗಿವೆ.
3. ಆಧುನೀಕರಣ, ಔದ್ಯೋಗೀಕರಣ, ನಗರೀಕರಣ, ಪ್ರಾವೀಣ್ಯ, ಯಾಂತ್ರಿಕತೆ, ಜಾಗತೀಕರಣ, ಖಾಸಗೀಕರಣ, ಉದಾರೀಕರಣ, ಯೋಜಿತ ಅಭಿವೃದ್ಧಿ ಇತ್ಯಾದಿಗಳ ಪ್ರಚಲಿತ ಸಮಾಜದ ಮೂಲಭೂತ ಲಕ್ಷಣಗಳಾಗಿವೆ.
4. ಪ್ರಜಾಪ್ರಭುತ್ವ, ಸಮಾಜದ, ಜಾತ್ಯತೀತತೆ, ಸ್ವಾಂತಂತ್ರ್ಯ ಸಮಾನತೆ, ಭ್ರಾತೃತ್ವ, ನ್ಯಾಯ, ವೈಜ್ಞಾನಿಕ ಪ್ರವತ್ತಿ, ವೈಯಕ್ತಿಕ ಹಕ್ಕು, (ತರ್ಕಸಮ್ಮತ) ವಿವೇಚನಾಗೀಳ ಚಿಂತನೆ ಮುಂತಾದ ಹೊಸ ಸಾಮಾಜಿಕ ಮೌಲ್ಯಗಳು ಆಧುನಿಕ ಸಾಮಾಜಿಕ ವ್ಯವಸ್ಥೆಯ ಫಲಿತಗಳಾಗಿವೆ.
5. ವ್ಯಾಪಕವಾದ ಸಾಮಾಜಿಕ ಚಲನೆ, ಬಹು ಸಾಂಸ್ಕೃತಿಕತೆ, ಸಾಂಸ್ಕೃತಿಕ ಬಹುತ್ವ, ಬಹುಭಾಷಿತ್ವ, ಕೆಟಟ ಸಾಮಾಜಿಕ ಆಚರಣೆಗಳ ಇಳಿಮುಖ ಇತ್ಯಾದಿಗಳು ಆಧುನಿಕ ಸಮಾಜದಲ್ಲಿ ಹರಡಿವೆ.
6. ಪ್ರಸಕ್ತ ಸಮಾಜವು ಬಂಡವಾಳ ಶಾಹಿತ್ವ ಗ್ರಾಮೀಣ ನಗರ ಭಿನ್ನತೆ ಕೊಳಚೆ ಪ್ರದೇಶಗಳ ಬೆಳವಣಿಗೆ, ಸಾಮಾಜಿಕ ಪ್ರತ್ಯೇಕತೆ, ಜನಸಂಖ್ಯಾಸಮಸ್ಯೆ, ಕೌಟುಂಬಿಕ ಅವ್ಯವಸ್ಥೆ, ಸಾಮಾಜಿಕ ಅಪರಾಧಗಳು, ಕಾಳಸಂತೆ,

ಸಾಮಾಜಿಕ ಅಶಾಂತಿ, ಪ್ರಾದೇಶಿಕತೆ, ಹಿಂದುಳಿಯುವಿಕೆ, ಪರಿಸರಾತ್ಮಕ ಹಿಂಸೆ, ಮಾಹಿತಿ ಹಾಗೂ ಜ್ಞಾನಸ್ಫೋಟಗಳನ್ನು ನಿಭಾಯಿಸಲು ಸಮಸ್ಯೆ ಮುಂತಾದುವುಗಳ ಆಧಾರದ ಮೇಲೆ ಬಡತನ, ನಿರುದ್ಯೋಗ ಶೋಷಣೆ ಮುಂತಾದ ಅಪಾರ ಸಂಖ್ಯೆಯ ಹೊಸ ಸಾಮಾಜಿಕ ಸಮಸ್ಯೆಗಳನ್ನು ಸವಾಲುಗಳನ್ನು ಎದುರಿಸುತ್ತಿದೆ.

**1.4.2 ತಾರತಮ್ಯಗಳಿರುವ ಸಮಾಜದಲ್ಲಿ ಸಮಾಜವಿಜ್ಞಾನದ ವ್ಯಾಪ್ತಿ.**

ತಾರತಮ್ಯದಿಂದ ಕೂಡಿದ ಸಮಾಜವು ವೈವಿಧ್ಯತೆಯುಳ್ಳ ಹಾಗೂ ಸಂಕೀರ್ಣ ಸಮಾಜವಾಗಿದ್ದು ಹಲವು ಸಾಮಾಜಿಕ ಸಮಸ್ಯೆಗಳನ್ನು ಸವಾಲುಗಳನ್ನು ಎದುರಿಸುತ್ತದೆ. ವರ್ತಮಾನ ಸಮಾಜವು ಹಲವಾರು ಸಾಮಾಜಿಕ ಸಮಸ್ಯೆಗಳಿರುವ ತಾರತಮ್ಯದಿಂದ ಕೂಡಿದ ಸಮಾಜವಾಗಿದೆ. ವರ್ತಮಾನದ ಸಮಾಜವು ಎದುರಿಸುತ್ತಿರುವ ಕೆಲವು ಸಾಮಾಜಿಕ ಸಮಸ್ಯೆಗಳನ್ನು ಈ ಘಟಕದ ಮೇಲಿನ ವಿಭಾಗ (1.4.1) ದಲ್ಲಿ ತಿಳಿಸಲಾಗಿದೆ. ವಿಜ್ಞಾನ ಮತ್ತು ತಂತ್ರಜ್ಞಾನ, ಮುಂದುವರೆದ ಮಾಧ್ಯಮಗಳು ಮತ್ತಿತರ ಹಲವಾರು ಅಂಶಗಳಿಂದಾಗಿ ಇಂದಿನ ಸಮಾಜ ವೇಗಗತಿಯಲ್ಲಿ ಬದಲಾಗುತ್ತಿದ್ದಂತೆ ದಿನೇ ದಿನೇ ಹೊಸ ಸಾಮಾಜಿಕ ಸಮಸ್ಯೆಗಳು ಹುಟ್ಟಿಕೊಳ್ಳುತ್ತಿವೆ. ಅದಕ್ಕನುಗುಣವಾಗಿಯೇ ಇಂತಹ ಹೊಸ ಸಾಮಾಜಿಕ ಸಮಸ್ಯೆಗಳನ್ನು ಸಂಬೋಧಿಸಲು ಹೊಸ ಸಾಮಾಜಿಕ ವಿಜ್ಞಾನಗಳು ಹೊರಹೊಮ್ಮಿ ಶಿಕ್ಷಣ ವ್ಯವಸ್ಥೆಯ ಭಾಗವಾಗುತ್ತಿವೆ. 18 ಮತ್ತು 19 ನೆಯ ಶತಮಾನಗಳಲ್ಲಿ ಸಾಮಾಜಿಕ ಕಾರ್ಯ, ಸಾರ್ವಜನಿಕ ಆಡಳಿತ, ಅಪರಾಧ ವಿಜ್ಞಾನ ಮನೋವಿಜ್ಞಾನ ಮತ್ತು ಜನಸಂಖ್ಯಾ ಶಾಸ್ತ್ರ ಮುಂತಾದ ಸಮಾಜ ವಿಜ್ಞಾನ ವಿಷಯಗಳ ಅಸ್ತಿತ್ವವೇ ಇರಲಿಲ್ಲ. ಆದರೆ, ಕಳೆದ ಮತ್ತು ಈಗಿನ ಶತಮಾನಗಳಲ್ಲಿ ಈ ವಿಷಯಗಳು ತಕ್ಕುದಾದ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತಿವೆ ಏಕೆಂದರೆ ಅನೇಕ ಹೊಸ ಸಾಮಾಜಿಕ ಸಮಸ್ಯೆಗಲು ಅವುಗಳೊಂದಿಗೆ ಸಂಬಂದ ಹೊಂದಿವೆ. ಉದಾಹರಣೆಗೆ 18ನೆಯ ಮತ್ತು 19ನೆಯ ಶತಮಾನದಲ್ಲಿಯೂ ಸಹ ಜನಸಂಖ್ಯೆಗೆ ಸಂಬಂಧಿಸಿದ ವಿವಾದಾಂಶಗಳು (ವಿಚಾರಗಳು) ವಿಶೇಷವಾಗಿ ಜನಸಂಖ್ಯಾ ಬೆಳವಣಿಗೆಯು ಪ್ರಧಾನ ಸಾಮಾಜಿಕ ವಿಚಾರವೇ ಆಗಿರಲಿಲ್ಲ, ಆದರೆ ಕಳೆದ ಹಾಗೂ ಈಗಿನ ಶತಮಾನಗಳಲ್ಲಿ ಜನಸಂಖ್ಯಾ ಬೆಳವಣಿಗೆಗೆ ಸಂಬಂಧಿಸಿದ ಸಂಕೀರ್ಣತೆಗಳು ಸಮಾಜ ಜೀವನದ ಅನೇಕ ಅಂಶಗಳ ಮೇಲೆ ಪರಿಣಾಮ ಬೀರಿದ್ದು, ಇದರಿಂದಾಗಿ ಜನಸಂಖ್ಯಾಶಾಸ್ತ್ರವು ಶಿಕ್ಷಣ ವ್ಯವಸ್ಥೆಯ ಮುಖ್ಯ ಭಾಗವಾಗಿ ವಿಕಾಸಗೊಂಡಿದೆ. ಆಧುನಿಕ ಪೂರ್ವ / ಆರಂಭಿಕ ಆಧುನಿಕ ಸಮಾಜಗಳಲ್ಲಿ ಜನರ ಜೀವನ ಸರಳವಾಗಿದ್ದು ಅಪರಾಧ ಚಟುವಟಿಕೆಗಳು ಕಡಿಮೆ ಇದ್ದುವು. ಆದರೆ, ಆಧುನಿಕ ಔದ್ಯೋಗಿಕ ಸಮಾಜದಲ್ಲಿ ಮಾನವ ಜೀವನದ ಪ್ರತಿಯೊಂದು ಕ್ಷೇತ್ರದಲ್ಲಿಯೂ ಅಪರಾಧ ಚಟುವಟಿಕೆಗಳನ್ನು ಕಾಣಬಹುದು. ಅಪರಾಧ ಚಟುವಟಿಕೆಗಳಿಗೆ ಸಂಬಂಧಿಸಿದ ಎಲ್ಲ ಉಪದ್ರವಗಳನ್ನು ತಡೆಯಲು ಅಪರಾಧ ವಿಜ್ಞಾನ ಎಂಬ ಸಮಾಜ ವಿಜ್ಞಾನ ವಿಷಯ ರೂಪುಗೊಂಡು ಶಿಕ್ಷಣ ವ್ಯವಸ್ಥೆಯ ಮುಖ್ಯ ಭಾಗವಾಗಿದೆ. ಇದರಂತೆಯೇ ಅನೇಕ ಸಾಮಾಜಿಕ ವಿಜ್ಞಾನ ವಿಷಯಗಳು ದಿನೇ ದಿನೇ ಹೊರಹೊಮ್ಮತ್ತಿದ್ದು ಸಾಮಾಜಿಕ ಸಮಸ್ಯೆಗಳ ಬದಲಾದ ಸ್ವರೂಪದ ಸವಾಲನ್ನು ಎದುರಿಸತೊಡಗಿವೆ.

ಆದ್ದರಿಂದ ಸಮಾಜ ವಿಜ್ಞಾನದ ವ್ಯಾಪ್ತಿಯು ಕ್ರಮೇಣ ವಿಶಾಲವಾಗುತ್ತಿದೆ.

ನಿಮ್ಮ ಪ್ರಗತಿ ಪರಿಶೀಲಿಸಿ –3

(ಸೂಚನೆ : ನಿಮ್ಮ ಉತ್ತರವನ್ನು ಕೆಳಗೆ ಕೊಟ್ಟಿರುವ ಸ್ಥಳದಲ್ಲಿ ಬರೆದು ನಂತರ ಘಟಕಾಂತ್ಯದಲ್ಲಿರುವ ಮಾದರಿ ಉತ್ತರದೊಂದಿಗೆ ಹೋಲಿಸಿ)
ಪ್ರಶ್ನೆ : ದಿನದಿಂದ ದಿನಕ್ಕೆ ಹೊಸ ಸಾಮಾಜಿಕ ವಿಜ್ಞಾನಗಳು ಏಕೆ ಹೊರಹೊಮ್ಮುತ್ತಿವೆ?
____________________________________________________________
____________________________________________________________
_______________________________________________

**1.5 ಸಮಾಜ ವಿಜ್ಞಾನದ ಪಟಕಾಂಶಗಳು**

ಸಮಾಜ ವಿಜ್ಞಾನವು ಮೂಲತಃ ಅಧ್ಯಯನದ ಒಂದು ಕ್ಷೇತ್ರವಾಗಿದೆ. ಸಮಾಜ ವಿಜ್ಞಾನದ ಹುಟ್ಟು ಕೇವಲ ಸ್ವಲ್ಪ ಸಮಯದ ಹಿಂದಿನದೇ ಆಗಿದ್ದರೂ ಅದು ಇತರ ಅಧ್ಯಯನ ಕ್ಷೇತ್ರಗಳ ಉದ್ದಗಲದಲ್ಲಿ ಮುಖ್ಯ ಅಧ್ಯಯನ ಕ್ಷೇತ್ರವಾಗಿ

ನೆಲೆಗೊಂಡಿದೆ. ಸಾಮಾಜಿಕ ವಿದ್ಯಮಾನಗಳಿಗೆ ಸಂಬಂಧಿಸಿದಂತೆ, ಕಾಲ ಸಂದರ್ಭ ಮತ್ತು ಸವಾಲುಗಳ ಪ್ರಭಾವವು ಸಮಾಜ ವಿಜ್ಞಾನವನ್ನು ಒಂದು ಅಧ್ಯಯನ ಕ್ಷೇತ್ರವನ್ನಾಗಿಸಿವೆ. ಸಮಾಜ ವಿಜ್ಞಾನ ಒಂದು ಅಧ್ಯಯನ ಕ್ಷೇತ್ರ ಹೇಗೆ ಮತ್ತು ಶಾಲಾ ಹಂತದಲ್ಲಿ ಸಮಾಜ ವಿಜ್ಞಾನದ ಬೋಧನಾ ಘಟಕಾಂಶಗಳಾವುವು ಎಂಬುದನ್ನು ಈಗ ಚರ್ಚಿಸೋಣ.

### 1.5.1 ಸಮಾಜವಿಜ್ಞಾನ ಕುಟುಂಬದಲ್ಲಿ ಪರಿಗಣಿಸಲಾಗಿರುವ ವಿಷಯಗಳು

ಜ್ಞಾನವು ಒಂದು ಏಕೀಕೃತ ಪರಿಕಲ್ಪನೆಯಾಗಿದ್ದು ಅದನ್ನು ಅಭೇದ್ಯ ಕಟ್ಟುನಿಟ್ಟಾದ ವಿಭಾಗಗಳಂತೆ ಪ್ರತ್ಯೇಕವಾದ ವಿವಿಧ ವಿಷಯಗಳಾಗಿ ತುಂಡು ಮಾಡಲಾಗುವುದಿಲ್ಲ. ಬದಲಾಗಿ ಜ್ಞಾನವನ್ನು ಪರಸ್ಪರ ಸಾಕಷ್ಟು ಸಂಪರ್ಕ ಹೊಂದಿರುವ ವಿಶಾಲವಾದ ಕ್ಷೇತ್ರಗಳನ್ನಾಗಿ ವರ್ಗೀಕರಿಸಬಹುದು. ಜ್ಞಾನಕ್ಕೆ ವಿಶಾಲ ಕ್ಷೇತ್ರದ ಪದ್ಧತಿ / ಕ್ರಮವನ್ನು ಈ ಕೆಳಗಿನ ಪಟ್ಟಿಯಿಂದ ನಿರ್ಣಯಿಸಬಹುದು. (ಊಹಿಸಬಹುದು)
ಜ್ಞಾನಕ್ಕೆ ವಿಶಾಲ ಕ್ಷೇತ್ರದ ಕ್ರಮ.

| ಅಧ್ಯಯನದ ಕ್ಷೇತ್ರಗಳು | ಅಧ್ಯಯನ ಕ್ಷೇತ್ರಗಳಡಿ ಪರಿಗಣಿಸಿರುವ ವಿಷಯಗಳು |
|---|---|
| ಭೌತ ವಿಜ್ಞಾನಗಳು | ಭೌತಶಾಸ್ತ್ರ<br>ರಸಾಯನ ಶಾಸ್ತ್ರ<br>ಭೂವಿಜ್ಞಾನ ಇತ್ಯಾದಿ |
| ಗಣಿತ ವಿಜ್ಞಾನ | ಬೀಜಗಣಿತ<br>ಅಂಕಗಣಿತ<br>ರೇಖಾಗಣಿತ<br>ಮಾಪನಶೀಲ ವಿಜ್ಞಾನ ಇತ್ಯಾಧಿ |
| ಜೀವ ವಿಜ್ಞಾನಗಳು | ಸಸ್ಯ ಶಾಸ್ತ್ರ<br>ಪ್ರಾಣಿಶಾಸ್ತ್ರ<br>ಜೈವಿಕ ತಂತ್ರಜ್ಞಾನ<br>ಸೂಕ್ಷ್ಮಜೀವ ವಿಜ್ಞಾನ |
| ಸಾಮಾಜಿಕ ವಿಜ್ಞಾನಗಳು | ಇತಿಹಾಸ<br>ಅರ್ಥಶಾಸ್ತ್ರ<br>ರಾಜ್ಯಶಾಸ್ತ್ರ<br>ಮನೋವಿಜ್ಞಾನ ಇತ್ಯಾಧಿ |
| ಭಾಷಾ ಅಧ್ಯಯನ | ಸಾಹಿತ್ಯ<br>ಭಾಷಾಶಾಸ್ತ್ರ<br>ನಾಟಕ ಮತ್ತು ಕಾದಂಬರಿ ಇತ್ಯಾದಿ |

ಜ್ಞಾನದ ಒಂದು ಶಾಖೆಯನ್ನು ಅಧ್ಯಯನಕ್ಷೇತ್ರವೆಂದು ಕರೆಯಬೇಕಾದರೆ ಅದು ಕೆಲವು ನಿಯಮಗಳನ್ನು ಪೂರೈಸಬೇಕು. ಒಂದು ಅಧ್ಯಯನ ಕ್ಷೇತ್ರದ ಸ್ವರೂಪವನ್ನು ನಿರೂಪಿಸುವ ಮೂರು ಮುಖ್ಯ ನಿಯಮಗಳು ಈ ಕೆಳಕಂಡಂತಿವೆ.

1. ಒಂದು ಕ್ಷೇತ್ರವು ಹಲವಾರು ಪ್ರತ್ಯೇಕ ವಿಷಯಗಳನ್ನೊಳಗೊಂಡಿರಬೇಕು.
2. ಒಂದು ಕ್ಷೇತ್ರದಡಿಯಲ್ಲಿ ಬರುವ ವಿಷಯಗಳ ನಡುವೆ ಕ್ರಿಯಾತ್ಮಕ ಸಂಬಂಧ ಹಾಗೂ ವ್ಯತ್ಯಾಸಗಳಿರುತ್ತವೆ.
3. ವಿವಿಧ ಕ್ಷೇತ್ರಗಳು ಅಥವಾ ವಿವಿಧ ಕ್ಷೇತ್ರಗಳ ವಿಷಯಗಳ ನಡುವೆ ಕ್ರಿಯಾತ್ಮಕ ಸಂಬಂಧಗಳು ಮತ್ತು ವ್ಯತ್ಯಾಸಗಳು ಇರುತ್ತವೆ.

ಜ್ಞಾನದ ಒಂದು ಶಾಖೆಯಾಗಿ ಸಾಮಾಜಿಕ ವಿಜ್ಞಾನಗಳು ಮೇಲಿನ ಎಲ್ಲ ಮೂರು ನಿಯಮಗಳನ್ನು ಪೂರೈಸುತ್ತದೆ. ಮೊದಲನೆಯದಾಗಿ ಸಾಮಾಜಿಕ ವಿಜ್ಞಾನಗಳು ಇತಿಹಾಸ, ಭೂಗೋಳ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಕಾನೂನು ಮುಂತಾದ ಹಲವು ಪ್ರತ್ಯೇಕ ವಿಷಯಗಳನ್ನು ಒಳಗೊಂಡಿದೆ. ಎರಡನೆಯದಾಗಿ ಎಲ್ಲ ಸಮಾಜ ವಿಜ್ಞಾನ ವಿಷಯಗಳ ನಡುವೆ ಕ್ರಿಯಾತ್ಮಕ ಸಂಬಂಧ ಹಾಗೂ ವ್ಯತ್ಯಾಸಗಳಿವೆ. ಸಮಾಜ ವಿಜ್ಞಾನ ವಿಷಯಗಳು ಪರಸ್ಪರ ಸಂಬಂಧಿಸಿವೆ

ಏಕೆಂದರೆ ಮಾನವ ಸಂಬಂಧವು ಎಲ್ಲ ಸಮಾಜ ವಿಜ್ಞಾನಗಳ ಸಮಾನ ಕೆಳಮನೆ (ಭೇದ) ವಾಗಿದೆ. ಜೊತೆಗೆ ಎಲ್ಲ ಸಮಾಜ ವಿಜ್ಞಾನ ವಿಷಯಗಳ ನಡುವೆ ಎದ್ದು ಕಾಣುವ ವ್ಯತ್ಯಾಸಗಳಿವೆ. ಉದಾಹರಣೆಗೆ ಅರ್ಥಶಾಸ್ತ್ರವು ಸಮಾಜದಲ್ಲಿ ಹಣಕಾಸಿನ ಸಂಬಂಧಗಳನ್ನು ಅಧ್ಯಯನ ಮಾಡುತ್ತದೆ ರಾಜ್ಯಶಾಸ್ತ್ರವು ಸಮಾಜದ ಆಡಳಿತ ವ್ಯವಸ್ಥೆಯ ಅಧ್ಯಯನ ಮಾಡುತ್ತದೆ, ಮತ್ತು ಕಾನೂನು ಸಮಾಜದ ನ್ಯಾಯಿಕ ಸಂಸ್ಥೆಗಳನ್ನು ಅಧ್ಯಯನ ಮಾಡುತ್ತದೆ. ಮೂರನೆಯದಾಗಿ ಸಮಾಜ ವಿಜ್ಞಾನ ಕ್ಷೇತ್ರದ ಮತ್ತು / ಅಥವಾ ಸಮಾಜ ವಿಜ್ಞಾನ ಕ್ಷೇತ್ರದ ವಿಷಯಗಳು ಇತರ ಕ್ಷೇತ್ರಗಳು ಮತ್ತು / ಅಥವಾ ಇತರ ಕ್ಷೇತ್ರಗಳ ವಿಷಯಗಳೊಂದಿಗೆ ಕ್ರಿಯಾತ್ಮಕ ಸಂಬಂಧವನ್ನು ಮತ್ತು ವ್ಯತ್ಯಾಸಗಳನ್ನು ಹೊಂದಿದೆ. ಇದಕ್ಕೆ ಸಂಬಂಧಿಸಿದ ಒಂದು ಉದಾಹರಣೆಯನ್ನು ಇಲ್ಲಿ ನೀಡಲಾಗಿದೆ. ಅಧ್ಯಯನದ ಎಲ್ಲ ಕ್ಷೇತ್ರಗಳೂ ಜ್ಞಾನದ ಶಾಖೆಗಳಾಗಿರುವುದರಿಂದ ಮತ್ತು ಜ್ಞಾನವು ಮೂಲತಃ ಒಂದು ಏಕೀಕೃತ ಪರಿಕಲ್ಪನೆ / ವಿದ್ಯಮಾನವಾಗಿರುವುದರಿಂದ ಸಮಾಜಿಕ ವಿಜ್ಞಾನ ಕ್ಷೇತ್ರವು ಅಥವಾ ಸಮಾಜ ವಿಜ್ಞಾನ ವಿಷಯಗಳು ಇತರ ಕ್ಷೇತ್ರಗಳು ಮತ್ತು ಅಥವಾ ಇತರ ಕ್ಷೇತ್ರಗಳ ವಿಷಯಗಳಿಗೆ ಸಮಾನವಾದ ಅನೇಕ ಲಕ್ಷಣಗಳನ್ನು ಹೊಂದಿದೆ / ಹೊಂದಿವೆ. ಇದಕ್ಕೆ ಸಂಬಂಧಿಸಿದ ವಿವರಗಳನ್ನು ಈ ಘಟಕದ ಮುಂಬರುವ ಭಾಗದಲ್ಲಿ ಚರ್ಚಿಸಲಾಗಿದೆ. ಅಲ್ಲದೆ, ಸಾಮಾಜಿಕ ವಿಜ್ಞಾನ ಕ್ಷೇತ್ರ ಮತ್ತು ಅದರ ವಿಷಯಗಳು ಇತರ ಕ್ಷೇತ್ರಗಳು ಮತ್ತು ಅವುಗಳ ವಿಷಯಗಳಿಗಿಂತ ಭಿನ್ನವಾಗಿದೆ / ಬಿನ್ನವಾಗಿವೆ. ಸಾಮಾಜಿಕ ವಿಜ್ಞಾನ ವಿಷಯಗಳು  ಸಾಮಾಜಿಕ ಸಂಬಂಧಗಳ ಅಧ್ಯಯನ ಮಾಡಿದರೆ, ಭೌತಿಕ ವಿಜ್ಞಾನವು ಪ್ರವಾಹಗಳು, ಶಾಖ ಬೆಳಕು, ರಾಸಾಯನಿಕಗಳು ಇತ್ಯಾದಿ ಭೌತಿಕ ವಿಷಯ / ವಸ್ತುಗಳು / ಚಟುವಟಿಕೆಗಳ ಅಧ್ಯಯನ ಮಾಡುತ್ತದೆ, ಜೈವಿಕ ವಿಜ್ಞಾನ ವಿಷಯಗಳು ಪ್ರಾಣಿಗಳ ಮತ್ತು ಸಸ್ಯಗಳ ಜೀವನದ ಅಧ್ಯಯನ ಮಾಡುತ್ತವೆ, ಗಣಿತ ವಿಜ್ಞಾನ ವಿಷಯಗಳು ಸಂಖ್ಯಾ ವ್ಯವಸ್ಥೆ ಮತ್ತು ಸಂಬಂಧಿತ ಪರಿಕಲ್ಪನೆಗಳ ಅಧ್ಯಯನ ಮಾಡುತ್ತವೆ.

ಸಾಮಾಜಿಕ ವಿಜ್ಞಾನ ಕುಟುಂಬದಲ್ಲಿ ಹಲವು ಸಂಖ್ಯೆಯ ವಿಷಯಗಳನ್ನು ಅಳವಡಿಸಲಾಗಿದೆ. ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ತತ್ವಶಾಸ್ತ್ರ ಮುಂತಾದ ಕೆಲವು ಸಾಮಾಜಿಕ ವಿಜ್ಞಾನ ವಿಷಯಗಳು ಅತ್ಯಂತ ಹಳೆಯದಾಗಿದ್ದು, ಮಾನವ ಹಕ್ಕುಗಳು, ಸಾರ್ವಜನಿಕ ಆಡಳಿತ, ಸಾಮಾಜಿಕ ಕಾರ್ಯಗಳು ಮುಂತಾದವು ಇನ್ನೂ ಬೆಳೆಯುತ್ತಿರುವ / ಕಿರಿಯ ಹಂತದಲ್ಲಿವೆ. ಸಮಾಜ ವಿಜ್ಞಾನ ವಿಷಯಗಳನ್ನು ಕೆಳಕಂಡ ಮೂರು ಶಾಖೆಗಳು / ಶೀರ್ಷಿಕೆಗಳಡಿ ವರ್ಗೀಕರಿಸಬಹುದು.

ಶುದ್ಧ ಸಾಮಾಜಿಕ ವಿಜ್ಞಾನಗಳು: ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಇತಿಹಾಸ, ನ್ಯಾಯಶಾಸ್ತ್ರ, ಕಾನೂನು, ಸಮಾಜಶಾಸ್ತ್ರ, ಸಾರ್ವಜನಿಕ ಆಡಳಿತ, ಸಾಮಾಜಿಕ ಕಾರ್ಯ, ಮಾನವ ಹಕ್ಕುಗಳು, ಮಾನವಶಾಸ್ತ್ರ ಇತ್ಯಾದಿ

ಅರೆ ಸಾಮಾಜಿಕ ವಿಜ್ಞಾನಗಳು: ನೀತಿಶಾಸ್ತ್ರ, ಶಿಕ್ಷಣ, ತತ್ವಶಾಸ್ತ್ರ, ಮನೋವಿಜ್ಞಾನ, ಕಲೆ ಇತ್ಯಾದಿ

ಸಾಮಾಜಿಕ ನಿಹಿತಾರ್ಥಗಳಿರುವ ವಿಜ್ಞಾನಗಳು: ಭೂಗೋಳ, ಜೀವಶಾಸ್ತ್ರ, ವೈದ್ಯಶಾಸ್ತ್ರ, ಭಾಷಾಶಾಸ್ತ್ರ, ಗ್ರಂಥಾಲಯವಿಜ್ಞಾನ ಇತ್ಯಾಧಿ.

### 1.5.2 ಶಾಲಾಮಟ್ಟದಲ್ಲಿ ಸಮಾಜ ವಿಜ್ಞಾನದ ಬೋಧನೆಯ ಘಟಕಾಂಶಗಳು

ಶಾಲಾಮಟ್ಟದ ಸಮಾಜ ಅಧ್ಯಯನ (ಅಥವಾ ಸಮಾಜ ವಿಜ್ಞಾನ) ಪಠ್ಯಕ್ರಮವು ಅನೇಕ ಸಾಮಾಜಿಕ ವಿಜ್ಞಾನಗಳಿಂದ ತನ್ನ ವಿಷಯವಸ್ತುವನ್ನು ಆಯ್ದುಕೊಳ್ಳುತ್ತದೆಂಬುದನ್ನು ಈಗಾಗಲೇ ಚರ್ಚಿಸಲಾಗಿದೆ. ಹೀಗೆ ಆಯ್ದ ವಿಷಯವಸ್ತುಗಳನ್ನು ಸಮಾಜ ಅಧ್ಯಯನ (ಸಮಾಜವಿಜ್ಞಾನ) ಎಂಬ ಏಕೀಕರಿಸಿದ ಶೀರ್ಷಿಕೆಯಡಿಯಲ್ಲಿ ಶಾಲಾ ಮಕ್ಕಳಿಗೆ ಕಲಿಸುವುದಕ್ಕಾಗಿ ಇತಿಹಾಸ, ಭೂಗೋಳ ಮುಂತಾದ ಕೆಲವು ವಿಷಯಗಳನ್ನು ಸಂಘಿಸಲಾಗುತ್ತದೆ. ಹಿರಿಯ ಪ್ರಾಥಮಿಕ ಶಾಲಾ ಹಂತಕ್ಕೆ ಸಿಬಿಎಸ್‌ಇಯ ಪುಸಕ್ತ ಸಮಾಜ ವಿಜ್ಞಾನ  ಪಠ್ಯಕ್ರಮವು (ಎನ್‌ಸಿಇಆರ್‌ಟಿ ಪ್ರಕಟಣೆ) ಮೂರು ವಿಷಯ ಕ್ಷೇತ್ರಗಳನ್ನು ಒಳಗೊಂಡಿದೆ. ಅವೆಂದರೆ ಇತಿಹಾಸ, ಭೂಗೋಳ ಮತ್ತು ಸಾಮಾಜಿಕ ಮತ್ತು ರಾಜಕೀಯ ಜೀವನ (ಎಸ್.ಪಿ.ಎಲ್) ಹಿರಿಯ ಪ್ರಾಥಮಿಕ ಹಂತದ ಈ ಸಮಾಜವಿಜ್ಞಾನ ಪಠ್ಯಕ್ರಮದ ಇನ್ನೂ ಕೆಲವು ವಿವರಗಳನ್ನು ಈ ಕೋರ್ಸ್‌ನ ಮುಂಬರುವ ಘಟಕಗಳಲ್ಲಿ ಒದಗಿಸಲಾಗುವುದು. ಹಾಗೆಯೇ, ಪ್ರೌಢಶಾಲಾ ಹಂತದಲ್ಲಿ ಸಿಬಿಎಸ್‌ಇ ಯ ಪ್ರಸಕ್ತ ಸಮಾಜ ವಿಜ್ಞಾನ ಪಠ್ಯಕ್ರಮವು (ಎನ್‌ಸಿಇಆರ್‌ಟಿ ಪ್ರಕಟಿತ) ಇತಿಹಾಸ, ಭೂಗೋಳ, ರಾಜ್ಯಶಾಸ್ತ್ರ ಮತ್ತು ಅರ್ಥಶಾಸ್ತ್ರಗಳೆಂಬ ನಾಲ್ಕು ವಿಷಯ ಕ್ಷೇತ್ರಗಳನ್ನೊಳಗೊಂಡಿದೆ. ಉನ್ನತ ಪ್ರೌಢ ಹಂತದಲ್ಲಿ ಇತಿಹಾಸ, ರಾಜ್ಯಶಾಸ್ತ್ರ, ಮಾನವಶಾಸ್ತ್ರ, ಸಮಾಜಶಾಸ್ತ್ರ ಮುಂತಾದ ಹಲವಾರು ಸಮಾಜ ವಿಜ್ಞಾನ ವಿಷಯಗಳನ್ನು ಪ್ರಾವೀಣ್ಯತೆಯ / ಸ್ವತಂತ್ರ ವಿಷಯಗಳಾಗಿ ಬೋಧಿಸಲಾಗುತ್ತದೆ. ಚಿತ್ರ. 1.2 ನಿಮಗೆ ಹಿರಿಯ ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಹಂತದ ಸಮಾಜ ವಿಜ್ಞಾನದ  ಬೋಧನಾ ವಿಷಯಗಳು / ಘಟಕಾಂಶಗಳನ್ನು ಪ್ರಸ್ತುತಪಡಿಸುತ್ತದೆ.


ಮಹಿಳೆಯ / ಪುರುಷನ ಮೂಲಭೂತ ಅಗತ್ಯಗಳು
ಮಹಿಳೆಯ /ಪುರಷನ ಮೂಲಭೂತ ಚಟುವಟಿಕೆಗಳು
ಉತ್ಪಾದನೆ ಮತ್ತು ಬಳಕೆ
ಸರ್ಕಾರ ಮತ್ತು ಬಳಕೆ
ಸಂವಹನ ಮತ್ತು ಬಳಕೆ
ಸೌಂದರ್ಯದರಿಮೆ ಮತ್ತು ಬಳಕೆ
ಶಿಕ್ಷಣ ಮತ್ತು ಮನರಂಜನೆ
ಸಾಮಾಜಿಕ ವಿಜ್ಞಾನಗಳು
ಇತಿಹಾಸ, ಭೂಗೋಳ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಮನೋವಿಜ್ಞಾನ, ಮಾನವಶಾಸ್ತ್ರ, ನೀತಿಶಾಸ್ತ್ರ ಇತ್ಯಾದಿ
ಇತಿಹಾಸ, ಭೂಗೋಳ, ಸಾ.ರಾ.ಜೀವನ, ಇತಿಹಾಸ,
ಭೂಗೋಳ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ
ಹಿ.ಪ್ರಾ.ಹಂ
ಪ್ರೌಢಶಾಲಾ ಹಂತ

1.2 ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲಾ

ಹಂತದಲ್ಲಿ ಸಮಾಜವಿಜ್ಞಾನದ ಬೋಧನಾ ವಿಷಯಗಳು / ಘಟಕಾಂಶಗಳು.

ನಿಮ್ಮ ಪ್ರಗತಿ ಪರಿಶೀಲಿಸಿ –4

ಪ್ರಶ್ನೆ : ಒಂದು ಅಧ್ಯಯನ ಕ್ಷೇತ್ರವನ್ನು ನಿರೂಪಿಸುವ ಮೂರು ನಿಯಮಗಳನ್ನು ಬರೆಯಿರಿ. ಸಾಮಾನ್ಯವಾಗಿ ಸಮಾಜ ವಿಜ್ಞಾನ ಕ್ಷೇತ್ರದಡಿಯಲ್ಲಿ ಪರಿಗಣಿಸುವ 5 ವಿಷಯಗಳ ಹೆಸರು ಬರೆಯಿರಿ.

(ಸೂಚನೆ: ನಿಮ್ಮ ಉತ್ತರವನ್ನು ಈ ಕೆಳಗಿನ ಸ್ಥಳದಲ್ಲಿ ಬರೆದು ನಮತರ ಘಟಕಾಂತ್ಯದ ಮಾದರಿ ಉತ್ತರದೊಂದಿಗೆ ಹೋಲಿಸಿ)

--------------------------------------------------------------------------------
--------------------------------------------------------------------------------
--------------------------------------------------------------------------------

## 1.6 ಸಮಾಜ ವಿಜ್ಞಾನದ ಅಂತರ್‌ವಿಷಯಾತ್ಮಕ ಮತ್ತು ಸಮನ್ವಯ ದೃಷ್ಟಿಕೋನಗಳು.

ಜ್ಞಾನವನ್ನು ಸಂಪೂರ್ಣವಾದ ರೀತಿಯಲ್ಲಿ ವಿಭಾಗಿಸಲು ಸಾಧ್ಯವಿಲ್ಲದ ಕಾರಣ ಒಂದು ನಿರ್ದಿಷ್ಟ ವಿಷಯವನ್ನು ಅಥವಾ ಅಧ್ಯಯನ ಕ್ಷೇತ್ರವನ್ನು ಶುದ್ಧವಾಗಿ ಸ್ವಪರಿಪೂರ್ಣ ಅಥವಾ ಸ್ವತಂತ್ರ ಎಂದು ಕಾಣುವುದಕ್ಕಾಗುವುದಿಲ್ಲ. ಈ ಘಟಕದ ಹಿಂದಿನ ಭಾಗದಲ್ಲಿ ವಿಷಯಗಳ ನಡುವೆ ಹಾಗೂ ಅಧ್ಯಯನ ಕ್ಷೇತ್ರಗಳ ನಡುವೆ ಕ್ರಿಯಾತ್ಮಕ ಸಂಬಂಧ ಇದೆ ಎಂಬುದಾಗಿ ನೀವು ಕಲಿತಿದ್ದೀರಿ ಸಮಾಜ ವಿಜ್ಞಾನಕ್ಷೇತ್ರವು ಇತರ ಅಧ್ಯಯನ ಕ್ಷೇತ್ರಗಳೊಂದಿಗೆ ಕ್ರಿಯಾತ್ಮಕ ಸಂಬಂಧವನ್ನು ಯಾವಾಗಲೂ ಹೊಂದಿದೆ. ಹಾಗೆಯೇ ವಿವಿಧ ಸಮಾಜ ವಿಜ್ಞಾನ ವಿಷಯಗಳು ತಮ್ಮ ತಮ್ಮ ನಡುವೆ ಮಾತ್ರವಲ್ಲದೆ ಇತರ ಅಧ್ಯಯನ ಕ್ಷೇತ್ರಗಳ ವಿಷಯಗಳ ಜೊತೆಗೂ ಕ್ರಿಯಾತ್ಮಕ ಸಂಬಂಧ ಹೊಂದಿವೆ. ಈಗ ನಾವು ಸಮಾಜ ವಿಜ್ಞಾನದಲ್ಲಿ ಅಂತರ್‌ವಿಷಯಾತ್ಮಕ ಮತ್ತು ಸಮನ್ವಯ ದೃಷ್ಟಿಕೋನಗಳನ್ನು ವಿಶ್ಲೇಷಿಸೋಣ.

### 1:6:1 ಸಮಾಜ ವಿಜ್ಞಾನದಲ್ಲಿ ಅಂತರ್ವಿಷಯಾತ್ಮಕ ದೃಷ್ಟಿಕೋನಗಳು

ಸಮಾಜ ವಿಜ್ಞಾನ ವಿಷಯಗಳು ತಮ್ಮ ಸ್ವರೂಪದಲ್ಲಿ ಅಂತರ್ವಿಷಯಾತ್ಮಕವಾಗಿವೆ. ಸಮಾಜ ವಿಜ್ಞಾನಗಳ ಕ್ಷೇತ್ರದ ಒಂದು ವಿಷಯವು ಅದೇ ಸಮಾಜ ವಿಜ್ಞಾನ ಕ್ಷೇತ್ರದ ಇತರ ವಿಷಯಗಳೊಂದಿಗೆ ಹಾಗೂ ಇತರ ಅನೇಕ ಕ್ಷೇತ್ರಗಳ ವಿಷಯಗಳಾದ ಭೌತವಿಜ್ಞಾನಗಳು ಭಾಷಾ ಅಧ್ಯಯನ, ಜೈವಿಕ ವಿಜ್ಞಾನ ಮುಂತಾದುವುಗಳೊಂದಿಗೆ ಸಂಬಂಧ ಹೊಂದಿದೆ. ಈ ಸಂಬಂಧವನ್ನು ಸ್ಪಷ್ಟಪಡಿಸಲು ಇಲ್ಲಿ ಉದಾಹರಣೆಗಳನ್ನು ಕೊಡಲಾಗಿದೆ. ಸಮಾಜ ವಿಜ್ಞಾನ ವಿಷಯವಾದ ಇತಿಹಾಸದ ಸ್ವರೂಪವನ್ನು ವಿಶ್ಲೇಷಿಸೋಣ. ಇತಿಹಾಸ ವಿಷಯವು ಸ್ವರೂಪದಲ್ಲಿ ಅಂತರ್‌ವಿಷಯಾತ್ಮಕವಾಗಿದೆ, ಏಕೆಂದರೆ ನಾವು ಇತಿಹಾಸ ಅಧ್ಯಯನ ಮಾಡುವಾಗ ಆರ್ಥಿಕ ಇತಿಹಾಸ, ಧಾರ್ಮಿಕ ಇತಿಹಾಸ, ಮನೋವಿಜ್ಞಾನದ ಇತಿಹಾಸ, ಸಮಾಜಶಾಸ್ತ್ರದ ಇತಿಹಾಸ, ಧಾರ್ಮಿಕ ಇತಿಹಾಸ ಇತ್ಯಾದಿಯಾಗಿ ಇತರ ಅನೇಕ ಸಮಾಜ ವಿಜ್ಞಾನ ವಿಷಯಗಳ ಅಧ್ಯಯನ ಮಾಡುತ್ತೇವೆ. ಅಲ್ಲದೆ ಸಾಮಾಜಿಕ ವಿಜ್ಞಾನಗಳಲ್ಲದ ವಿಷಯಗಳಾದ ಭೌತಶಾಸ್ತ್ರದ ಇತಿಹಾಸ, ಸಸ್ಯಶಾಸ್ತ್ರದ ಇತಿಹಾಸ, ಪ್ರಾಣಿಶಾಸ್ತ್ರದ ಇತಿಹಾಸ, ಗಣಿತದ ಇತಿಹಾಸ, ವಿವಿಧ ಭಾಷೆಗಳ ಇತಿಹಾಸ ಇತ್ಯಾದಿಯಾಗಿ ಹಲವು ವಿಷಯಗಳೂ ಇತಿಹಾಸದ ಭಾಗವಾಗಿರುತ್ತದೆ. ಅಂತೆಯೇ ಸಮಾಜ ವಿಜ್ಞಾನ ವಿಷಯವಾದ ಸಮಾಜಶಾಸ್ತ್ರಕ್ಕೆ ಸಂಬಂಧಿಸದ ವಿಚಾರಗಳನ್ನು ಅರ್ಥಶಾಸ್ತ್ರ, ಶಿಕ್ಷಣ, ರಾಜ್ಯಶಾಸ್ತ್ರ, ವೈಜ್ಞಾನಿಕ ಅಭಿವೃದ್ಧಿ, ಭಾಷೆ ಮತ್ತು ಸಾಹಿತ್ಯ ಇತ್ಯಾದಿಗಳನ್ನು ಪರಿಗಣಿಸದೆ ಅಧ್ಯಯನ ಮಾಡುವುದಕ್ಕಾಗುವುದಿಲ್ಲ. ಇತಿಹಾಸ ಮತ್ತು ಸಮಾಜಶಾಸ್ತ್ರಗಳಂತೆಯೇ ಸಮಾಜ ವಿಜ್ಞಾನದ ಪ್ರತಿಯೊಂದು ವಿಷಯವೂ ಅದೇ ಅಧ್ಯಯನ ಕ್ಷೇತ್ರದ ಇತರ ವಿಷಯಗಳೊಂದಿಗೆ (ಸಮಾಜ –ವಿಜ್ಞಾನ ಕ್ಷೇತ್ರ) ಹಾಗೂ ಇತರ ಕ್ಷೇತ್ರಗಳ ವಿಷಯಗಳೊಂದಿಗೆ (ಭೌತಿಕ ವಿಜ್ಞಾನ, ಗಣಿತ ಜೈವಿಕವಿಜ್ಞಾನ ಇತ್ಯಾದಿ) ಪರಸ್ಪರ ಅವಲಂಬನೆ ಹಾಗೂ ಪರಸ್ಪರ ಸಂಬಂಧಗಳನ್ನು ಹೊಂದಿರುತ್ತವೆ. ಆದರೆ, ಸಾಮಾಜಿಕ ವಿಜ್ಞಾನಗಳ ಒಂದು ವಿಷಯವು ತನ್ನದೇ ಅಧ್ಯಯನ ಕ್ಷೇತ್ರದ ಇತರ

ವಿಷಯಗಳೊಂದಿಗೆ ಹೆಚ್ಚು ಸಂಬಂಧ ಹೊಂದಿದ್ದು ಇತರ ಅಧ್ಯಯನ ಕ್ಷೇತ್ರಗಳ ವಿಷಯಗಳೊಂದಿಗೆ ತುಲನಾತ್ಮಕವಾಗಿ ಕಡಿಮೆ ಸಂಬಂಧ ಹೊಂದಿದೆ ತ್ರ 1.3 ಸಮಾಜ ವಿಜ್ಞಾನ ವಿಷಯವಾದ “ಕಾನೂನು” ಇತರ ವಿಷಯಗಳ ಮೇಲೆ ಹೊಂದಿರುವ ಅವಲಂಬನೆಯನ್ನು ಪ್ರಸ್ತುತಪಡಿಸುತ್ತದೆ.




1.3 ಸಮಾಜ ವಿಜ್ಞಾನ ವಿಷಯ ಕಾನೂನಿನೊಂದಿಗೆ ಇತರ ವಿಷಯಗಳ ಮೇಲೆ ಅವಲಂಬನೆ

**1.6.2 ಸಾಮಾಜಿಕ ವಿಜ್ಞಾನಗಳಲ್ಲಿ ಸಮನ್ವಯ ದೃಷ್ಟಿಕೋನ.**

ಜ್ಞಾನದ ಪರಿಪೂರ್ಣ ವಿಭಜನೆ / ವಿಭಾಗೀಕರಣ ಅಸಾಧ್ಯವಾದ್ದರಿಂದ ವಿದ್ಯಾರ್ಥಿಗಳಿಗೆ ಏಕೀಕೃತ ರೀತಿಯಲ್ಲಿ ಜ್ಞಾನವನ್ನು ಸಂವಹನ ಮಾಡುವುದು / ತಲುಪಿಸುವುದು ಉತ್ತಮ. ಆದ್ದರಿಂದ ಶಾಲಾ ಹಂತದಲ್ಲಿ ಸಮಾಜ ವಿಜ್ಞಾನ ಪಠ್ಯಕ್ರಮದ ಸಂವಹನ ಮಾಡುವಾಗ ಅದನ್ನು ಏಕೀಕೃತ ರೀತಿಯಲ್ಲಿ ಸಂವಹನ ಮಾಡಬೇಕು. ಈಗ ನಾವು ಸಮಾಜ ವಿಜ್ಞಾನ ವಿಷಯಗಲು ಹೇಗೆ ಅಂತರ್ವಿಷಯಾತ್ಮಕ ಹಾಗೂ ಸಮನ್ವಿತ ಸ್ವರೂಪದ್ದಾಗಿವೆ ಎಂಬುದನ್ನು ತಿಳಿಯೋಣ. ಆಹಾರ ಉಡುಪು, ಆಶ್ರಯ (ಮನೆ) ಸಾರಿಗೆ ಸಂವಹನ ಮುಂತಾದವು ಶಾಲಾ ಮಟ್ಟದಲ್ಲಿ ಸಮಾಜ ವಿಜ್ಞಾನ ಪಠ್ಯಕ್ರಮದ ಸಾಮಾನ್ಯ ಕಲಿಕಾ ಪರಿಕಲ್ಪನೆಗಳಾಗಿವೆ. ಆಹಾರದ ಪರಿಕಲ್ಪನೆಯನ್ನು ತೆಗೆದುಕೊಳ್ಳಿ. ಆಹಾರವನ್ನು ವಿವಿಧ ಕ್ಷೇತ್ರಗಳ ವಿಷಯಗಳೊಂದಿಗೆ ಕೆಳಕಂಡಂತೆ ಸಹ ಸಂಬಂಧ ಕಲ್ಪಿಸಬಹುದು. ಆಹಾರದ ಉತ್ಪಾದನೆ ಮಾರಾಟ ಬಳಕೆ ಮುಂತಾದವು ಅರ್ಥಶಾಸ್ತ್ರಕ್ಕೆ ಸಂಬಂಧಿಸಿವೆ, ಆಹಾರ ಶೈಲಿ ಆಹಾರದ ಆಚರಣೆಗಳು, ಆಹಾರದ ಕಾರಣದಿಂದಾಗಿ ಕುಟುಂಬ ಮತ್ತು ಸಮಾಜದಲ್ಲಿ ಸೃಷ್ಟಿಯಾಗುವ ತಪ್ಪು ತಿಳುವಳಿಕೆಗಳು ಸಮಾಜಶಾಸ್ತ್ರಕ್ಕೆ ಸಂಬಂಧಿಸಿವೆ. ಆಹಾರದ ಹಂಚಿಕೆಯಲ್ಲಿ ಸಮಾನತೆ, ಆದಾಯ ವೆಚ್ಚದ ಲೆಕ್ಕ, ಬೆಲೆ ಹೆಚ್ಚಳ ಮತ್ತು ಇಳಿಮುಖ ಮುಂತಾದವು ರಾಜ್ಯಶಾಸ್ತ್ರಕ್ಕೆ ಸಂಬಂಧಿಸಿವೆ. ವಿವಿಧ ಕಾಲಘಟ್ಟ (ಯುಗ)ಗಳಲ್ಲಿ ಆಹಾರಕ್ಕೆ ಸಂಬಂಧಿಸಿದ ವಿಚಾರಗಳು ವಿವಿಧ ಕಾಲಘಟ್ಟಗಳಲ್ಲಿ ಲಭ್ಯವಿರುವ ಆಹಾರದ ವಿಧಗಳು, ಇತ್ಯಾದಿಗಳು ಇತಿಹಾಸಕ್ಕೆ ಸಂಬಂಧಿಸಿವೆ, ವಿವಿಧ ರುಚಿಗಳ ಆಹಾರದ ತಯಾರಿಕೆ, ಆಹಾರಕ್ಕೆ ಸಂಬಂಧಿಸಿದಂತೆ ಆರೋಗ್ಯಕರ ಅಭ್ಯಾಸಗಳ ನಿರ್ವಹಣೆ ಇತ್ಯಾದಿಗಳು ಗೃಹವಿಜ್ಞಾನಕ್ಕೆ ಸಂಬಂಧಿಸಿವೆ, ಆಹರದ ಪರಿಮಾಣೀಕರಣ, ಬಾಗಾಕಾರ, ಭಿನ್ನರಾಶಿಗಳು ಗಣಿತಕ್ಕೆ ಸಂಬಂಧಿಸಿವೆ, ಆಹಾರದಲ್ಲಿ ಲಭ್ಯವಿರುವ ಜೀವಸತ್ವಗಳು ಮತ್ತು ಪೋಷನೆ, ಆಹಾರ ಪದಾರ್ಥಗಳನ್ನು ಅವುಗಳ ಪೋಷಕಾಂಶ ಸಂಯೋಜನೆಗಳ ಆಧಾರದ ಮೇಲೆ ವರ್ಗೀಕರಣಗಳು ಜೀವ ವಿಜ್ಞಾನಗಳಿಗೆ ಸಂಬಂಧಿಸಿವೆ, ಆಹಾರದ ಅಚ್ಚುಕಟ್ಟುತನ, ಶುಚಿತ್ವ ಮತ್ತು ಆಹಾರದ ಸಂಸ್ಕರಣೆಗೆ ಸಂಬಂಧಿಸಿದ ವಿದ್ಯುನ್ಮಾನ ಉಪಕರಣಗಳು, ಆಹಾರ ಸಂಸ್ಕರಿಸಲು ಮೈಕ್ರೋವೇವ್ ಬಳಕೆ ಆಹಾರ ತಣ್ಣಗಾಗಿಸಿ, ಘನೀಕರಿಸುವುದು ಇತ್ಯಾಧಿಗಳು ಭೌತಶಾಸ್ತ್ರಕ್ಕೆ ಸಂಬಂಧಿಸಿವೆ, ಆಹರ ಪದಾರ್ಥಗಳ ರಾಸಾಯನಿಕ ಬಂಧ, ರಾಸಾಯನಿಕಗಳನ್ನು ಬಳಸುವು ಮೂಲಕ ಆಹಾರ ಸಂರಕ್ಷಣೆ ಇತ್ಯಾಧಿಗಳು ರಸಾಯನಶಾಸ್ತ್ರಕ್ಕೆ ಸಂಬಂಧಿಸಿವೆ, ವಿವಿಧ ವರ್ಗಗಳ ಆಹಾರವನ್ನು ಬೆಳೆಯಲು ಅಗತ್ಯವಾದ ಮಣ್ಣಿನ ವಿಧಗಳು, ಆಹಾರದ ವಿಧಗಳನ್ನು ಬೆಂಬಲಿಸುವ ಪರಿಸರಗಳು ಮುಂತಾದುವು ಭೂಗೋಳಕ್ಕೆ ಸಂಬಂಧಿಸಿವೆ, ಮತ್ತು ಆಹಾರ ಆಧಾರಿತ ಸಸ್ಯಗಳು ಕಥೆಗಳು, ಕಥೆಗಳು, ಶಬ್ದ ಸಂಪತ್ತಿನ ಕಲಿಕೆ, ಪ್ರಬಂಧಗಳು ಮುಂತಾದವು ಭಾಷೆ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿವೆ. ಈ ರೀತಿ ಆಹಾರದ ಪರಿಕಲ್ಪನೆಯನ್ನು ಇತರ ಹಲವಾರು ಕಲಿಕಾ ಕ್ಷೇತ್ರಗಳಿಗೆ ಮತ್ತು ವಿಷಯಗಳಿಗೆ ಸಂಬಂಧ ಕಲ್ಪಿಸಬಹುದು. ಆಹರದ ಪರಿಕಲ್ಪನೆಯಂತೆಯೇ ಇತರ ಅನೇಕ ಸಮಾಜ ವಿಜ್ಞಾನ ಪರಿಕಲ್ಪನೆಗಳನ್ನು ಬೋಧನೆ– ಕಲಿಕೆ ಮತ್ತಿತರ ಹಲವು ಉದ್ದೇಶಗಳಿಗಾಗಿ ವಿವಿಧ ಅಧ್ಯಯನ ಕ್ಷೇತ್ರಗಳ ವಿಷಯಗಳೊಂದಿಗೆ ಸಮನ್ವಯಗೊಳಿಸಬಹುದು. ಸಮಾಜ ವಿಜ್ಞಾನದಲ್ಲಿ ಜ್ಞಾನದ ಸಮನ್ವಯವನ್ನು ಒಂದು ಚಟುವಟಿಕೆಯ ಸಹಾಯದಿಂದ ತಿಳಿಯೋಣ.

ಸಮಾಜ ವಿಜ್ಞಾನದಲ್ಲಿ ಜ್ಞಾನದ ಸಮನ್ವಯವನ್ನು ನಿರೂಪಿಸುವ ಒಂದು ಚಟುವಟಿಕೆ.

ಇದು ಹಿರಿಯ ಪ್ರಾಥಮಿಕ ಶಾಲಾ ಹಂತದಲ್ಲಿ ಸಮಾಜ ವಿಜ್ಞಾನ ಪಠ್ಯಕ್ರಮದಲ್ಲಿ ಜ್ಞಾನ ಮತ್ತು ಕಲಿಕೆಯ ಸಮನ್ವಯವನ್ನು ನಿರೂಪಿಸುವ ತರಗತಿ ಆಧಾರಿತ ಚಟುವಟಿಕೆಯಾಗಿದೆ. ಈ ಚಟುವಟಿಕೆಯಲ್ಲಿ 6ನೆಯ ತರಗತಿ ಮಟ್ಟದ ಸಮಾಜವಿಜ್ಞಾನದ ಭೂಗೋಳ ಬೋಧನಾ ಕ್ಷೇತ್ರದಿಂದ "ಅರಣ್ಯ" ಎಂಬ ಪರಿಕಲ್ಪನೆಯನ್ನು ವಿದ್ಯಾರ್ಥಿಗಳಿಗೆ ಅಂತರ್ ವಿಷಂ ಯಾತ್ಮಕ ಹಾಗೂ ಸಮನ್ವಯ ಜ್ಞಾನವನ್ನು ಒದಗಿಸಲು ಆಯ್ದುಕೊಳ್ಳಲಾಗಿದೆ. ಚಟುವಟಿಕೆಯ ಸಂಕ್ಷಿಪ್ತ ಚಿತ್ರಣ, ಚಟುವಟಿಕೆಯ ಕ್ರಮ ಮತ್ತು ಚಟುವಟಿಕೆ ಆಧಾರಿತ ಕಲಿಕಾ ನಿಯೋಜಿತ ಕಾರ್ಯಗಳನ್ನು ಕೆಳಗೆ ಕೊಡಲಾಗಿದೆ.

ಎ) ಚಟುವಟಿಕೆಯ ಚಿತ್ರಣ

ತರಗತಿ : 6ನೆಯ ವರ್ಗ
ಕಲಿಕಾ ವಿಷಯ : ಸಮಾಜ ವಿಜ್ಞಾನ ಪಠ್ಯಕ್ರಮ
ಕಲಿಕಾ ಕ್ಷೇತ್ರ : ಸಮಾಜ ವಿಜ್ಞಾನ ಪಠ್ಯಕ್ರಮದ ಭೂಗೋಳ
ಕಲಿಕಾ ವಿಷಯ ವಸ್ತು : ಅರಣ್ಯ

ವಿದ್ಯಾರ್ಥಿಗಳಿಗಾಗಿ ಈ ಕೆಳಗೆ ಹಲವಾರು ನಿಯೋಜಿತ ಕಾರ್ಯಗಳನ್ನು ಕೊಡಲಾಗಿದೆ. ಈ ನಿಯೋಜಿತಕಾರ್ಯಗಳನ್ನು ವಿದ್ಯಾರ್ಥಿಗಳಿಗೆ ಮಾಡಲು ಕೆಳಕಂಡಂತೆ ಶಿಕ್ಷಕರು ಮಾರ್ಗದರ್ಶಿಸುವರು.
ಪ್ರಿಯ ವಿದ್ಯಾರ್ಥಿಗಳೇ, ಈ ಕೆಳಗೆ ನಿಮಗಾಗಿ ಹಲವು ಆಸಕ್ತಿಯುತ ಕಾರ್ಯಗಳನ್ನು ಕೊಡಲಾಗಿದೆ. ಈ ಕಾರ್ಯಗಳನ್ನು ಪೂರ್ಣಗೊಳಿಸಿ ತರಗತಿಯಲ್ಲಿ ಪ್ರಸ್ತುತ ಪಡಿಸುವುದಕ್ಕಾಗಿ ಸಲ್ಲಿಸಿ.

1) ಗಣಿತ, ಭಾಷೆ ಮತ್ತು ಸಾಮಾನ್ಯ ವಿಜ್ಞಾನಗಳಿಗೆ ಕ್ರಿಯಾತ್ಮಕವಾಗಿ ಸಂಬಂಧಿಸಿರುವಂತೆ 'ಅರಣ್ಯ' ದ ಪರಿಕಲ್ಪನೆ ಕುರಿತ ಭಿತ್ತಿಚಿತ್ರಗಳನ್ನು ತಯಾರಿಸಿ.
2) 'ವಿಪತ್ತು' ಎಂಬುದು ಸಮಾಜವಿಜ್ಞಾನದ ಒಂದು ಪರಿಕಲ್ಪನೆ, ಈ ಪರಿಕಲ್ಪನೆಯನ್ನು ಕಾನೂನು, ರಾಜ್ಯಶಾಸ್ತ್ರ, ಗಣಿತ, ಆರೋಗ್ಯ ಮತ್ತು ನೈರ್ಮಲ್ಯ ಹಾಗೂ ಅರ್ಥಶಾಸ್ತ್ರ ವಿಷಯಕ್ಷೇತ್ರಗಳಿಗೆ ಹೇಗೆ ಸಂಬಂಧಿಸಿದೆ ಎಂಬುದನ್ನು ವಿವರಿಸಿ.
3) ಗಣಿತದ ಪರಿಕಲ್ಪನೆಯಾದ 'ಶೇಕಡಾವಾರ'ನ್ನು ತೆಗೆದುಕೊಳ್ಳಿ. ಈ ಪರಿಕಲ್ಪನೆಯನ್ನು ಯಾವುದಾದರೂ ಆರು ವಿಷಯ ಕ್ಷೇತ್ರಗಳೊಂದಿಗೆ ಸಂಬಂಧ ಕಲ್ಪಿಸಿ ಮತ್ತು ಈ ಸಂಬಂಧವನ್ನು ಸ್ಪಷ್ಟೀಕರಿಸಲು ಉದಾಹರಣೆಗಳನ್ನು ಕೊಡಿ.
4) 7ನೇ ತರಗತಿಯ CBSEಯ ಭೂಗೋಳ, ಇತಿಹಾಸ ಮತ್ತು ಸಾಮಾಜಿಕ ಹಾಗೂ ರಾಜಕೀಯ ಜೀವನ ಪಠ್ಯಪುಸ್ತಕಗಳನ್ನು ಓದಿ,
ಮೂರು ಪಠ್ಯಪುಸ್ತಕಗಳಿಗೆ ಅತ್ಯಂತ ಸಾಮಾನ್ಯವಾದ 30–40 ಪರಿಕಲ್ಪನೆಗಳನ್ನು ಪಟ್ಟಿಮಾಡಿ.

ನಿಮ್ಮ ಪಗ್ರತಿ ಪರಿಶೀಲಿಸಿ – 5
ಪ್ರಶ್ನೆ : ಇತಿಹಾಸದ ವಿಷಯದ ಅಂತರ್ವಿಷಯಾತ್ಮಕ ಸ್ವರೂಪವನ್ನು ಚರ್ಚಿಸಿ.
ಸೂಚನೆ: ನಿಮ್ಮ ಉತ್ತರವನ್ನು ಈ ಕೆಳಗಿನ ಸ್ಥಳದಲ್ಲಿ ಬರೆದು ನಂತರ ಘಟಕಾಂತ್ಯದ ಮಾದರಿ ಉತ್ತರದೊಂದಿಗೆ ಹೋಲಿಸಿ.

## 1.7 ಸಾರಾಂಶಗೊಳಿಸೋಣ.

ಈ ಘಟಕದಲ್ಲಿ ನಿಮಗೆ ಸಮಾಜ ವಿಜ್ಞಾನದ ಸ್ವರೂಪವನ್ನು ಪರಿಚಯಿಸುವ ಪ್ರಯತ್ನ ಮಾಡಲಾಗಿದೆ, ಈ ಸಮಾಜದವಿಜ್ಞಾನದ ಸ್ವರೂಪವನ್ನು ಈ ಘಟಕದಲ್ಲಿ ತಾತ್ವಕ ಚರ್ಚೆಗಳು ಮತ್ತು ಉಲ್ಲೇಖಗಳು, ನಿಯೋಜಿತ ಕಾರ್ಯಗಳು ಮತ್ತು ಯೋಜನಾಕಾರ್ಯಗಳು ಮುಂತಾದುವುಗಳ ಮೂಲಕ ಪ್ರಸ್ತುತ ಪಡಿಸಲಾಗಿದೆ. ಈ ಘಟಕವು ಮುಖ್ಯವಾಗಿ ಸಮಾಜದ ವಿಜ್ಞಾನದ ವಿಕಾಸ ಮತ್ತು ಪರಿಕಲ್ಪನೆ, ಸಮಾಜದವಿಜ್ಞಾನದ ಘಟಕಾಂಶಗಳು, ಮತ್ತು ಸಮಾಜದವಿಜ್ಞಾನದಲ್ಲಿ

ಅಂತರ್ವಿಷಯಾತ್ಮಕ ಮತ್ತು ಸಮನ್ವಯದ ದೃಷ್ಟಿಕೋನಗಳಿಗೆ ಸಂಬಂಧಿಸಿದ ಕಲಿಕಾ ಕ್ಷೇತ್ರಗಳನ್ನು ಕುರಿತಾಗಿದೆ. ಈ ಘಟಕದ ಮುಖ್ಯಕಲಿಕಾ ಅಂಶಗಳನ್ನು ಈ ಕೆಳಗೆ ಸಾರಾಂಶಗೊಳಿಸಲಾಗಿದೆ.

ಸಮಾಜ ವಿಜ್ಞಾನವು ವಿಶಾಲ ಸಾಮಾಜಿಕ ವ್ಯವಸ್ಥೆಯ ಅಲೆಸಾಲಿನಲ್ಲಿ ಮೂಲಭೂತವಾಗಿ ಮಾನವ ವ್ಯವಹಾರಗಳು ಮತ್ತು ಮಾನವ ಸಂಬಂಧಗಳನ್ನೇ ಅಧ್ಯಯನ ಮಾಡುವ ಜ್ಞಾನದ ಒಂದು ಶಾಖೆ/ಕ್ಷೇತ್ರವಾಗಿದೆ ಸಮಾಜವಿಜ್ಞಾನವು 18ನೇಯ ಶತಮಾನದಲ್ಲಿ ಆಧುನಿಕ ವಿಜ್ಞಾನದ ಬೆಳವಣಿಗೆ, ಔದ್ಯೋಗೀಕರಣದ, ಆಧುನೀಕರಣ ಮುಂತಾದುವಗಳಿಂದ ಸೃಷ್ಟಿಯಾದ ಸಾಮಾಜಿಕ ಸಮಸ್ಯೆಗಳು ಮತ್ತು ಸವಾಲುಗಳನ್ನು ಎದುರಿಸಲು (ಬಹುಮಟ್ಟಿಗೆ ಉನ್ನತ ಶಿಕ್ಷಣ/ವಿಶ್ವವಿದ್ಯಾಲಯ ಶಿಕ್ಷಣದ ಹಂತದಲ್ಲಿ) ಔಪಚಾರಿಕ ಅಧ್ಯಯನ ಕ್ಷೇತ್ರವಾಗಿ ಹೊರಹೊಮ್ಮಿತು ಕಿರಿಯ ಕಲಿಕಾರ್ಥಿಗಳಲ್ಲಿ ಪ್ರಜಾಸತ್ತಾತ್ಮಕ ಮತ್ತು ಸಾಮಾಜಿಕ ಪೌರತ್ವದ ಗುಣಗಳನ್ನು ಬೆಳೆಸಲು ಸಮಾಜ ವಿಜ್ಞಾನದ ಮಹತ್ವವನ್ನು ಮನಗಂಡು, ಕಳೆದ ಶತಮಾನದಿಂದೀಚೆಗೆ ಸಮಾಜ ವಿಜ್ಞಾನವು ನಮ್ಮ ಭಾರತವೂ ಸೇರಿದಂತೆ ಜಗತ್ತಿನ ಎಲ್ಲ ದೇ ಶಗಳ್ಲಲಿಯೂ ಶಾಲಾ ಪಠ್ಯಕ್ರಮದ ಭಾಗವಾಗಿಹೋಗಿದೆ.

ಉನ್ನತ ಶಿಕ್ಷಣ/ಪ್ರೌಢಶಾಲಾ ಶಿಕ್ಷಣ ಹಂತದಲ್ಲಿ, ಇತಿಹಾಸ, ರಾಜ್ಯಶಾಸ್ತ್ರ, ಮಾನವಶಾಸ್ತ್ರ, ಕಾನೂನು ಮುಂತಾದ ವಿವಿಧ ಸಮಾಜ ವಿಜ್ಞಾನ ವಿಷಯಗಳನ್ನು ಸ್ವತಂತ್ರ/ಐಚ್ಛಿಕ ವಿಷಯಗಳಾಗಿ ಭೋದಿಸಲಾಗುತ್ತದೆ. ಪ್ರಾಥಮಿಕ ಶಾಲಾ ಹಂತದಲ್ಲಿ, ಸಮಾಜವಿಜ್ಞಾನಗಳನ್ನು ಸಮಾಜ ಅಧ್ಯಯನ ಪಠ್ಯಕ್ರಮ ಅಥವಾ ಸಮಾಜ ವಿಜ್ಞಾನ ಪಠ್ಯಕ್ರಮ ಎಂಬುದಾಗಿ ಒಂದೇ ಏಕೀಕೃತ ಅಧ್ಯಯನ ಕ್ಷೇತ್ರವಾಗಿ ಬೋಧಿಸಲಾಗುತ್ತದೆ.

ಸಮಾಜ ವಿಜ್ಞಾನ ಕಲಿಕೆಯು ನಾಗರೀಕತೆಯ ಪ್ರಾರಂಭದಿಂದ ಇಂದಿನವರೆಗೆ ಕಾಲದ ದೀರ್ಘ ಹಾದಿಯನ್ನು ಸಾಗಿಬಂದಿದೆ. ಪ್ರಾಚೀನ ಮತ್ತು ಮಧ್ಯಯುಗದ ಸಮಾಜಗಳಲ್ಲಿ, ಸಮಾಜವಿಜ್ಞಾನ ಕಲಿಕೆಯು ಹೆಚ್ಚು ಅನೌಪಚಾರಿಕವು, ಅಸಂಘಟಿತವೂ ಆಗಿದ್ದು, ಆದರೆ, ಆಧುನಿಕ ಮತ್ತು ಆಧುನಿಕೋತ್ತರ ಸಮಾಜಗಳಲ್ಲಿ ಸಮಾಜ ವಿಜ್ಞಾನ ಕಲಿಕೆಯು ಹೆಚ್ಚು ಔಪಚಾರಿಕವಾಗಿದೆ. ನಮ್ಮ ದೇಶ ಭಾರತದಲ್ಲಿ, ಸಮಾಜ ವಿಜ್ಞಾನ ಕಲಿಕೆಯು ವೇದ ಮತ್ತು ಉಪನಿಷತ್ತುಗಳ ಕಾಲದಲ್ಲಿ ಆರಂಭವಾಗಿ ವರ್ತಮಾನದಲ್ಲಿ ಶೈಕ್ಷಣಿಕ ವ್ಯವಸ್ಥೆಯ ಮುಖ್ಯ ಭಾಗವಾಗಿ ಹೋಗಿದೆ. ಇಂದಿನ ಸಮಾಜದಲ್ಲಿ ವಿಜ್ಞಾನ ಮತ್ತು ಆಧುನೀಕರಣಗಳ ತೀವ್ರ ಬೆಳವಣಿಗೆಯಿಂದಾಗಿ ಕಾರ್ಮಿಕರ ಶೋಷಣೆ, ಜನಸಂಖ್ಯಾ ಸಮಸ್ಯೆ, ಅಪರಾಧ ಚಟುವಟಿಕೆಗಳು ಇತ್ಯಾದಿಗಳು ದಿನೇ ದಿನೇ ಹೆಚ್ಚುತ್ತಿವೆ ಇಂತಹ ಹೊಸ ಸಾಮಾಜಿಕ ಸಮಸ್ಯೆಗಳನ್ನು ಎದುರಿಸಲು ದಿನದಿಂದ ದಿನಕ್ಕೆ ಹಲವು ಹೊಸ ಸಾಮಾಜಿಕ ವಿಜ್ಞಾನಗಳು ಹುಟ್ಟಿಕೊಳ್ಳುತ್ತಿವೆ ಅಪರಾಧಶಾಸ್ತ್ರ, ಜನಸಂಖ್ಯಾ ಶಾಸ್ತ್ರ ಮುಂತಾದವು ಇಂತಹ ಕೆಲವು ಹೊಸ ಸಾಮಾಜಿಕ ವಿಜ್ಞಾನಗಳಾಗಿವೆ.

ಒಂದು ಅಧ್ಯಯನ ಕ್ಷೇತ್ರವಾಗಿ ಸಮಾಜ ವಿಜ್ಞಾನವು ರಾಜ್ಯಶಾಸ್ತ್ರ, ಮಾನವಶಾಸ್ತ್ರ, ಕಾನೂನು, ಅರ್ಥಶಾಸ್ತ್ರ, ಭೂಗೋಳ ಮುಂತಾದ ಹಲವಾರು ವಿಷಯಗಳನ್ನು ಒಳಗೊಂಡಿದೆ ಶಾಲಾಮಟ್ಟದಲ್ಲಿ, ಸಮಾಜವಿಜ್ಞಾನವು ಹಲವಾರು ಸಾಮಾಜಿಕ ವಿಜ್ಞಾನ ವಿಷಯಗಳಿಂದ ತನ್ನ ವಿಷಯವಸ್ತುವನ್ನು ಆಯ್ದುಕೊಂಡಿರುವ ಒಂದು ಏಕೀಕರಿಸಿದ ಪಠ್ಯಕ್ರಮವಾಗಿದೆ ಆದರೆ, ಇಂತಹ ವಿಷಯವಸ್ತುಗಳನ್ನು ವಿದ್ಯಾರ್ಥಿಗಳ 3–4 ಭೋಧನಾ ಶೀರ್ಷಿಕೆಗ ಳಡಿ ಸಂಘಟಿಸಲಾಗಿರುತ್ತದೆ. (ಉದಾ, ಇತಿಹಾಸ, ಭೋಗೋಳ ಇತ್ಯಾದಿ)

ಸಮಾಜ ವಿಜ್ಞಾನ ವಿಷಯಗಳು ಸ್ವರೂಪದಲ್ಲಿ ಮುಖ್ಯವಾಗಿ ಅಂತರ್ವಿಷಯಾತ್ಮಕ ಮತ್ತು ಪರಸ್ಪರ ಅವಲಂಬಿತವಾಗಿವೆ, ಆದ್ದರಿಂದ ಅವುಗಳು ತಮ್ಮ ನಡುವೆ ಕ್ರಿಯಾತ್ಮಕ ಸಂಬಂಧ ಹೊಂದಿರುವುದಲ್ಲದೆ (ಅದೇ ಅಧ್ಯಯನ ಕ್ಷೇತ್ರದಲ್ಲಿ) ಭೌತವಿಜ್ಞಾನ, ಗಣಿತವಿಜ್ಞಾನ, ಜೈವಿಕ ವಿಜ್ಞಾನ ಇತ್ಯಾದಿ ಇತರ ಅನೇಕ ಕ್ಷೇತ್ರಗಳ ವಿಷಯಗಳೊಂದಿಗೆ ಸಂಬಂಧ ಹೊಂದಿದೆ. ಆದ್ದರಿಂದ ಸಮಾಜ ವಿಜ್ಞಾನ ಪಠ್ಯಕ್ರಮವನ್ನು ಸಂವಹನ ಮಾಡುವಾಗ ಅದನ್ನು ವಿವಿಧ ವಿಷಯಗಳೊಂದಿಗೆ ಸಮನ್ವಯಗೊಳಿಸಬೇಕು ಈ ಕೋರ್ಸ್‌ನ ಮುಂದಿನ ಘಟಕಗಳಲ್ಲಿ ಸಮಾಜ ವಿಜ್ಞಾನದ ಬಗ್ಗೆ ಹೆಚ್ಚಿನ ವಿವರಗಳನ್ನು ತಿಳಿಯುವಿರಿ.

ಗಳು/ಸಂಕ್ಷೇಪಣಗಳು

ಪನರುತ್ಥಾನ/ಪುನರುಜ್ಜೀವನ : ಪುನರುತ್ಥಾನವೆಂದರೆ ಜ್ಞಾನದ ಮರು ಎಚ್ಚರಿಕೆ 18ನೇಯ ಶತಮಾನ ಮತ್ತು ಅನಂತರ ಕಾಲವನ್ನು ಮಹಾನ್ ಪುನರುಜ್ಜೀವನಕಾಲ ಎನ್ನಲಾಗಿದೆ ಏಕೆಂದರೆ ಈ ಅವಧಿಯಲ್ಲಿ ಸಾಮಾಜಿಕ, ಆರ್ಥಿಕ, ರಾಜಕೀಯ,

ಸಾಂಸ್ಕೃತಿಕ, ವಿಜ್ಞಾನ ಮುಂತಾದ – ಜೀವನದ ಹಲವು ಕ್ಷೇತ್ರಗಳಲ್ಲಿ ಜ್ಞಾನದ ಮರು ಉಜ್ಜೀವನ ಆರಂಭವಾಯಿತು ವಿಜ್ಞಾನದ ಕ್ಷಿಪ್ರ ಬೆಳವಣಿಗೆ, ಔದ್ಯೋಗೀಕರಣ, ಆಧುನೀಕರಣ ಮುಂತಾದವು ಆಧುನಿಕ ಯುಗದ ಪುನರುತ್ಥಾನಕ್ಕೆ ಹೆಚ್ಚಿನ ಕೊಡುಗೆ ನೀಡಿವೆ.

ಗಾಂಧೀಜಿಯವರ ಮೂಲ ಶಿಕ್ಷಣ : 1937ರಲ್ಲಿ ಗಾಂಧೀಜಿಯವರು ಒಂದು ಶಿಕ್ಷಣ ಕ್ರಿಯ (ಯೋಜನೆ)ವನ್ನು ಅಂತಿಮಗೊಳಿಸಿ 1937ರ ಅಕ್ಟೋಬರ್ 22 ಮತ್ತು 23ರಂದು ವಾರ್ಧಾದಲ್ಲಿ ನಡೆದ ಭಾರತೀಯ ರಾಷ್ಟ್ರೀಯ ಶಿಕ್ಷಣ ಸಮ್ಮೇಳನದಲ್ಲಿ ಪ್ರಸ್ತುತ ಪಡಿಸಿದರು. ಈ ಯೋಜನೆಯು ಮೂಲ ಶಿಕ್ಷಣ ಅಥವಾಆ ವಾರ್ಧಾ ಶಿಕ್ಷಣ ಯೋಜನೆ ಎಂದು ಜನಪ್ರಿಯವಾಗಿದೆ ಗಾಂಧೀಜಿಯವರ ಮೂಲ ಶಿಕ್ಷಣವು ಭಾರತೀಯ ಮಕ್ಕಳ ಮೂಲಭೂತ ಅವಶ್ಯಕತೆಗಳು ಮತ್ತು ಮಹತ್ವಾಕಾಂಕ್ಷೆಗಳನ್ನು ಆಧರಿಸಿತ್ತು.

ಆರ್ಥಿಕ ಕುಸಿತ:– ಆರ್ಥಿಕ ಕುಸಿತವು ಹಣಕಾಸು ಮತ್ತು ಆರ್ಥಿಕ ವ್ಯವಸ್ಥೆಗಳ ಸ್ಥಗಿತಕ್ಕೆ ಸಂಬಂಧಿಸಿದೆ ಆರ್ಥಿಕ ಕುಸಿತ ಉಂಟಾದಾಗ ವಸ್ತುಗಳ ಮತ್ತು ಸೇವೆಗಳ ಉತ್ಪಾದನೆ, ವಸ್ತುಗಳು ಮತ್ತು ಸೇವೆಗಳ ಮಾರಾಟ, ಹಣದುಬ್ಬರ ಮತ್ತು ಇಳಿತಗಳ ನಿರ್ವಹಣೆ ಮುಂತಾದವು ವಿಫಲಗೊಳುತ್ತದೆ. 1930ರ ದ ಶಕವನ್ನೇ ಮಹಾನ್ ಆರ್ಥಿಕ ಕುಸಿತದ ಅವಧಿ ಎನ್ನಲಾಗಿದೆ. ಏಕೆಂದರೆ ಈ ಅವಧಿಯಲ್ಲಿ ಆರ್ಥಿಕ ಕುಸಿತವು ಪ್ರಪಂಚದ ಬಹುತೇಕ ಸ್ಥಳಗಳ ಆರ್ಥಿಕತೆ ಉಲ್ಬಣಗೊಂಡಿತ್ತು.

## 1.9 ನಿಮ್ಮ ಪ್ರಗತಿ ಪರಿಶೀಲಿಸಿ ಉತ್ತರಗಳು

ಪ್ರಶ್ನೆ – 1ರ ಉತ್ತರ: 2006ರ ಸಮಾಜ ವಿಜ್ಞಾನ ಭೋದನೆ ಕುರಿತ ಎನ್.ಎಫ್.ಜಿ ಪ್ರಕಾರ ಹಿರಿಯ ಪ್ರಾಥಮಿಕ ಹಂತದಲ್ಲಿ ಸಮಾಜ ವಿಜ್ಞಾನ ಭೋಧನೆಯ ಉದ್ದೇಶಗಳೆಂದರೆ,

- ಮಾನವಜನಾಂಗ ಮತ್ತಿತರ ಜೀವ ರೂಪಗಳ ವಾಸಸ್ಥಳವಾಗಿ ಭೂಮಿಯ ಬಗ್ಗೆ ಗ್ರಹಿಕೆ ಬೆಳೆಸುವುದು.
- ವಿದ್ಯಾರ್ಥಿಯನ್ನು ತನ್ನ ಸ್ವಂತ ಪ್ರದೇಶ, ರಾಜ್ಯ, ಮತ್ತು ದೇಶದ ಅಧ್ಯಯನದಲ್ಲಿ ತೊಡಗಿಸುವುದು
- ವಿಶ್ವದ ಇತರ ಭಾಗಗಳಲ್ಲಿ ಸಮಕಾಲೀನ ಅಭಿವೃದ್ಧಿಯ ಉಲ್ಲೇಖದೊಂದಿಗೆ ಭಾತರದ ಇತಿಹಾಸ ಅಧ್ಯಯನಕ್ಕೆ ತೊಡಗಿಸುವುದು.
- ವಿಶ್ವದ ಇತರ ಭಾಗ ಗಳಲ್ಲಿ ಸಮಕಾಲೀನ ಅಭಿವೃದ್ದಿಯ ಉಲ್ಲೇಖದೊಂದಿಗೆ ಭಾರತದ ಇತಿಹಾಸ ಅಧ್ಯಯನಕ್ಕೆ ತೊಡಗಿಸುವುದು.
- ವಿದ್ಯಾರ್ಥಿಗೆ ದೇ ಶದ ಸಾಮಾಜಿಕ ಮತ್ತು ರಾಜಕೀಯ ಸಂಸ್ಥೆಗಳ ಕಾರ್ಯ ಮತ್ತು ಕ್ರಿಯಾಶೀಲಗ್ಳಿತ್ವಳನ್ನು ಪರಿಚಯಿಸುವುದು.

ಪ್ರಶ್ನೆ – 2ರ ಉತ್ತರ: ಸಮಾಜ ವಿಜ್ಞಾನ ಕಲಿಕೆಯು ಪ್ರಾಚೀನ ಭಾರತದ ಸಾಂಸ್ಕೃತಿಕ /ಶೈಕ್ಷಣಿಕ ವ್ಯವಸ್ಥೆಯಲ್ಲಿ ಪ್ರಮುಖ ಸ್ಥಾನ ಪಡೆದಿತ್ತು. ನೈತಿಕತೆ, ಆಧ್ಯಾತ್ಮಿಕತೆ, ಸಾಮಾಜಿಕ ಮೌಲ್ಯಗ ಳು ಮತ್ತು ಒಲವುಗಳು ಮುಂತಾದವು ಪ್ರಾಚೀನ ಭಾರತದ ಮಾರ್ಗದರ್ಶಿ ತಪ್ಪುಗಳಾಗಿದ್ದವು ವೇದಗಳು, ಉಪನಿಷತ್ತುಗಳು, ಸ್ಮೃತಿಗಳು, ಪುರಾಣಗಳು, ರಾಮಾಯಣ, ಮಹಾಭಾರತ ಮುಂತಾದವು ಸಾಮಾಜಿಕ ಮೌಲ್ಯಗ ಳು ಮತ್ತು ಆರೋಗ್ಯಕರ ಜೀವನ ತತ್ವಗಳನ್ನು ಒಳಗೊಂಡಿರುವ ಕೆಲವು ಪ್ರಾಗಿತಿಹಾಸಿಕ/ಆರಂಭಿಕ ಇತಿಹಾಸ ಕಾಲದ ಗ್ರಂಥಗಳಾಗಿವೆ ಕೌಟಿಲ್ಯದ 'ಅರ್ಥಶಾಸ್ತ್ರ', ವಿಷ್ಣುಶರ್ಮನ' ಪಂಚತಂತ್ರ' ಇತ್ಯಾದಿಗಳು ಸಮಾಜವಿಜ್ಞಾನ ತತ್ವ ಸಿದ್ಧಾಂತಗಳನ್ನೊಳಗೊಂಡಿರುವ ಕೃತಿಗಳಾಗಿವೆ. ಈ ಎಲ್ಲ ಸಂದರ್ಭಗಳನ್ನು ಉಲ್ಲೇಖಿಸುತ್ತ ನಾಲುವ ಸಮಾಜ ವಿಜ್ಞಾನವು ಪ್ರಾಚೀನ ಭಾರತದ ಸಾಂಸ್ಕೃತಿಕ/ಶಿಕ್ಷಣ ವ್ಯವಸ್ಥೆ.,

ಪ್ರಶ್ನೆ :– 3ರ ಉತ್ತರ: ವಿಜ್ಞಾನ ಮತ್ತು ತಂತ್ರಜ್ಞಾನದ ಪ್ರಭಾವ, ಮುಂದುವರೆದ ಮಾಧ್ಯಮಗಳು ಮತ್ತಿತರ ಹಲವು ಅಂಶಗಳಿಂದಾಗಿ ವರ್ತಮಾನ ಸಮಾಜವು ಶೀಘ್ರಗತಿಯಲ್ಲಿ ಬದ ಲಾಗುತ್ತಿರುವ ಕಾರಣ, ಹೊಸ ಸಾಮಾಜಿಕ ಸಮಸ್ಯೆಗಳು ದಿನೇ ದಿನೇ ಇಮ್ಮಡಿಯಾಗುತ್ತಿವೆ ಇಂತಹ ಹೊಸ ಸಾಮಾಜಿಕ ಸಮಸ್ಯೆಗಳನ್ನು ಕಡಿಮೆ ಮಾಡುವುದಕ್ಕಾಗಿ, ಹೊಸ ಸಮಾಜಿಕ ವಿಜ್ಞಾನಗಳು ಹೊರಹೊಮ್ಮಿ ಸೂಕ್ತ ರೀತಿಯಲ್ಲಿ ಶಿಕ್ಷಣ ವ್ಯವಸ್ಥೆಯ ಭಾಗವಾಗುತ್ತಿವೆ 18 ಮತ್ತು 19ನೇಯ ಶತಮಾನಗಳಲ್ಲಿ ಸಾಮಾಜಿಕ ಕಾರ್ಯಗಳು, ಸಾಮಾಜಿಕ ಆಡಳಿತ, ಅಪರಾಧಶಾಸ್ತ್ರ, ಮನೋವಿಜ್ಞಾನ ಮತ್ತು ಜನಸಂಖ್ಯಾ ಅಸ್ತಿತ್ವದಲ್ಲೇ ಇರಲಿಲ್ಲವೆನ್ನಬಹುದು, ಆದರೆ, ಕಳೆದ ಹಾಗೂ ಈಗಿನ ಶತಮಾನಗಳಲ್ಲಿ ಈ ವಿಷಯಗಳು ಸೂಕ್ತ

ಪ್ರಾಮುಖ್ಯತೆಯನ್ನು ಪಡೆಯುತ್ತಿವೆ ಏಕೆಂದರೆ ಕಳೆದ ಮತ್ತು ಇಂದಿನ ಶತಮಾನಗಳಲ್ಲಿ ಹಲವು ಹೊಸ ಸಾಮಾಜಿಕ ಸಮಸ್ಯೆಗಳು ಈ ವಿಷಯಗಳಿಗೆ ಸಂಬಂಧಿಸಿವೆ ಉದಾಹರಣೆಗೆ, 18ನೇಯ ಮತ್ತು 19ನೇಯ ಶತಮಾನದಲ್ಲಿಯೂ ಸಹ ಜನಸಂಖ್ಯೆಗೆ, ಅದರಲ್ಲಿಯೂ ಜನಸಂಖ್ಯಾ ಬೆಳವಣಿಗೆಗೆ ಸಂಬಂಧಿಸಿದ ವಿಚಾರಗಳು ಪ್ರಧಾನ ಸಾಮಾಜಿಕ ವಿವಾದಾಂಶಗಳಾಗಿರಲೇ ಇಲ್ಲ, ಆದರೆ ಕಳೆದ ಮತ್ತು ಈಗಿನ ಶತಮಾನಗಳಲ್ಲಿ ಜನಸಂಖ್ಯಾ ಬೆಳವಣಿಗೆ ಸಂಬಂಧಿಸಿದ ಸಂಕೀರ್ಣತೆಗಳು ಸಾಮಾಜಿಕ ಜೀವನದ ಅನೇಖ ಅಂಶಗಳ ಮೇಲೆ ಪ್ರಭಾವ ಬೀರಿವೆ, ಇದರಿಂದಾಗಿ ಜನಸಂಖ್ಯಾಶಾಸ್ತ್ರ, ವಿಷಯವು ಉಗಮವಾಗಿ ಶಿಕ್ಷಣ ವ್ಯವಸ್ಥೆಯ ಮುಖ್ಯ ಭಾಗವಾಗಿ ಬೆಳಿದಿದೆ ಇದರಂತೆಯೇ ಇನ್ನೂ ಹಲವು ಸಮಾಜ ವಿಜ್ಞಾನ ವಿಷಯಗಳು ಸಾಮಾಜಿಕ ಸಮಸ್ಯೆಗಳ ಬದಲಾಗುತ್ತಿರುವ ಸ್ವರೂಪವನ್ನು ನಿಭಾಯಿಸುವ ಸಲುವಾಗಿ ಹುಟ್ಟಿಕೊಳ್ಳುತ್ತಿದೆ.

ಪ್ರಶ್ನೆ – 4ರ ಉತ್ತರ: ಒಂದು ಅಧ್ಯಯನ ಕ್ಷೇತ್ರವನ್ನು ನಿರೂಪಿಸುವ ಮೂರು ನಿಯಮಗಳು / ನಿಬಂಧನೆಗಳು –

1. ಒಂದು ಕ್ಷೇತ್ರವು ಹಲವಾರು ಪ್ರತ್ಯೇಕ ವಿಷಯಗಳನ್ನೊಳಗೊಂಡಿರಬೇಕು
2. ಒಂದು ಕ್ಷೇತ್ರದ ವ್ಯಾಪ್ತಿಯ ವಿಷಯಗಳ ನಡುವೆ ಕ್ರಿಯಾತ್ಮಕ ಸಂಬಂಧವೂ, ಮತ್ತು ವ್ಯತ್ಯಾಸಗಳು ಇರುತ್ತವೆ.
3. ವಿವಿಧ ಕ್ಷೇತ್ರಗಳು ಅಥವಾ ವಿವಿಧ ಕ್ಷೇತ್ರಗಳ ವಿಷಯಗಳ ನಡುವೆ ಕ್ರಿಯಾತ್ಮಕ ಸಂಬಂಧ ಮತ್ತು ವ್ಯತ್ಯಾಸಗಳು ಇರುತ್ತವೆ.

ಸಮಾಜ ವಿಜ್ಞಾನದ ವ್ಯಾಪ್ತಿಯಲ್ಲಿ ಸಾಮಾನ್ಯವಾಗಿ ಪರಿಗಣಿಸಲಾಗಿರುವ ಐದು ವಿಷಯಗಳೆಂದರೆ ರಾಜ್ಯಶಾಸ್ತ್ರ, ಭೋಗೊಳ, ಕಾನೂನು, ಸಮಾಜಶಾಸ್ತ್ರ ಮತ್ತು ಇತಿಹಾಸ.

ಪ್ರಶ್ನೆ – 5ರ ಉತ್ತರ: ಇತಿಹಾಸ ವಿಷಯವು ಅಂತರ್ವಿರ್ಷಯಾತ್ಮಕ ಸ್ವರೂಪದ್ದಾಗಿಒದೆ ಅದು ಅಂತರ್ವಿಷಯಾತ್ಮಕ ಏಕೆಂದರೆ ನಾವು ಇತಿಹಾಸ ಅಧ್ಯಯನ ಮಾಡುವಾಗ ಆರ್ಥಿಕ ಇತಿಹಾಸ, ರಾಜಕೀಯ ಇತಿಹಾಸ, ಮನೋವಿಜ್ಞಾನದ ಇತಿಹಾಸ, ಸಮಾಜಶಾಸ್ತ್ರದ ಇತಿಹಾಸ ಧಾರ್ಮಿಕ ಇತಿಹಾಸ ಇತ್ಯಾದಿಯಾಗಿ ಹಲವು ಸಮಾಜವಿಜ್ಞಾನ ವಿಷಯಗಳ ಇತಿಹಾಸವನ್ನು ಅಧ್ಯಯನ ಮಾಡುತ್ತೇವೆ ಅಲ್ಲದೆ, ಭೌತಶಾಸ್ತ್ರದ ಇತಿಹಾಸ, ಪ್ರಾಣಿಶಾಸ್ತ್ರದ ಇತಿಹಾಸ, ಗಣಿತದ ಇತಿಹಾಸ, ವಿವಿಧ ಭಾಷೆಗಳ ಇತಿಹಾಸ ಮುಂತಾಗಿ ಸಮಾಜ ವಿಜ್ಞಾನವಲ್ಲದ ಹಲವು ವಿಷಯಗಳು ಸಹ ಇತಿಹಾಸದ ಭಾಗಗಳಾಗುತ್ತವೆ.

### 1.10 ಘಟಕಾಂತ್ಯದ ಅಭ್ಯಾಸಗಳು

1. ಯಾವುದಾದರೂ ಒಂದು ತರಗತಿಯ ಮೂರು ಬೋರ್ಡ್‌ಗಳ ಎಂದರೆ ಸಿಬಿಎಸ್‌ಸಿ, ಐಸಿಎಸ್‌ಇ ಹಾಗೂ ನಿಮ್ಮ ರಾಜ್ಯ ಪಠ್ಯಕ್ರಮಗಳ ಸಮಾಜ ವಿಜ್ಞಾನ ಪಠ್ಯಪುಸ್ತಕಗಳನ್ನು ತೆಗೆದುಕೊಳ್ಳಿ ಎಲ್ಲ ಮೂರು ಬೋರ್ಡ್‌ಗಳ ಪಠ್ಯಪುಸ್ತಕಗಳಲ್ಲಿರುವ ವಿಷಯ ವಸ್ತುವಿಗೆ ಸಂಬಂಧಿಸಿದ ಸಮಾನತೆಗಳು ಮತ್ತು ವ್ಯತ್ಯಾಸಗಳನ್ನು ಗಮನಿಸಿ. ಇಂತಹ ಪಠ್ಯಪುಸ್ತಕಗಳ ವಿಷಯ ವಸ್ತುವಿನ ಸಮತೋಲನ ಕಾಪಾಡಲು ಕ್ರಮಗಳನ್ನು ಸೂಚಿಸಿ.

2. ಪ್ರಾಥಮಿಕ ಶಾಲಾ ಸಮಾಜವಿಜ್ಞಾನದ ಯಾವುದಾದರೂ ಒಂದು ಪರಿಕಲ್ಪನೆಯನ್ನು ಆಯ್ದುಕೊಂಡು ಆ ಪರಿಕಲ್ಪನೆಯನ್ನು ವಿದ್ಯಾರ್ಥಿಗಳಿಗೆ ಅಂತರ್ ವಿಷಯಾತ್ಮಕ ಕ್ರಮ ಮತ್ತು ಸಮನ್ವಯ ಕ್ರಮದಲ್ಲಿ ಭೋದನೆ ಮಾಡಲು ಪಾಠ ಯೋಜನೆ ತಯಾರಿಸಿ.

3. ವರ್ತಮಾನದ ದಿನಗಳು 21ನೇಯ ಶತಮಾನದ ಆರಂಭ ಘಟ್ಟದ ದಿನಗಳಾಗಿವೆ ಇಂದಿನಿಂದ ಆರಂಭಿಸಿ, 21ನೇಯ ಶತಮಾನದ ಕೊನೆಯವರೆಗೆ ಸಮಾಜದ ಮೇಲೆ ಅನೇಕ ಹೊಸ ಸಾಮಾಜಿಕ ಸಮಸ್ಯೆಗಳು ಪರಿಣಾಮ ಬೀರಬಹುದು 21ನೇಯ ಶತಮಾನ ಎದುರಿಸಬಹುದಾದ ಹೊಸ ಸಾಮಾಜಿಕ ಸಮಸ್ಯೆಗಳನ್ನು ಒಂದು ಪಟ್ಟಿ ತಯಾರಿಸಿ ಮತ್ತು ಇಂತಹ ಸಮಸ್ಯೆಗಳನ್ನು ತೊಡೆದು ಹಾಕಲು ಒಂದು ದಾರ್ಶನಿಕ/ಭವಿಷ್ಯಾತ್ಮಕ ಯೋಜನೆ ತಯಾ ರಿಸಿ.

# ಘಟಕ 2

## ಶಾಲಾ ಪಠ್ಯಕ್ರಮದಲ್ಲಿ ಸಮಾಜ ವಿಜ್ಞಾನ

ಸಂರಚನೆ


2.0 ಪೀಠಿಕೆ/ ಪ್ರಸ್ತಾವನೆ

2.1 ಕಲಿಕಾ ಉದ್ದೇಶಗಳು

2.2 ಸಮಾಜ ವಿಜ್ಞಾನ ಪಠ್ಯಕ್ರಮದ ಮೇಲೆ ಪ್ರಭಾವ ಬೀರಿದ ಶಕ್ತಿಗಳು

2.2.1 ವಸಾಹತು ಪರಂಪರೆ ಮತ್ತು ರಾಷ್ಟ್ರೀಯತಾವಾಧಿ ದೃಷ್ಟಿಕೋನ.

2.2.2 ಸ್ವಾತಂತ್ರೋತ್ತರ ಸಮಾಜ ವಿಜ್ಞಾನ ಪಠ್ಯಕ್ರಮದ ವಿಕಾಸ

2.2.3 ರಾಷ್ಟ್ರೀಯ ಭಾವೈಕ್ಯತೆ ಮತ್ತು ಅಂತರರಾಷ್ಟ್ರೀಯ ತಿಳುವಳಿಕೆ

2.2.4 ಜಾತ್ಯಾತೀತತೆ (ಧರ್ಮ ನಿರಪೇಕ್ಷತೆ) ಮತ್ತು ಕೋಮುವಾದ

2.2.5 ಸಮಾಜ ವಿಜ್ಞಾನ ಪಠ್ಯಕ್ರಮದ ಮೇಲೆ ಖೆಲಸ್ತರ ದೃಷ್ಟಿಕೋನದ ಪ್ರಭಾವ.

2.2.6 ಲಿಂಗತ್ತು, ಜಾತಿ ಮತ್ತು ಬುಡಕಟ್ಟು ದೃಷ್ಟಿಕೋನಗಳು

2.2.7 ಸಮಾಜ ವಿಜ್ಞಾನ ಪಠ್ಯಕ್ರಮ ಕುರಿತು ಅಂತರಾಷ್ಟ್ರೀಯ ದೃಷ್ಟಿಕೋನ

2.2.8 ರಾಷ್ಟ್ರಮಟ್ಟದಲ್ಲಿ ಸಮಾಜ ವಿಜ್ಞಾನದಲ್ಲಿ ಪ್ರಸಕ್ತ ಚಿಂತನೆ ಮತ್ತು ರೂಢಿ

2.3 ಸಾರಾಶಗೊಳಿಸೋಣ

2.4 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರಗಳು

2.5 ಪರಾಮರ್ಶನೆಗೆ ಸಲಹೆಗಳು

2.6 ಘಟಕಾಂತ್ಯ ಅಭ್ಯಾಸಗಳು


### 2.0 ಪೀಠಿಕೆ / ಪ್ರಸ್ತಾವನೆ

ಘಟಕ–1 ರಲ್ಲಿ ನೀವು ಸಮಾಜ ವಿಜ್ಞಾನದ ಸ್ವರೂಪ ಮತ್ತು ಒಂದು ವಿಷಯವಾಗಿ ಅದರ ಘಟಕಾಂಶಗಳನ್ನು–ಅದರ ವಿಕಾಸ ಮತ್ತು ಕಲ್ಪನೆ ಏನೆಂಬುದನ್ನು ಕಲಿತಿದ್ದೀರಿ. ಸಮಾಜದ ಪ್ರಸಕ್ತ ಸ್ಥಾನ ಮಾನ (ಸ್ಥಿತಿ ಗತಿ) ಬಗ್ಗೆಯೂ ಕಲಿತಿರುಬಿರಿ.

ಇಂದು ಅಸ್ತಿತ್ವದಲ್ಲಿರುವಂತೆ ಸಮಾಜ ವಿಜ್ಞಾನ ಪಠ್ಯಕ್ರಮದ ರೂಪವೇನೆಂದು ಯಾವಾಗಲೊಮದರೂ ಯೋಚಿಸಿದ್ದೀರಾ? ಪಠ್ಯ ಕ್ರಮದ ಪ್ರಸಕ್ತ ರೂಪದಲ್ಲಿ ವಿಕಾಸಗೊಂಡಿರುವುದು ಹೇಗೆ? ಸಮಾಜ ವಿಜ್ಞಾನ ವಿಷಯ ವಸ್ತು ಕ್ಷೇತ್ರಗಳು ವಿಸ್ತಾರವಾಗಿದ್ದು, ಅದು ವಿದ್ಯಾರ್ಥಿಗಳ ವಿಕಾಸವನ್ನು ಪ್ರಭಾವಿಸುವುದರಿಂದ ಅವರು ಕಲಿಯಬೇಕಾದ ವಿಷಯ ವಸ್ತುಗಳನ್ನು ಆಯ್ಕೆ ಮಾಡುವುದು ಬಹಳ ನಿರ್ಣಾಯಕ ಕಾರ್ಯವಾಗಿದೆ. ಸ್ಪಷ್ಟವಾಗಿ ಹೇಳುವುದಾದರೆ, ವಿಷಯ ವಸ್ತುವಿನ ಆಯ್ಕೆಯು ಶಿಕ್ಷಣದ ಗುರಿಗಳು ಹಾಗೂ ಸಮಾಜ ವಿಜ್ಞಾನ ಭೋಧನೆಯ ಗುರಿಗಳನ್ನು ಆಧರಿಸಿರುತ್ತದೆ. ಸಮಾಜವಿಜ್ಞಾನ

ಪಠ್ಯಕ್ರಮದಲ್ಲೇನಿರಬೇಕೆಂಬುದನ್ನು ನಿರ್ಧರಿಸುವವರು ಯಾರು? ಯಾವ ಶಕ್ತಿಗಳು ಪಠ್ಯಕ್ರಮ ಮತ್ತು ದೃಷ್ಟಿಕೋನಗಳು ಸಮಜವಿಜ್ಞಾನ ಪಠ್ಯಕ್ರಮ ರಚನೆಗೆ ಕೊಡುಗೆ ನೀಡಿವೆ? ಈ ವಿಚಾರಗಳ ಗ್ರಹಿಕೆಯು ನಿಮಗೆ ಸಮಾಜ ವಿಜ್ಞಾನ ಪಠ್ಯಕ್ರಮವನ್ನು ಉತ್ತಮವಾಗಿ ಗ್ರಹಿಸಲು ಹಾಗೂ ಶಾಲೆಯಲ್ಲಿ ಅದನ್ನು ಸಂವಹನ ಮಾಡಲು ಸಹಾಯ ಮಾಡುತ್ತದೆ.

ಸಮಾಜವಿಜ್ಞಾನವು ಇತಿಹಾಸ, ಭೂಗೋಳ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ ಮುಂತಾದ ಹಲವು ವಿಷಯಗಳಿಂದಾಯ್ದ ಘಾಟಗಳನ್ನೊಳಗೊಂಡಿದೆ. ಈ ಘಟಕದಲ್ಲಿ, ಈ ವಿಷಯಗಳ ತತ್ಪರಿಣಾಮವಾಗಿ ಭಾರತದಲ್ಲಿ ಸಮಾಜವಿಜ್ಞಾನ ಪಠ್ಯಕ್ರಮದ ಮೇಲೆ ಪ್ರಭಾವ ಬೀರಿರುವ ಶಕ್ತಿಗಳನ್ನು ಚರ್ಚಿಸಲಿದ್ದೇವೆ. ಈ ಶಕ್ತಿಗಳು ಸಮಾಜವಿಜ್ಞಾನ ಭೋಧನೆಯ ಉದ್ದೇಶಗಳ ಬದಲಾವಣೆಗೂ ಕಾರಣವಾಗಿವೆಯೇ ಎಂಬುದನ್ನು ಪರಿಶೀಲಿಸಲಿದ್ದೇವೆ.

### 2.1 ಕಲಿಕಾ ಉದ್ದೇಶಗಳು

ಈ ಘಟಕದ ಅಧ್ಯಯನದ ನಂತರ ನೀವು ಗಳಿಸುವ ಸಾಮರ್ಥ್ಯಗಳೆಂದರೆ, ಸಮಾಜವಿಜ್ಞಾನ ಪಠ್ಯಕ್ರಮದ ಮೇಲೆ,

- ವಿಕಾಸದ ಮೇಲೆ ಪ್ರಭಾವ ಬೀರಿದ ಶಕ್ತಿಗಳನ್ನು ಗುರುತಿಸುವುದು.
- ವಸಾಹತು ಪರಂಪರೆಯ ಪ್ರಭಾವವನ್ನು ಚರ್ಚಿಸುವುದು.
- ರಾಷ್ಟ್ರೀಯ ಭಾವೈಕ್ಯತೆ ಮತ್ತು ಅಂತರಾಷ್ಟ್ರೀಯ ತಿಳುವಳಿಕೆಯ ವಿಚಾರಗಳ ಪ್ರಭಾವವನ್ನು ವಿವರಿಸುವುದು.
- ಜಾತ್ಯಾತೀತತೆ–ಕೋಮುವಾದ ಚರ್ಚೆಯ ಪ್ರಭಾವಕ್ಕೆ ನಿದರ್ಶನ ನೀಡುವುದು.
- ಕೆಳಸ್ತರದ ದೃಷ್ಟಿಕೋನದ ಪ್ರಭಾವದ ಅರ್ಥ ವಿವರಣೆ ನೀಡುವುದು.
- ಲಿಂಗತ್ವ, ಜಾತಿ ಮತ್ತು ಬುಡಕಟ್ಟು ದೃಷ್ಟಿ ಕೋನಗಳ ಪ್ರಭಾವಗಳಿಗೆ ಉದಾಹರಣೆ ನೀಡುವುದು.
- ಪ್ರಸಕ್ತ ಅಂತರಾಷ್ಟ್ರೀಯ ದೃಷ್ಟಿಕೋನವನ್ನು ಚರ್ಚಿಸುವುದು.
- ರಾಷ್ಟ್ರ ಮಟ್ಟದಲ್ಲಿ ಸಮಾಜವಿಜ್ಞಾನ ಪಠ್ಯಕ್ರಮದಲ್ಲಿ ಪ್ರಚಲಿತ ಚಿಂತನೆ ಮತ್ತು ರೂಢಿಗಳಿಗೆ ನಿದರ್ಶನ ನೀಡುವುದು.

### 2.2. ಸಮಾಜವಿಜ್ಞಾನ ಪಠ್ಯಕ್ರಮವನ್ನು ಪ್ರಭಾವಿಸಿದ ಶಕ್ತಿಗಳು

ವಿಚಾರಗಳು ಮತ್ತು ಸಿದ್ಧಾಂತಗಳು, ಘಟನೆಗಳು ಮತ್ತು ಸಂಬವಗಳು, ಚಳುವಳಿಗಳು ಮತ್ತು ಕ್ರಾಂತಿಗಳು, ಸಂಘರ್ಷಗಳು ಮತ್ತು ಸಂಬಂಧಗಳು, ಪರಿಸರ ಮತ್ತು ಸಂಪನ್ಮೂಲಗಳು ಮುಂತದ ಹಲವು ಶಕ್ತಿಗಳು ಸಮಾಜವಿಜ್ಞಾ ಪಠ್ಯಕ್ರಮವನ್ನು ರೂಪಿಸಿವೆ. ಪ್ರಾರಂಭದಲ್ಲಿ, ಭಾರತದಲ್ಲಿ 19ನೇ ಶತಮಾನದಲ್ಲಿ ಆಧುನಿಕ ಆಂಗ್ಲ ಶಿಕ್ಷಣ ಪದ್ಧತಿ ಆರಂಭವಾಗುವು ಮೊದಲು ಸಮಾಜವಿಜ್ಞಾನವು ಒಂದು ಪ್ರತ್ಯೇಕ ಶಿಕ್ಷಣ ವಿಷಯವಾಗಿರಲಿಲ್ಲ. ವಸಾಹತು ಆಳ್ವಿಕೆದಾರರು ಬ್ರಿಟಿಷರಿಗೂ, ಕೆಲವು ಭಾರತೀಯರಿಗೂ ವಸಾಹತು ಸರ್ಕಾರದಲ್ಲಿ ದಕ್ಷ ಅಧಿಕಾರಿಗಳು ಮತ್ತು ಗುಮಾಸ್ತರು ಹಾಗೂ ಸಹಾಯಕ ವಾಗುವಂತೆ ಭಾರತಹಾಗೂ ಅಲ್ಲಿನ ಜನರ ಬಗ್ಗೆ ಕಾರ್ಯವಾಹಿ ಜ್ಞಾನ ನಿಡುವಂತಹ ಕೋರ್ಸ್‌ಗಳನ್ನು ವಿನ್ಯಾಸಗೊಳಿಸಿದರು. ಕಾಲಕ್ರಮೇಣ, ರಾಷ್ಟ್ರೀಯತೆಯ ಸಿದ್ಧಾಂತಗಳು, ತತ್ವಗಳು ಮತ್ತು ಭಾರತ ಸ್ವಾಂತಂತ್ರ್ಯಯ ಹೋರಾಟದ ಧ್ಯೇಯಗಳು, ಹಾಗೂ ಪ್ರಜಾಪ್ರಭುತ್ವ ಭಾರತದ ಸಂವಿಧಾನದಲ್ಲಿ ಪ್ರತಿಷ್ಠಾಪಿಸಿರುವ ಮೌಲ್ಯಗಳು, ಸಮಾಜವಿಜ್ಞಾನ ಪಠ್ಯಕ್ರಮದಲ್ಲಿ ಏನನ್ನು ಅಳವಡಿಸಬೇಕೆಂಬುದರ ಬಗ್ಗೆ ತೀರ್ಮಾನಗಳ ಮೇಲೆ ಪ್ರಭಾವ ಬಿರಿವೆ. ಭಾರತದ ಅಗಾಧ, ವೈವಿಧ್ಯಮಯ ಜನ ಸಂಖ್ಯೆಯೂ, ಜನರ ಅಭಿವೃದ್ಧಿ ಮತ್ತು ಸಾಮಾಜಿಕ–ಆರ್ಥಿಕ ಸ್ಥಿತಿ, ಸಾಮಾಜಿಕ ವಿಪ್ಲವಗಳು ಮತ್ತು ಘರ್ಷಣೆಗಳು ಸಹ ಈ ವಿಷಯದ ಮೇಲೆ ತಮ್ಮ ಗುರುತನ್ನು ಮೂಡಿಸಿವೆ. ಪರಿಸರ, ಸಂಪನ್ಮೂಲಗಳು, ರಾಜಕೀಯ, ಅಧಿಕಾರ ಸಂಘರ್ಷ ಮತ್ತು ಮಾನವೀಯ ಕಾಳಜಿಗಳ ಮುಂತಾದುವಕ್ಕೆ ಸಂಬಂಧಿಸಿದಂತೆ ವಿಶ್ವದಲ್ಲಿ ಭಾರತದ ಸ್ಥಾನವೂ ಕೂಡಾ ಸಮಾಜವಿಜ್ಞಾದಲ್ಲಿ ಪರಿಗಣನೆಗೆ ಬಂದಿವೆ. ದೇಶವು ಅನೇಕ ನೂತನ ವಿಚಾರಗಳನ್ನು–ಜನಸಂಖ್ಯಾ ಸ್ಫೋಟ, ಬಡತನ, ಸಮಾನತೆ, ಶೋಷಣೆ, ಅಭಿವೃದ್ಧಿ ಮತ್ತು ಒಳಗೊಳ್ಳುವಿಕೆ–ಎದುರಿಸಿದರೆ ಈ ಎಲ್ಲಾ ಕಾಳಜಿಗಳು ಕೂಡಾ ಸಮಾಜವಿಜ್ಞಾನ ಪಠ್ಯಕ್ರಮದಲ್ಲಿ ಏನನ್ನು ಭೋಧಿಸಲಾಗುವುದು, ಓದಲಾಗುವುದು ಎಂಬುದರ ಮೇಲೆ ಪ್ರಭಾವ ಬೀರಿದೆ.

### 2.2.1 ವಸಾಹತು ಪರಂಪರೆ ಮತ್ತು ರಾಷ್ಟ್ರೀಯತಾವಾದದ ದೃಷ್ಟಿಕೋನ

ವಸಾಹತು ಶಾಹಿ ಅವಧಿಯು ಭಾರತದಲ್ಲಿ ಸಮಾಜವಿಜ್ಞಾನ ಪಠ್ಯಕ್ರಮದ ಅಭಿವೃದ್ಧಿಗೆ ಅಪಾರ ಕೊಡುಗೆ ನೀಡಿದೆ. ಈ ಅವಧಿಯಲ್ಲಿಯೇ ಸಮಾಜ ವಿಜ್ಞಾನವು ಒಂದು ಪ್ರತ್ಯೇಕ ಅಧ್ಯಯನ ವಿಷಯವಾಗಿ ಹೊರಹೊಮ್ಮಿದ್ದು, ಅದರ ಪಠ್ಯಕ್ರಮ ವಸ್ತುವಿಷಯವನ್ನು ಆಯ್ಕೆ ಮಾಡಲಾಯಿತು. ಭಾರತದ ಇತಿಹಾಸವನ್ನು ಮೊದಲು ಬರೆದವರು ಬ್ರಿಟೀಷರು ಎಂಬುದನ್ನು ಒಪ್ಪಲೇಬೇಕು. ಆಧುನಿಕ ವೈಜ್ಞಾನಿಕ ಸರ್ವೇಕ್ಷಣೆ ಮತ್ತು ಜನಗಣತಿ ವಿಧಾಣಗಳನ್ನು ಬಳಸಿ ಭಾರತರ ಉದ್ದಗಲವನ್ನೂ ಅನ್ವೇಷಿಸಿದವರೂ ಅದೇ ವಸಾಹತು ಶಾಹಿ ದೊರೆಗಳೇ. ಇದೆಲ್ಲವೂ ಒಮದು ವಿಶಾಲ ಹರವು ವ್ಯಾಪ್ತಿ ಇರುವ, ಈ ವರೆಗೆ ಭಾರತಕ್ಕೆ ಹಾಗೂ ವಿಶ್ವಕ್ಕೆ ಗೊತ್ತಿರದ ವಾಸ್ತವಗಳನ್ನು. ಅಂಕಿ ಅಂಶಗಳನ್ನು, ದತ್ತಾಂಶಗಳನ್ನೇ ಸೃಷ್ಟಿಸಿತು.

ಭಾರತ ಮತ್ತು ಅಲ್ಲಿಯ ಜನರು ಹೊಸದೊಂದು ಬೆಳಕಿನಲ್ಲಿ ಪ್ರಕಟಗೊಂಡರು. ವಸಾಹತು ಶಾಹಿ ದೊರೆಗಳು ಈ ಸಮೃದ್ಧ ಜ್ಞಾನವನ್ನು ತಮ್ಮದೇ ಆಶಯ ಮತ್ತು ಉದ್ದೇಶಗಳೊಂದಿಗೆ ಸೇರಿಸಿ, ಸಮಾಜವಿಜ್ಞಾನ ಪಠ್ಯಕ್ರಮ ವಿಷಯ ವಸ್ತುವಿನ ಒಂದು ಸಂಯೋಜನೆಯನ್ನು ತಯಾರಿಸಲು, ದೇಶಕ್ಕೆ ಬಹಳ ಲಾಭದಾಯಕವೆಂದು ಪ್ರಕ್ಷೇಪಿಸಿ ಬಳಸಿಕೊಂಡರು.

ನೀವು ಸಿಂದೂ ಕೊಳ್ಳದ ನಾಗರೀಕತೆ ಬಗ್ಗೆ ತಿಳಿಸಿರಬಹುದು. ಸಿಂಧೂ ಕೊಳ್ಳದ ನಾಗರೀಕತೆಯು ಸುಮಾರು ಬಿ.ಸಿ.ಇ. 3300 ರಿಂದ ಬಿ.ಸಿ.ಇ. 1300 ರವರೆಗೆ ಭಾರತ ಉಪಖಂಡದ ವಾಯುವ್ಯ ಭಾಗದಲ್ಲಿ ಏಳಿಗೆ ಪಡೆದಿತ್ತು ಮತ್ತು ಭಾರತದ ಮೊದಲ ಪ್ರಮುಖವರಂದು ಪರಿಗಣಿಸಲಾಗಿದೆ. ಈ ಪ್ರಾಚೀನ ನಾಗರೀಕತೆಯು ತಂತ್ರಾಜ್ಞಾನತ್ಮಕವಾಗಿ ಮುಂದುವರೆದ ಮತ್ತು ಅತ್ಯಾಧುನಿಕ ನಗರ ಸಂಸ್ಕೃತಿಯ ಅಂಶಗಳನ್ನು ಹೊಂದಿತ್ತು. ಆಧುನಿಕ ಪ್ರಪಂಚವು ಸಿಂಧೂನದಿ ಕೊಳ್ಳದ ನಾಗರೀಕತೆ ಬಗ್ಗೆ ಮೊಟ್ಟಮೊದಲು ಅರಿತಿದ್ದು 1826ರಲ್ಲಿ ಆಗ ಬ್ರಿಟೀಷ್ ಸೈನ್ಯ ತೊರೆದಿದ್ದು ಚಾರ್ಲ್ಸ್ ಮ್ಯಸನ್ ಎಂಬುವರು ಇಂದಿನ ಹರಪ್ಪ ನಗರದ ಬಳಿ ಒಂದು ದೊಡ್ಡ ನಗರದ ಅವಶೇಷದ ದೊಡ್ಡ ಭಾರವಾದ ಇಟ್ಟಿಗೆಗಳನ್ನು ಎಡಹಾಕಿದರು. ಈಗಲೂ ಈ ಪುರಾತತ್ವ ಸ್ಥಳವು ಹರಪ್ಪ ಎಂದೇ ಕರೆಯಲ್ಪಡುತ್ತಿದೆ. 1856 ರಿಂದ 1872 ರ ನಡುವೆ ಭಾರತದ ಪುರಾತತ್ವ ಸರ್ವೇಕ್ಷಣಾಲಯದ ನಿರ್ದೇಶಕರಗಿದ್ದ ಸರ್. ಅಲೆಕ್ಸಾಂಡರ್ ಕನ್ನಿಂಗ್‌ಹ್ಯಮ್ ರವರು ಹರಪ್ಪದಲ್ಲಿ ಕೆಲವು ಸನ್ನ ಉತ್ಪನ್ನಗಳನ್ನು ನಡೆಸಿದರು. ಈ ಅವಶೇಷಗಳ ಸುತ್ತ ಮುತ್ತ ವಾಸಿಸುತ್ತಿದ್ದ ಜನರು ಅಲ್ಲಿ ದೊರೆತ ಇಟ್ಟಿಗೆಗಳನ್ನು ತಮ್ಮ ಮನೆ ಕಟ್ಟಲು ಮರುಬಳಸಿದರು. 1865ರಲ್ಲಿ ಕರಾಚಿ-ಲಾಹೋರ್ ರೈಲು ರಸ್ತೆಯನ್ನು ನಿರ್ಮಿಸಲೂ ಸಹ ಈ ಸ್ಥಳದ ಇಟ್ಟಿಗೆಗಳನ್ನು ಬಳಸಲಾಯಿತು. 1914ರಲ್ಲಿ ಬಾರತದ ಪುರಾತತ್ವ ಸರ್ವೇಕ್ಷಣದ ಮತ್ತೊಬ್ಬ ನಿರ್ದೇಶಕರಾಗಿದ್ದ ಸರ್ ಜಾನ್ ಮಾರ್ಷಲ್ ರವರು ಹರಪ್ಪಾದ ಸರ್ವೇಕ್ಷಣ ಸಮೀಕ್ಷೆ ನಡೆಸಿ ಒಂದು ಮಹತ್ತಾದ. ಆಲನಿರೋಧಕ ವ್ಯವ್ಸ್ಥೆ ಇರುವ ತೊಟ್ಟಿ ಅಥವಾ ಸ್ನಾನದ ಕೊಳ ಹಾಗೂ ಒಂದು ಕಣಜವನ್ನು ಪತ್ತೆಹಚ್ಚಿದರು. ಭಾರತಸ ಪುರಾತತ್ವ ಸರ್ವೇಕ್ಷಣದ ಒಬ್ಬ ಅಧಿಕಾರಿಯಾಗಿದ್ದ ಆರ್.ಡಿ.ಬ್ಯಾನರ್ಜಿಯವರು 1921–22ರಲ್ಲಿ ಮೆಹೊಂಜೋದಾರೋವನ್ನು ಅನ್ವೇಷಿಸಿದರು. ಈ ರೀತಿಯಲ್ಲಿಯೇ ನಾವು ಭಾರತದ ಮಹಾನ್ ಪ್ರಾಚೀನ ಇತಿಹಾಸವನ್ನು ತಿಳಿದೆವು.

ಭಾರತದ ಇತಿಹಾಸದಿಂದ ಮತ್ತೊಂದು ಉದಾಹರಣೆ ತೆಗೆದುಕೊಳ್ಳೋಣ. ಸಾಮ್ರಾಟ್ ಅಶೋಕನು ಪ್ರಪಂಚದ ಇತಿಹಾಸದಲ್ಲಿ ಅತ್ಯಂತ ಅದರ್ಶ ಪ್ರಂಯ ದೊರೆಗಳಲೊಬ್ಬನೆಂದು ಪರಿಗಣಿಸಲಾಗಿದೆ. ಬ್ರಿಟೀಷ್ ಇತಿಹಾಸಕಾರರಾದ ಹೆಚ್.ಜಿ.ವೆಲ್‌ರವರು" ಇತಿಹಾಸದ ಸಾಲುಗಳಲ್ಲಿ ತುಂಬಿರುವ ಸಾವಿರಾರು ಚಕ್ರವರ್ತಿಗಳ ನಡುವೆ ಅಶೋಕನ ಹೆಸರು ಹೊಳೆಯಿತ್ತಿದೆ, ಮತ್ತು ಪ್ರಾಯಶಃ ಒಂಟಿಯಾಗಿ ಹೊಳೆಯುತ್ತಿದೆ. ಒಂದು ನಕ್ಷತ್ರವಾಗಿ" ಎಂದಿದ್ದಾದೆ ಆದರೆ ಅಶೋಕ ಮತ್ತು ಅವನ ಚಟುವಟಿಕೆಗಳ ಬಗ್ಗೆ ಬಹುಮಟ್ಟಿಗೆ ಐತಿಹಾಸಿಕ ನಿಖರತೆ ಮತ್ತು ಖಚಿತತೆಗಳ ಕೊರತೆ ಇರುವ, ಬೌದ್ಧ ಸಾಹಿತ್ಯದಲ್ಲಿನ ದಂತಕಥೆಗಳನ್ನು ಹೊರತುಪಡಿಸಿ ಹೆಚ್ಚಿನದೇನೂ ತಿಳಿದಿರಲಿಲ್ಲ. 1837 ರಲ್ಲಿ ಜೇಮ್ಸ್ ಪ್ರಿನ್ಸೆಪ್ ಅವರು ದೆಹಲಿಯ ಒಂದು ದೊಡ್ಡ ಶಿಲಾಸ್ಥಂಭದ ಮೇಲಿನ ಪ್ರಾಚೀನ ಶಾಸನಗಳು, ಭಾರತದಾದ್ಯಂತ (ಮತ್ತು ಪಾಕಿಸ್ಥಾನ, ಆಫ್ಘನಿಸ್ಥಾನ ಮತ್ತು ನೇಪಾಳ ಸಹ) ಹರಡಿದ್ದು, ತನ್ನನ್ನು 'ದೇವಾನಾಂಪ್ರಿಯ, ಪ್ರಿಯದರ್ಶಿ" ಎಂದು ಸಂಭೋದಿಸಿಕೊಂಡ ರಾಜನು ಹೊದಡಿಸಿದ ಶಿಲಾ ಶಾಸನಗಳ ಸರಣಿ ಎಂದು ಸಿದ್ದವಾಯಿತು. ಈ ದೇವಾನಾಂಪ್ರಿಯ, ಪ್ರಿಯದರ್ಶಿ"ಯು ಅಶೋಕನೆ ಎಂಬುದು 1915 ರಲ್ಲಿ ಮತ್ತೊಂದು ಶಾಸನದ ಅನ್ವೇಷಣೆಯ ಮೂಲಕ ದೃಡೀಕರಿಸಲಯಿತು. ಈ ರೀತಿ ಮುಂದುವರೆದ ಪುರಾತತ್ವ ಹಾಗೂ ಐತಿಹಾಸಿಕ ಪ್ರಯತ್ನಗಳ ಕಾರಣದಿಂದಾಗಿ ನಮಗೆ ಅಶೀಕನ ಸಾಧನೆಗಳು ಹಾಗೂ

ಗುಣಗಳು ಮತ್ತು ಅದ್ಬುತ ಜೀವನದ ಪರಿಚಯವಾಯಿತು. ಇವುಗಳು ಮತ್ತಿತರ ಇಂತಹ ವಸಾಹತು ಶಾಹಿ ಕಾಲದ ಅನ್ವೇಷಣೆಗಳು ಭಾರತದ ಇತಿಹಾಸದ ಬಗ್ಗೆಗಿನ ಗ್ರಹಿಕೆಗಳನ್ನು ಬದಲಾಯಿಸಿಲುವು. ಮೇಲಿನ ಎರಡು ಉದಾಹರಣೆಗಳಿಂದ ನೀವು ಏನೆಂದು ತೀರ್ಮಾನಿಸುವಿರಿ?

ಕೆಲವು ಬ್ರಿಟೀಷ್ ಆಡಳಿತಗಾರರು ಮತ್ತು ಅಧಿಕಾರಿಗಳು ಭಾರತದ ಇತಿಹಾಸವನ್ನು ಬರೆಯಲು ಪ್ರಜ್ಞಾಪೂರ್ವಕ ಪ್ರಯತ್ನಗಳನ್ನು ಮಾಡಿದರು. 1784ರಲ್ಲಿ ವಾರೆನ್ ಹೇ ಸ್ಟಿಂಗ್ಸ್‌ನು ಈಸ್ಟ್ ಇಂಡಿಯಾ ಕಂಪಡನಿಯ ಅಧಿಕಾರಿಯಾಗಿದ್ದ ಸರ್ ವಿಲಿಯಂ ಜೋನ್ಸ್‌ರನ್ನು ಕಲ್ಕತ್ತಾ ಉಚ್ಚನ್ಯಾಯಾಲಯದ ಮುಖ್ಯನ್ಯಾಯಾಧೀಶರಾಗಿ ನೇಮಿಸಿ ಅವರಿಗೆ ಭಾರತದ ಇತಿಹಾಸ ಬರೆಯುವಂತೆ ನಿಯಮಿಸಿದನು. ಅಸಾಧಾರಣ ಭೌದ್ಧಿತ ಸಾಮಮಥ್ಯ ಹೊಂದಿದ್ದವಿಲಿಯಂ ಜೋನ್ಸ್ ಕೂಡಲೇ ಬಂಗಾಲದ ಏಷಿಯಾಟಿಕ್ ಸೊಸೈಟಿಯನ್ನು ಸ್ಥಾಪಿಸಿ ಅದರ ವತಿಯಿಂದ ಣಾರತ ಇತಿಹಾಸವನ್ನು ಬರೆಯತೊಡಗಿದರು. ವಿಲಿಯಂ ಜೋನ್ಸ್ ಮಾಡಿದ ಪ್ರಯತ್ನಗಳಿಗೆ ಹಲವಾರು ಉತ್ಸಾಹಿ ವ್ಯಕ್ತಿಗಳ ಬೆಂಬಲ ಇತ್ತು. ಆತನ ಪ್ರಯತ್ನಗಳು 1788 ರಲ್ಲಿ ಆರಂಭಿಸಿದ ಏಷಿಯಾಟಿಕ್ ಆರಂಭಿಸಿದ ಏಷಿಯಾಟಿಕ್ ರಿಸರ್ಚಸ್ ಎಂಬ ನಿಯತಕಾಲಿಕ ಜರ್ನಲ್‌ನ ಈ ಮೂಲಕ ಏಷಿಯಾಟಿಕ್ ಸೊಸೈಟಿ ಕೈಗೊಂಡ ಸಂಶೋಧನೆಗಳಿ ಮತ್ತು ಸಮೀಕ್ಷೆಗಳನ್ನು ಪ್ರಕಟಿಸಿ ಜನರು ಭಾರತದ ಪುರಾತನ ಸಂಪತ್ತನ್ನು ಅರಿಯುವಂತೆ ಮಾಡಲಾಯಿತು. ಮುಂದುವರೆದ ಕ್ಷೇತ್ರಕಾರ್ಯವು ಸ್ವಲ್ಪ ಕಾಲಸಲದಲಿ ಅನೇಕ ಪ್ರಾಚೀನ ವಸ್ತುಗಳು ಮತ್ತು ಅವಶೇಷಗಳನ್ನು ಬೆಳಕಿಗೆ ತಂದಿತು. ಅನಂತರ ಇಂತಹುದೇ ಸೊಸೈಟಿಗಳನ್ನು ಬಾಂಬೆ (ಮುಂಬಯಿ) ಮತ್ತು ಮುದ್ರಾಸ್ (ಚೆನ್ನೈ)ಗಳಲ್ಲಿ ಅರಂಭಿಸಲಾಯಿತು. 1833ರಲ್ಲಿ ಜೇಮ್ಸ್ ಪ್ರಿನ್ಸ್ ಏಷಿಯಾಟಿಕ್ ಸೊಸೈಟಿಯ ಕಾರ್ಯದರ್ಶಿಯಾದನು.1834 ಮತ್ತು 1837ರ ನಡುವೆ ಬ್ರಾಹ್ಮಿ ಮತ್ತು ಖರೋಷ್ಠಿ ಲಿಪಿಗಳನ್ನು ಬಿಡಿಸಿ ಓದಿದ್ದು ಮತ್ತು 'ಪ್ರಿಯದರ್ಶಿ' ಎಂಬುದನ್ನು ಅಶೋಕ ಎಂಬುದಾಗಿ ಪತ್ತೆ ಹಚ್ಚಿದ್ದ ಆತನ ಅತ್ಯಂತ ಚರಿತ್ರಾತ್ಮಕ ಸಾದನೆಯಾಗಿದೆ. ಬಂಗಾಳದ ಏಷಿಯಾಟಿಕ್ ಸೊಸೈಟಿ ಭಾತರದ ಇತಿಹಾಸದ ಮರುರಚನೆಗೆ ನೀಡಿದ ಕೊಡುಗೆ ಇಂದು ಪ್ರಸಿದ್ಧವಾಗಿದೆ. ವಸಾಹತು ಆಡಳಿತದ ಅವಧಿಯು ಭಾರತದ ಇತಿಹಾಸದ ಮರುರಚನೆಗೆ ದಾರಿ ಮಾಡಿದ ಪುರಾತತ್ವ ಅವಶೇಷಗಳ ಅನ್ವೇಷಣೆ ಮತ್ತು ಗ್ರಹಿಕೆಗಾಗಿ ಮಾಡಿದ ಅನೇಕ ಪ್ರಯತ್ನಗಳಗೂ ಕಾರಣವಾಗಿದೆ. ಬೆಂಗಾಲ್ ಎಂಜಿನಿಯರ್ಸ್‌ನ ದ್ವಿತೀಯ ಲೆಫ್ಟಿನೆಂಟ್ ಆಗಿದ್ದ ಕನ್ನಿಂಗ್ ಹ್ಯಾಮ್ ರವರನ್ನು 1816ರ ಡಿಸೆಂಬರ್ ನಲ್ಲಿ ಪ್ರಥಮ ಪುರಾತತ್ವ ಸರ್ವೇಕಷಕರಾಗಿ ನೇಮಕ ಮಾಡಿದುದರಿಂದ ಪೂರ್ಣ ಪ್ರಮಾಣದ ಪ್ರಾಚ್ಯ ವಸ್ತು ಸರ್ವೇಕ್ಷಣೆಗಳಿಗೆ ಅನುಕೂಲ ಒದಗಿತು. ಭಾರತದ ಪ್ರಾಚ್ಯವಸ್ತು ಸರ್ವೇಕ್ಷಣೆಯು ಅನಂತರದಲ್ಲಿ ಸರ್ಕಾರದ ಒಂದು ಪ್ರತ್ಯೇಕ ಇಲಾಖೆಯಾಗಿ, ಭಾರತದಲ್ಲಿ ಪ್ರಚ್ಯವಸ್ತು ಸರ್ವೇಕ್ಷಣೆ ಮತ್ತು ಸಂರಕ್ಷಣಾ ಚಟುವಟಿಕೆಗಳ ಮುಂಚೂಣಿಯಲ್ಲಿದೆ. ಭಾರತದ ಮೊಟ್ಟಮೊದಲ ಸಮಗ್ರ ಇತಿಹಾಸವನ್ನು ಬರೆದ ಕೀರ್ತಿ ಜೇಮ್ಸ್ ಮಿಲ್‌ರಿಗೆ ಹೋಗಿ ಆತ ಭಾರತಕ್ಕೆ ಬೇಟಿಯನ್ನೇ ನೀಡಲಿಲ್ಲ. ಇದರಿಂದಾಗಿಯೇ ಇತಿಹಾಸವನ್ನು ಬರೆಯುವಾಗ ಹೆಚ್ಚು ವಸ್ತುನಿಷ್ಠನನ್ನಾಗಿ ಮಾಡಿತೆಂಬುದು ಅವರ ಅಭಿಪ್ರಾಯ ಅವರು ತಮ್ಮ ಕಾರ್ಯವನ್ನು 1806 ರಲ್ಲಿ ಆರಂಭಿಸಿ ಬ್ರಿಟಿಷ್ ಇಂಡಿಯಾದ ಇತಿಹಾದ (The History of British India) ವನ್ನು 1818 ರಲ್ಲಿ ಪ್ರಕಟಿಸುವ ಮೂಲಕ ಪೂರ್ಣಗೊಳಿಸದರು ಇನನೂ ಹಲವು ಬ್ರಿಟಿಷ್ ಆಡಳಿತಗಾರರು ಮತ್ತು ಸೈನ್ಯಾಧಿಕಾರಿಗಳು ಭಾರತದದ ಇತಿಹಾಸ ಬರೆಯುವ ಪ್ರಯತ್ನ ಮಾಡಿದ್ದಾರೆ. ಅವರಲ್ಲಿ ಕೆಲವರೆಂದರೆ ಮೇಜರ್ ಜನರಲ್ ಜಾನ್ ಮ್ಯಾಲ್ಕೋಮ್ (A Major of the central India-1824); ಕ್ಯಾಪ್ಟನ್ ಗ್ರಾಂಟ್ ಡಫ್‌ರ (History of the Marathas, 1826); ಜನರಲ್ ಬ್ರಿಗ್ಸ್ (History of the Rise of Mohammedan Power in India, 1829); ಮೌಂಟ್ ಸ್ಟೂವರ್ಟ್ ಎಲ್ಫಿನ್‌ಸ್ಟನ್ (History of the India, 1841) ಹಾಗೂ ಕನ್ನಿಂಗ್ ಹ್ಯಾಮ್ (History of Sikhs, 1849). ಈ ಕೃತಿಗಳು ಬೇಗನೆ ಭಾರತ ಮತ್ತು ಇತರ ದೇಶಗಳಲ್ಲಿ ಜನಸಾಮನ್ಯರಿಗೆ ಭಾರತ ಇತಿಹಾಸದ ಜ್ಞಾನ ಮತ್ತು ಮಾಹಿತಿಗೆ ಪ್ರಮಾಣಿತ ಮೂಲಾಧಾರಗಳಾದುವು. ದೇಸದಲ್ಲಿ ಇಂಗ್ಲೀಷ್ ಶಿಕ್ಷಣ ವ್ಯವಸ್ಥೆಯನ್ನು ಪರಿಚಯಿಸಿದಾಗ, ಸಮಾಜವಿಜ್ಞಾನ ಪಠ್ಯಕ್ರಮವು ಬ್ರಿಟಿಷ್ ಲೇಖಕರು ಬರೆದ ಭಾರದ ಇತಿಹಾಸವನ್ನೇ ಬಳಸಿತು.

ಈಸ್ಟ್ ಇಂಡಿಯಾ ಕಂಪೆನಿಯು 1767 ರಲ್ಲಿ ದೇಶವನ್ನು ಸ್ವಲ್ಪ ಸ್ವಲ್ಪವಾಗಿ ಅನ್ವೇಷಿಸಲು ಹಾಗೂ ಮಿಲಿಟರಿ ಮತ್ತು ನಾಗರೀಕ ಉದ್ದೇಶಗಳಿಗಾಗಿ ನಕ್ಷೆರಚನೆ ಕಾರ್ಯಾಚರನೆ ಮಾಡಲು ಸರ್ವೇ ಆಫ್ ಇಂಡಿಯಾವನ್ನು ಸ್ಥಾಪಿಸಿತು. ಈ ಸರ್ವೇಕ್ಷಣೆಗಳು ಭಾರತದ ಬೂ ಪ್ರದೇಶ ಹಾಗೂ ಸಂಪನ್ಮೂಲಗಳನ್ನು ಕುರಿತು ಮಾಹಿತಿಯ ಸಮೃದ್ಧ

ಮೂಲಾಧಾರವಾದುದು. ಇಂತಹ ಮಾಹಿತಿಯು ಸ್ವಾಭಾವಿಕ ಸಂಪನ್ಮೂಲಗಳನ್ನು ಬಳಸಿಕೊಳ್ಳಲು, ವ್ಯಾಪಾರ ಮತ್ತು ವಾಣಿಜ್ಯಕ್ಕಾಗಿ, ಆಡಳಿತಕ್ಕಾಗಿ ಮತ್ತು ಅಭಿವೃದ್ಧಿ ಯೋಜನೆ ರೂಪಿಸಲು ಅತ್ಯಂತ ಮಹತ್ವದ್ದಾಗಿತ್ತು. ದೇಶದ ಸರ್ವೇಕ್ಷಣೆಯಿಂದಾಗಿ ಉತ್ಪತ್ತಿಯಾದ ಜ್ಞಾನ ಮತ್ತು ಮಾಹಿತಿಯು ದೇಶ ಮತ್ತು ಅಲ್ಲಿನ ಜನರ ಬಗ್ಗೆ ಹೊಸ ತಿಳುವಳಿಕೆಯನ್ನು ಒದಗಿಸಿತು. 'ಈಸ್ಟ್ ಇಂಡಿಯಾ ಕಂಪೆನಿಯು ಭಾರತದ ಸರ್ವೇಕ್ಷಣೆ ನಡೆಸಲು ಇದ್ದ ಪ್ರೇರಣೆ ಏನಿರಬಹುದೆಂಧು ಊಹಿಸಬಲ್ಲಿರಾ?' ಇಂದು ಸಮಾಜವಿಜ್ಞಾನ ಪಠ್ಯಕ್ರಮವು ವಿದ್ಯಾರ್ಥಿಗಳಿಗೆ ತಾವು ವಾಸಿಸುವ ಸ್ಥಳ ಭಾರತಭೂಮಿ ಮತ್ತು ಜನರನ್ನು ಎಂದರೆ ಅಲ್ಲಿನ ನದಿಗಳು, ಪರ್ವತಗಳು, ಅರಣ್ಯಗಳು, ವ್ಯವಸಾಯ, ಆರ್ಥಿಕ ಪರಿಸ್ಥಿತಿ, ಜನಸಂಖ್ಯೆ, ಧರ್ಮಗಳು, ಸರ್ಕಾರ ಮತ್ತಿತರ ಅನೇಕ ಲಕ್ಷಣಗಳನ್ನು ತಿಳಿದುಕೊಳ್ಳುವ ಸಾಮರ್ಥ್ಯ ಬೆಳೆಸುವ ಗುರಿ ಹೊಂದಿದೆ. ಜ್ಞಾನ ಮತ್ತು ಗ್ರಹಿಕೆಯ ಈ ಎಲ್ಲಾ ಕ್ಷೇತ್ರಗಳೂ ಈಗಸಮಾಜವಿಜ್ಞಾನ ಪಠ್ಯಕ್ಷದ ಭಾಗಗಳಾಗಿದ್ದು, ಇತಿಹಾಸ, ಭೂಗೋಳ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ ಮುಂತಾದ ವಿವಿಧ ವಿಷಯಗಳ ಅಧ್ಬುತ ಲಭ್ಯವಾಗಿವೆ.

ಭಾರತದ ಸಮೃದ್ಧ ವೈವಿದ್ಯತೆಯುಲ್ಲ ಜನತೆಗೆ ಮನೆಯಾಗಿದೆ. ಭಾರತದ ಜನಗಣಿತಿಯು ಭಾರತದ ಜನರ ದೇಸದಲ್ಲಿ ವಾಸಿಸುತ್ತಿರುವ ಜನಸಂಖ್ಯೆ ಲಿಂಗಾನುಪಾತ, ಸಾಕ್ಷರತೆ, ಮತ್ತಿತರ ಅನೇಕ ಗುಣಲಕ್ಷಣಗಳ-ಬಗ್ಗೆ ಮಾಹಿತಿಯ ಏಕೈತೆ ಮುಖ್ಯ ಮೂಲವಾಗಿದೆ. ಇಂತಹ ಮಾಹಿತಿಯು ನಮ್ಮ ಸಮಾಜವನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಲು ಮುಖ್ಯ ಇಂಗಿತಾರ್ಥ ಹೊಂದಿದೆ. ನೀವು ಎಂದಾದರೂ ಜನಗಣತಿಯ ಫಲಿತಾಂಶಗಳನ್ನು ವಿಶ್ಲೇಷಿಸಿದ್ದೀರಾ? ಜನಗಣತಿಯನ್ನು 1872ರಲ್ಲಿ ಬ್ರಿಟಿಷ್ ಸರ್ಕಾರವು ಕೈಗೊಂಡಿತು. ಮುಂದಿನ ಗಣತಿಯು 1881ರಲ್ಲಿ ನಡೆದಿದ್ದು, ಇದಾದ ನಂತರ ಪ್ರತಿ ದಶಕಕ್ಕೊಮ್ಮೆ ನಿಯಮಿತವಾಗಿ ಜನಗಣತಿಗಳನ್ನು ನಡೆಸಲಾಗುತ್ತಿದೆ. ಈ ದೇಶದಲ್ಲಿ ಸತತವಾಗಿ ನಡೆಯುತ್ತಿರುವ ಈ ಜನಗಣಿತಿ ಕಾರ್ಯಗಳಿಂದ ಉತ್ಪತ್ತಿಯಾಗುವ ಜ್ಞಾನ, ಮಾಹಿತಿ ಮತ್ತು ತಿಳುವಳಿಕೆಗಳು ಸಮಾಜ ವಿಜ್ಞಾನ ಠ್ಯಕ್ರಮಕ್ಕೆ ಅತ್ಯಮೂಲ್ಯ ಆದಾನ ಒದಗಿಸಿ, ಪ್ರಭಾವ ಬಿರಿದೆ.

1835ರಲ್ಲಿ ಇಂಗ್ಲೀಷ್ ಶಿಕ್ಷಣ ವ್ಯವಸ್ತೆಯ ಪ್ರಾರಂಭವು ಭಾರತಿಯ ವಿದ್ಯಾರ್ಥಿಗಳಿಗೆ ಪಾಶ್ಚಾತ್ಯ ವಿಜ್ಞಾನ ಮತ್ತು ತಂತ್ರ ಜ್ಞಾನಗಳನ್ನು ಅಧ್ಯಯನ ಮಾಡುವಂತೆ ಸಹಾಯ ಮಾಡಿತಲ್ಲದೇ ಪ್ರಕೃತಿ ಹಾಗೂ ಸಮಾಜಗಳನ್ನು ಅಧ್ಯಯನ ಮಾಡಲು ಬಳಸುವ ಕಟ್ಟು ನಿಟ್ಟಿನ, ಕೂಲಂಕುಶ ವಿಧಾನಗಳನ್ನು ಪರಿಚಯಿಸಿತು. 1854 ವುಡ್ ಡಿಸ್ಪ್ಯಾಚ್ (wood dispatch) ದೇಶದಲ್ಲಿ ವಿವಿಧ ಹಮತದ ಶಿಕ್ಷಣದ ಆಢಳಿತ ಮತ್ತು ನಿರ್ವಹಣೆಗಾಗಿ ವಿವರವಾದ ವ್ಯವಸ್ಥೆಗಳಿರುವ ಒಮದು ಆಧುನಿಕ ಶಿಕ್ಷಣದ ಸಂರಚನೆಯನ್ನು ಸೃಷ್ಟಿಸಲು ಪ್ರಯತ್ನಮಾಡಿತು. 1857 ರಲ್ಲಿ ಬಾಂಬೆ (Mumbai) , ಕಲ್ಕತ್ತಾ (Kolkata) ಮತ್ತು ಮದ್ರಾಸ್ (Chennai) ಗಳಲ್ಲಿ ಮೊದಲ ಮೂರು ಅಧುನಿಕ ವಿಶ್ವವಿದ್ಯಾಲಯಗಳ ಸ್ಥಾಪನೆ ಶೀಘ್ರದಲ್ಲಿಯೇ ನಡೆಯಿತು-ಬ್ರಿಟಿಷ್ ಸರ್ಕಾರವು ಆಡಳಿತದ ವ್ಯವಸ್ಥೆ, ರೈಲ್ವೆ ಮತ್ತು ಟೆಲಿಗ್ರಾಫ್ ಲೈನ್‌ಗಳಂತಹ ಸಾರಿಗೆ ಹಾಗೂ ಸಂವಹನಗಳ ಹೊಸ ವ್ಯವಸ್ಥೆಗಳ ಸ್ಥಾಪನೆಗೂ ಕಾರಣವಾಗಿದೆ. ಕಾನೂನಿನ ಆಢಳಿತದ ಹಾಗೂ ಕಾರ್ಯಂಗದ ಕಾರ್ಯಗಳಿಂದ ನ್ಯಾಯಾಂಗದ ಪ್ರತ್ಯೇಕಿಸುವಿಕೆ ಕೂಡಾ ಮುಖ್ಯ ಬೆಳವಣಿಗೆಗಾಳಗಿದ್ದವು. ಅದೇ ಸಮಯದಲ್ಲಿ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಪ್ರಾವಧಾನ, ಸತಿ ಪದ್ಧತಿಯ ನಿರ್ಮೂಲನಗಳಂತಹ ಸಾಮಾಜಿಕ ಸುಧಾರಣೆಯ ಕಾರ್ಯಕ್ರಮವನ್ನೂ ಆರಂಬಿಸಿಲಾಯಿತು. ಈ ಅವಧಿಯಲ್ಲಿ ಭಾರತದ ಸಂಸ್ಕೃತಿ ಮತ್ತು ಪರಂಪರೆಗಳಲ್ಲುಯೂ ವಿಸ್ತೃತ ಆಸ್ಕತಿ ಕಂಡುಬಂದಿದೆ. ಭಾರತದ ಅನೇಕ ಜ್ಞಾನದ ಪವಿತ್ರ ಮತ್ತು ಧರ್ಮ ನಿರಪೇಕ್ಷ ಗ್ರಂಥಗಳನ್ನು ಯೋರೋಪಿಯನ್ ಭಾಷೆಗಳಿಗೆ ಅನುವಾದಿಸಲಾಯಿತು ಹಾಗೂ ಪ್ರಕಟಿಸಲಾಯಿತು. ಇವುಗಳು ಭಾರತ ಸಂಸ್ಕೃತಿ, ನಾಗರೀಕತೆಯ ಮೇಲೆ ಹೊಸ ಬೆಳಕನ್ನು ಚೆಲ್ಲಿದುವು. ಆರ್ಮನ್ ಓರಿಯಂಟಲಿಸ್ಟ್ ಆದ ಫ್ರೆಡರಿಕ್ ಮುಲ್ಲರ್‌ರವರು ಈ ವಿಚಾರದಲ್ಲಿ ನಾಯಕತ್ವದ ಪಾತ್ರವಹಿಸಿದರು ಅವರು 'ಸೇಕ್ರೆಡ್ ಬುಕ್ಸ್ ಆಫ್ ದ ಈಸ್ಟ್' ಎಂಬ ಶೀರ್ಷಿಕೆಯಲ್ಲಿ ಒಂದು ಸರಣಿಯನ್ನು ಪ್ರಕಟಿಸಿದರು.

ಪುರಾತತ್ವ ಶಾಸ್ತ್ರ, ಇತಿಹಾಸ, ಸಂಸ್ಕೃತಿ, ಪರಂಪರೆ, ಭಾರತ ಭೂಮಿ ಮತ್ತು ನೈಸರ್ಗಿಕ ಸಂಪನ್ಮೂಲಗಳು, ಜನಸಂಖ್ಯಾ ಗಣತಿ, ಭಾರತದ ಆಡಲಿತದಲ್ಲಿ ಮಾರ್ಪಾಡು, ಶಿಕ್ಷಣ, ಸಾರಿಗೆ ಮತ್ತು ಸಂವಹನ ಮತ್ತು ಸಮಾಜ ಸುಧಾರಣಾ ಚಟುವಟಿಕೆಗಳೇ ಮುಂತಾಗಿ ವಿವಿಧ ಕ್ಷೇತ್ರಗಳಲ್ಲಿನ ಎಲ್ಲಾ ಒಂದೇ ಒಂದು ಕಾಪಾಟು ಭಾರತ ಹಾಗೂ ಅರೇಬಿಯಾಗಳ ಸಂಪೂರ್ಣ ಸ್ಥಳೀಯ ಸಾಹಿತ್ಯಕ್ಕೆ ಸಮ ಎಂಬ ಮಾತನ್ನು ನಿರಾಕರಿಸುವ ಯಾರನ್ನು ನಾನು ಕಂಡಿಲ್ಲ, ಪಾಶ್ಚಾತ್ಯ ಸಾಹಿತ್ಯದ

ಆಂತರಿಕ ಶ್ರೇಷ್ಠತೆಯನ್ನು ಶಿಕ್ಷಣದ ಪೌರ್ವಾತ್ಯ ಯೊಝುನೆಯನ್ನು ಬೆಂಬಲಿಸುವ ಸಮಿತಿಯ ಸದಸ್ಯರೆಲ್ಲ ಪೂರ್ಣವಾಗಿ ಒಪ್ಪಿರುತ್ತಾರೆ.

ಮೆಕಾಲೆಯವರ ಈ ಹೇಳಿಕೆ ಬಗ್ಗೆ ನಿಮ್ಮ ಅನಿಸಿಕೆ ಏನು ?

ಮೂಲ:– Thomas fabrication Macaulay, “Minute on education, “in Through Indian Eyes: the living Tradition, Donald J.Johnson, et.al (New York : CITE Books, 1992)

ಇತಿಹಾಸವನ್ನು ಬರೆಯುವಾಗ ಮತ್ತು ಸಾಮಾಜಿಕ, ಧಾರ್ಮಿಕ ಆಚರಣೆಗಳನ್ನು ಅರ್ಥೈಸುವಾಗ ಅನೇಕ ಬ್ರಿಟಿಷ್ ಲೇಖಕರು ಮತ್ತು ಆಡಳಿತಗಾರರು ಭಾರತೀಯ ಜೀವನ ಹಾಗೂ ಸಂಸ್ಕೃತಿಯ ನಕಾರಾತ್ಮಕ ಅಂಶಗಳನ್ನು, ಮತ್ತು ಬ್ರಟಿಷ್ ಹಾಗೂ ಯೂರೋಪಿಯನ್ ರಿತಿಗಳ ಭಾವಿಸಲಾದ ಶ್ರೇಷ್ಠತೆಗಳನ್ನು ಉತ್ಪ್ರೇಕ್ಷೆ ಮಾಡಿ ಬ್ರಿಟಿಷ್ ಆಳ್ವಿಕೆಯು ವಾಸ್ತವದಲ್ಲಿ ಭಾರತಕ್ಕೆ ಲಾಭದಾಯಕ ಎಂದು ತೋರಿಸಲು ಯತ್ನಿಸಿದರು. ರಾಷ್ಟ್ರೀಯತಾವಾದದ ಭಾವನೆಗಳಿದ್ದ ಭಾರತೀಯರು ಇಂತಹ ಸ್ಥಿತಿಯನ್ನು ಒಪ್ಪಲು ಸಿದ್ದರಾಗಿರಲಿಲ್ಲ, ಅವರು ಭಾರತೀಯರು ತಮ್ಮ ಇತಿಹಾಸವನ್ನೇ ತಾವೇ ಬರೆಯಬೇಕು ಮತ್ತಿ ತಮ್ಮ ಸಂಸ್ಕೃತಿಯನ್ನು ತಾವೇ ವ್ಯಾಖ್ಯಾನಿಸಬೇಕೆಂಬುದಾಗಿ ಅಪೇಕ್ಷಿಸದರು.

ಇತಿಹಾಸದ ಝುಟನೆಗಳನ್ನು ವಿವಿಧ ರೀತಿಗಳಲ್ಲಿ ವ್ಯಾಖ್ಯಾನಿಸಬಹುದು ಎಂದು ನಿಮಗೆನಿಸುತ್ತದೆಯೇ ? 1857ರ ದಂಗೆ ನೀವು ಹೇಗೆ ವ್ಯಾಖ್ಯಾನಿಸುವಿರಿ ? ಅದು ಅನೇಕ ಬ್ರಿಟಿಷ್ ಇತಿಹಾಸಕಾರರು ವಿವರಿಸಿರುವಂತೆ ಕೇವಲ ‘ಸಿಪಾಯಿ ದಂಗೆ’ ಯಾಗಿತ್ತೆ? ಅಥವಾ, ಅದು ಇನ್ನೂ ಹೆಚ್ಚನದಾನ ರಾಷ್ಟ್ರೀಯತಾವಾದಿ ಇತಿಹಾಸಕಾರರು ವರ್ಣಿಸಿರುವಂತೆ ಭಾರತೀಯರ ಮೊದಲ ಸ್ವಾತಂತ್ರ್ಯ ಸಂಗ್ರಾಮವಾಗಿತ್ತೆ ನಿಮ್ಮ ಉತ್ತರದ ಪರವಾಗಿ ನೀವು ವಾದಗಳನ್ನು ಉಲ್ಲೇಖಿಸುವುದು ಅವಶ್ಯ.

ಭಾರತೀಯ ರಾಷ್ಟ್ರೀಯತಾ ವಾದಿಗಳು ಭಾರತ ಇತಿಹಾಸ, ನಾಗರೀಕತೆ, ಸಂಸ್ಕೃತಿ ಮತ್ತು ಪರಂಪರೆಗಳನ್ನು ವ್ಯಾಖ್ಯಾನಿಸದ ರೀತಿ ಕುರಿತು ಪ್ರತಿಕ್ರಯಿಸಿದರು. ಅವರು ಭಾರತದ ಆರ್ಥಿಕ ಆಸಕ್ತಿಗಳು, ರಾಜಕೀಯ ಪಕ್ವತೆ ಮತ್ತು ಜನರ ಅಶೋತ್ತರಗಳ ಬಗ್ಗೆ ವಿಭಿನ್ನ ದೃಷ್ಟಿಕೋನಗಳನ್ನು ಹೊಂದಿದ್ದರು. ಭಾರತೀಯರ ಕಣ್ಣಿನಿಂದ ನೋಡಿದ ಭಾರತ ರಾಷ್ಟ್ರೀಯ ಇತಿಹಾಸವನ್ನು ಬರೆಯುವ ಅವಶ್ಯಕತೆಯನ್ನು ಒತ್ತಿ ಹೇಳಿದವರಲ್ಲಿ ಸ್ವಾಮಿ ವಿವೇಕನಾಂದರು ಮೊದಲಿಗರಲ್ಲೊಬ್ಬರು ಅವರ ಮಾತಿನಲ್ಲಿ “ಇಂಗ್ಲೀಷ್ ಲೇಖಕರು ಬರೆದ ನಮ್ಮ ದೇಶದ ಇತಿಹಾಸವು ನಮ್ಮ ಮನಸ್ಸನ್ನು ದುರ್ಬಲಗೊಳಿಸಲಾದರೆ ಇರದು, ಏಕೆಂದರೆ ಅವರು ನಮ್ಮ ಅಧಃಪತನವನ್ನು ಮಾತ್ರ ಹೇಳುತ್ತಾರೆ. ನಮ್ಮ ನಡವಳಿಕೆಗಳು ಮತ್ತು ರೂಡಿಗಳು, ಅಥವಾ ನಮ್ಮ ಧರ್ಮ ಮತ್ತು ದರ್ಶನ (ಜೀವನ ದೃಷ್ಟಿ)ಗಳನ್ನು ಅತ್ಯಲ್ಪವಾಗಿ ತಿಳಿದಿರುವ ವಿದೇಶೀಯರು ಯಥಾರ್ಥವಾದ, ಪಕ್ಷಪಾತ ರಹಿತ ಭಾರತ ಇತಿಹಾಸವನ್ನು ಬರೆಯಲು ಸಾಧ್ಯ ?....... ಭಾರತೀಯರು ಭಾರತದ ಇತಿಹಾಸವನ್ನೇ ಬರೆದ ಬ್ರಿಟಿಷ್ ಲೇಖಕರು ಭಾರತದ ಮೇಲೆ ವಿದೇಶಿಯರು ದಾಳಿ, ಜಾತಿ ಪದ್ದಥಿ, ಅಸ್ಪೃಷ್ಯತೆಯ ರೂಢಿ (ಆಚರಣೆ) ಬೌದ್ಧಿಕ ಚಿಂತನೆಗಳಲ್ಲಿ ಸಂಭಾವಿತರ (ಶ್ರೇಷ್ಠತೆ) ಕ್ರಮಗಳು ಮತ್ತು ಸಂಸ್ಕೃತದ ಬಳಕೆ ಮುಂತಾದ ಸಾಮಾಜಿಕ ಪದ್ಧತಿಯಲ್ಲಿದ್ದ ಋನಾತ್ಮಕ ಅಂಶಗಳನ್ನು ಎತ್ತಿ ತೋರಿಸುತ್ತಿದ್ದರು ಎಂಬುದಾಗಿ ಭಾರತೀಯರು ವಿದೇಶಿ ದಾಳಿಗಳನ್ನೇ ಹೇಗೆ ವಿರೋಧಿಸಿದರು, ನಿರಂತರ ದಾಳಿಗಳ ಮುಂದೆ ಹೇಗೆ ಪುಟಿದೇಳುತ್ತಿದ್ದರು, ಹಲವಾರು ಸಹಸ್ರಮಾನಗಳ ಕಾಲ, ಕಾಲದ ಪರೀಕ್ಷೆಗಳನ್ನು ತಾಳಿಕೊಂಡ ನಮ್ಮ ಸಾಮಾಜಿಕ ವ್ಯವಸ್ಥೆಯ ಶಕ್ತಿ ಮತ್ತು ಹುರುಪು, ಹಾಗೂ ಸಂಪೂರ್ಣ ಉಪಖಂಡದಲ್ಲಿ ಕೋಟ್ಯಾಂತರ ಜನರು ಸಾವಿರಾರು ವರ್ಷಗಳ ಕಾಲ ಅತ್ಯಂತ ಪುರಾತನ ಹಾಗೂ ಅತ್ಯುತ್ತಮ ಭಾಷೆಯಾಗಿ ಸಂಸ್ಕೃತವು ಕಾರ್ಯಮಾಡಿತು ಎಂಬ ಅಂಶಗಳನ್ನು ವಿವರಿಸಲು ಮರೆತರು. ರಾಷ್ಟ್ರೀಯತೆಯ ಮೌಲ್ಯಗಳು ಮತ್ತು ಪರಂಪರೆಗಳನ್ನು ಸೆರೆಹಿಡಿಯಬಲ್ಲ ಉದ್ದೇಶವುಳ್ಳ ರಾಷ್ಟ್ರೀಯ ಇತಿಹಾಸವನ್ನು ಬರೆಯಲು ಇಚ್ಛಿಸಿದವರು ಬಂಕಿಮ ಚಂದ್ರ ಚಟರ್ಜಿಯವರು ಸಾಂಸ್ಕೃತಿಕ ಮತ್ತು ದಾರ್ಮಿಕ ಪುನರುಜ್ಜೀವನವನ್ನು ಬಲವಾಗಿ ಬೆಂಲಿಸಿದರು ಅವರ “ವಂದೇ ಮಾತರಂ” ಭಾರತದ ರಾಷ್ಟ್ರೀಯತಾ ವಾದಕ್ಕೆ ಒಂದು ಸಂಘಟನಾ ಬಿಂದುವಿನಂತಾಯಿತು.

ಅನೇಕ ರಾಷ್ಟ್ರೀಯತಾವಾದಿ ನಾಯಕರು ಸಾಮಾಜಿಕ ಅಭಿವೃದ್ಧಿಯ ಪರ್ಯಾಯ ಮಾದರಿಗಳನ್ನು ಪ್ರಸ್ತಾಪಿಸುತ್ತಿದ್ದರು ಗೋಖಲೆಯವರು ದೇಸದಲ್ಲಿ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣದ ಬೇಡಿಕೆ ಇಟ್ಟರು. ಬರೋಡಾದ ಮಹಾರಾಜ

ಸಯ್ಯಾಜಿರಾವ್ ಗಾಯಕ್‌ವಾಡ್ ಅವರು ತಮ್ಮ ರಾಜ್ಯದಲ್ಲಿ ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಜಾರಿಗೊಳಿಸದರು. ಮಹಾತ್ಮ ಗಾಂಧಿಯವರು ಭಾರತಕ್ಕಾಗಿ ಮೂಲ ಶಿಕ್ಷ ಎಂಬ ವಿಸ್ತಾರವಾದ ಶಿಕ್ಷಣ ಯೋಜನೆಯನ್ನು ರೂಪಿಸದರು, ಇತರ ರಾಷ್ಟ್ರೀಯತವಾದದ ನಾಯಕರು ವಿದ್ಯಾರ್ಥಿಗಳು ತಮ್ಮ ಅಧರಷ್ಟವನ್ನು ತಾವೇ ವಿನ್ಯಾಸಗೊಳಿಸಿಕೊಳ್ಳುವಂತೆ ಹೆಮ್ಮೆ ಮತ್ತು ಆತ್ಮವಿಶ್ವಾಸ ಬೆಳೆಸುವಂತಹ, ಹಾಗೂ ತಮ್ಮ ವಸಾಹತು ಶಾಹಿ ಪ್ರಭುಗಳು ಹೇಗೆ ಜೀವನ ನಡೆಸಬೇಕೆಂದು ಕಲಿಸುವ ಎದುರು ನೋಡದೆ ಇರುವಂತಹ ಶಿಕ್ಷಣ ಒದಗಿಸಬಲ್ಲ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುತ್ತಿದ್ದರು. ಇದರ ಹಿಂದಿದ್ದ ಪ್ರೇರಕ ಶಕ್ತಿ ಸ್ಪಷ್ಟವಾಗಿದ್ದಿತ್ತು– ಗುಮಾಸ್ತರನ್ನು ತಯಾರು ಮಾಡುವ ಇಂಗ್ಲೀಷ್ ಶಿಕ್ಷಣದಿಂದ ದೂರ ಸರಿದು, ಭಾರತೀಯ ಮಕ್ಕಳನ್ನು ದೈಹಿಕವಾಗಿ, ಮಾನಸಿಕವಾಗಿ ಮತ್ತು ಆಧ್ಯಾತ್ಮಿಕವಾಗಿ ಸದೃಡರಾಗುವಂತೆ ಮಾಡುವ ಅರೋಗ್ಯಕರ ಪ್ರಜ್ಞೆಗಳನ್ನೇ ರೂಪಿಸುವ ಶಿಕ್ಷಣ ವ್ಯವಸ್ಥೆಯ ಕಡೆಗೆ ಸಾಗುವುದೇ ಆಗಿತ್ತು. ಸ್ವಾಮಿ ದಯಾನಂದರ ದಯಾನಂದ್ ಆಂಗ್ಲೋ ವೇದಿಕ್ (ಡಿ.ಎ.ವಿ) ಚಳುವಳಿಯು ಸಾಮಾಜಿಕ, ದಾರ್ಮಿಕ ಮತ್ತು ಶೈಕ್ಷಣಿಕ ಸುಧಾರಣೆಗಳ ಮತ್ತೊಂದು ಪರ್ಯಾಯವಾಗಿತ್ತು. ಆರ್ಯ ಸಮಾಜ ಮತ್ತು ಬ್ರಹ್ಮ ಸಮಾಜ ಚಳುವಳಿಗಳು ಸಹ ಭಾರತದಲ್ಲಿ ಸಾಮಾಜಿಕ–ಧಾರ್ಮಿಕ ಸುಧಾರಣೆಗಳಿಗೆ ಯತ್ನಿಸುತ್ತಿದ್ದವು. ಜೊತೆಗೆ ಹಲವು ವ್ಯಕ್ತಿಗಳೂ ಕೂಡಾ ಭಾರತೀಯ ರಾಷ್ಟ್ರೀಯತೆ ಕೇಂದ್ರಿತವಾಗಿದ್ದ ಪರ್ಯಾಯ ಶಿಕ್ಷಣ ಒದಗಿಸುವ ಯತ್ನ ನಡೆಸುತ್ತಿದ್ದರು.

ಮಹಾತ್ಮ ಗಾಂಧಿಯವರು ಭಾರತಕ್ಕಾಗಿ ಒಂದು ನವೀನ ಮಾದರಿಯ ಸಾಮಾಜಿಕ ಮತ್ತು ಆರ್ಥಿಕ ವಿಕಾಸದ ಮಾದರಿಯನ್ನು ಪ್ರಸ್ತಾಪಿಸದರು. ಅವರ ಸ್ಥಳವೂ ಇರಲಿಲ್ಲ. ಸ್ವಾತಂತ್ರ್ಯದ ಅವರ ಪರಿಕಲ್ಪನೆಯು ಅರ್ಥಿಕ ಮತ್ತು ಸಾಮಾಜಿಕ ಸ್ವಾತಂತ್ರ್ಯವನ್ನೂ ಒಳಗೊಂಡಿತ್ತು. ಭಾರತದ ಗ್ರಾಮಗಳನ್ನು ಸ್ವಾವಲಂಬಿ ಘಟಕಗಳನ್ನಾಗಿ ಮಾಡಿ, ಯಾವ ರೀತಿಯ ಶೋಷಣೆಯೂ ಇಲ್ಲದೇ ಎಲ್ಲರೂ ಘನತೆಯಿಂದ ಜೀವಿಸುವಂತೆ ಮಾಡಲು ಗ್ರಾಮಗಳನ್ನು ಪರಿವರ್ತಿಸುವುದೇ ಅವರ ಚಿಂತನೆಯಾಗಿತ್ತು. ರಾಷ್ಟ್ರೀಯತಾವಾದದ ಸ್ವಾಂತಂತ್ರಯದ ಚಳುವಳಿಯು ಸಾಮೂಹಿಕ ಚಳುವಳಿಗಳಾದಾಗ ರಾಜಕೀಯ ಅಧಿಕಾರ ಮತ್ತು ಪೂರ್ಣ ಸ್ವಾತಂತ್ರ್ಯ ಜೊತೆಗೆ ರಾಷ್ಟ್ರೀಯತಾ ವಾದಿಗಳ ಸಾಮಾಜಿಕ ಹಾಗೂ ಆರ್ಥಿಕ ದೃಷ್ಟಿಕೋನ/ವಿಚಾರಗಳೂ ಪ್ರಬಲ ಪರ್ಯಾಯಗಳಾದವು. ರಾಷ್ಟ್ರೀಯತೆಯ ಭಾವನೆಗಳು ಮತ್ತು ಪರ್ಯಾಯಗಳು ಸಮಾಜ ವಿಜ್ಞಾನ ಪಠ್ಯಕ್ರಮದ ಮೇಲೆ ಮಹತ್ವದ ಪ್ರಭಾವ ಬೀರಿದವು.

**ಚಟುವಟಿಕೆ–1**

1. ಭಾರತದ ಜನತೆಯಲ್ಲಿ ನೀವು ಗಮನಿಸಿರುವ ಕೆಲವು ವೈವಿಧ್ಯತೆಗಳನ್ನು ಪಟ್ಟಿಮಾಡಿ.
2. ಭಾರತೀಯರಲ್ಲಿರುವ ಇಂತಹ ವೈವಿಧ್ಯತೆಯಿಂದ ಎದುರಾಗುವ ಸವಾಲುಗಳು ಏನೆಂದು ನೀವು ಭಾವಿಸುವಿರಿ ? ಮತ್ತು ಅವಕಾಶಗಳು ಯಾವುವು ?
3. ನಿಮ್ಮ ಪಂಚಾಯಿತಿ, ಬ್ಲಾಕ್ ಅಥವಾ ತಾಲ್ಲೂಕಿನ ಇತ್ತೀಚಿನ ಜನಗಣತಿ ದತ್ತಂಶಗಳನ್ನು ಪಡೆಯಿರಿ. ನಿಮ್ಮ ಪ್ರದೇಶದಲ್ಲಿ ವಾಸಿಸುತ್ತಿರುವ ಜನರ ಸಂಖ್ಯೆ, ಜನ ಸಂಖ್ಯೆಯ ಬೆಳವಣಿಗೆಯ ಪ್ರಮಾಣಗಳನ್ನು ತಿಳಿಯಿರಿ, ಜೊತೆಗೆ ಜನರು ಯಾವ ಸಮುದಾಯಗಳು ಮತ್ತು ಧರ್ಮಗಳಿಗೆ ಸೇರಿದ್ದಾರೆ, ಅವರ ಸಾಕ್ಷರತಾ ಪ್ರಮಾಣ, ಲಿಂಗಾನುಪಾತ ಇತ್ಯಾದಿ. ಈ ಚಟುವಟಿಕೆಯ ನಂತರ ನಿಮ್ಮ ಪ್ರದೇಶದ ಜನರ ಲಕ್ಷಣಗಳಿ/ವಿಶ್ಲೇಷಣೆಯನ್ನು ಬರೆಯಿರಿ.

**ನಿಮ್ಮ ಪ್ರಗತಿ ಪರಿಶೀಲಿಸಿ–1**

1. ಭಾರತದ ಇತಿಹಾಸವನ್ನು ಬರೆದ ಮೊದಲ ವ್ಯಕ್ತಿಯಾರು?

   ________________________________________
   
   ________________________________________
   
   ________________________________________

2. ಅಶೋಕನ ಶಿಲಾ ಶಾಸನವನ್ನು ಬಿಡಿಸಿ ಓದಿನ ಮೊದಲ ವ್ಯಕ್ತಿಯಾರು?

   ________________________________________
   
   ________________________________________

3. ಭಾರತಿಯ ಸರ್ವೇಕ್ಷಣ ಸಂಸ್ಥೆಯನ್ನು ಸ್ಥಾಪಿಸಿದ ಉದ್ದೇಸವೇನು?

4. ಮೊಟ್ಟಮೊದಲಿಗೆ ತನ್ನ ರಾಜ್ಯದಲ್ಲಿ ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಜಾರಿಗೊಳಿಸಿದ ಭಾರತೀಯ ರಾಜ ಯಾರು?

### 2.2.2. ಸ್ವಾತಂತ್ರ್ಯನಂತರದ ಸಮಾಜ ವಿಜ್ಞಾನ ಪಠ್ಯಕ್ರಮದ ವಿಕಾಸ

ಸ್ವಾತಂತ್ರ್ಯ ತನ್ನೊಂದಿಗೆ ಜವಬ್ದಾರಿಯನ್ನೂ ತಂದಿತು ನಮ್ಮ ವ್ಯವಹಾರಗಳನ್ನು ನಾವೇ ನಿರ್ವಹಿಸಿಕೊಳ್ಳುವ, ಸ್ವಯಂ ಆಡಳಿತದ ಹೊಸ ಪ್ರಜಾಪ್ರಭುತ್ವಕ್ಕೆ ಅಗತ್ಯ ಜ್ಞಾನ ಮತ್ತು ಕೌಶಲ್ಯ ಆಧಾರವನ್ನು ಸೃಷ್ಟಿಸುವ, ಮತ್ತು ನಮ್ಮದೇ ಆದ ಶೈಕ್ಷಣಿಕ ವ್ಯವಸ್ಥೆಯನ್ನು ವಿನ್ಯಾಸಗೊಳಿಸಿಕೊಳ್ಳುವ ಜವಬ್ದಾರಿ ದೀರ್ಘಕಾಲದ ಹೋರಾಟದ ನಂತರ ಭಾರತವು ಸ್ವಾತಂತ್ರ್ಯಗಳಿಸಿತು. ಆಭರತದ ಸ್ವಾತಂತ್ರ್ಯ ಹೋರಾಟವನ್ನು ಮಾರ್ಗದರ್ಶಿಸಿದ ಭಾರತದ ಸಂವಿಧಾನದಲ್ಲಿ ಅಭಿವ್ಯಕ್ತಿ ಪಡೆದುವು. ನ್ಯಾಯಾಯುತ ಮತ್ತು ಸ್ವಾತಂತ್ರ್ಯ, ಸಮಾನತೆ, ನ್ಯಾಯ ಮತ್ತು ಬ್ರಾತೃತ್ವದ ಮೌಲ್ಯಗಳು ಭಾರತದಲ್ಲಿ ದೀರ್ಘಕಾಲದಿಂದ ಅಸ್ತಿತ್ವದಲ್ಲಿನ ಪ್ರಬಲ್ಯ ಮತ್ತು ಅಧೀನತೆಯ ಕಾರ್ಯಕ್ಷೇತ್ರದ ಸಂಬಂಧಗಳು, ಜಾತಿ ಮತ್ತು ಲಿಂಗತ್ವ ಗ್ರಹಿಕೆಗಳು ಹಾಗೂ ವಸಾಹತು ಶಾಹಿ ಅನುಭವಗಳು ಮುಂತಾದುವುಗಳೊಂದಿಗೆ ನೇರ ಘರ್ಷಣೆಗೆ ಕಾರಣವಾದುವು. ಭಾರತದ ಸ್ವಾತಂತ್ರ್ಯವು ಅತ್ಯಂತ ನೋವಿನ ಸಂಗತಿಯಾದ ವಿಭಜನೆಯೊಂದಿಗೆ ಬಂದಿದ್ದು, ಸಾವಿರಾರು ಮಂದಿ ಕೊಲ್ಲಲ್ಪಟ್ಟು ಹಲವು ಹಿಂಸಾತ್ಮಕ ದಂಗೆಗಳೂ ಕಂಡುಬಂದವು ಇದು ಈಗಾಗಲೇ ಸೂಕ್ಷ್ಮವಾಗಿದ್ದ ಕೋಮು ಸಂಬಂಧಗಳ ಮೇಲೆ ದೀರ್ಘವಾದ ಗಾಯದ ಗುರುತುಗಳನ್ನ ಬಿಟ್ಟುಹೋಗಿದೆ. ಈ ಶಕ್ತಿಗಳ ಹಿನ್ನೆಲೆಯಲ್ಲಿ, ಭಾರತವು ತಮ್ಮ ಮಕ್ಕಳಿಗೆ ದೇಶದ ಪ್ರಜಾಸತ್ತಾತ್ಮಕ ಕಾರ್ಯನಿರ್ವಹಣೆಯಲ್ಲಿ ಭಾಗವಹಿಸಲು ಅಗತ್ಯ ಕೌಶಲಗಳನ್ನು ಬೆಳೆಸುವ ನಾಯಕತ್ವದ ಗುಣಗಳನ್ನು ಬೆಳೆಸುವ ಹಾಗೂ ಹೊಸ ಸಾಮಾಜಿಕ ವ್ಯವಸ್ಥೆಯ ಮೌಲ್ಯಗಳನ್ನು ನೆಲೆಗೊಳಿಸುವ (ಬೇರೂರಿಸುವ) ಸಂಕಲ್ಪ ಮಾಡಿದೆ.

ಸ್ವಾತಂತ್ರ್ಯ ದೊರೆತ ನಂತರ ನೇಮಿಸಲಾದ ವಿಶ್ವವಿದ್ಯಾಲಯ ಶಿಕ್ಷಣ ಅಯೋಗವು (1948–49) ಎಲ್ಲಾ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸಂಸ್ಥೆಗಳ ಮೇಲೆ ಪ್ರಭಾವ ಬೀರುವ ಸಾಮಾಜಿಕ ದರ್ಶನ (ತತ್ವ) ವನ್ನು ವಿದ್ಯಾರ್ಥಿಗಳಿಗೆ ಪರಿಚಯಿಸುವಂತಹ ಶಿಕ್ಷಣವನ್ನು ಶಿಫಾರಸ್ಸು ಮಾಡಿತು. ಆಯೋಗವು ಪ್ರಜಾಪ್ರಭುತ್ವಕ್ಕಾಗಿ ತರಬೇತಿ, ನಮ್ಮ ಸಾಂಸ್ಕೃತಿಕ ಪರಂಪರೆಯನ್ನು ವಿದ್ಯಾರ್ಥಿಗಳಿಗೆ ಪರಿಚಯಿಸುವುದು. ಹಾಗೂ ಭೂತು ಹಾಗೂ ವರ್ತಮಾನಗಳ ಗ್ರಹಿಕೆಯನ್ನು ಬೆಳೆಸಬೇಕು ಎಂದೂ ಶಿಫಾರಸ್ಸು ಮಾಡಿತು. ಭಾರತದ ಶಿಕ್ಷಣ ಆಯೋಗ (1964–66)ವು ಶೈಕ್ಷಣಿಕ ಜೀವನಕ್ಕೆ ಸಂಬಂಧಿಸಲು ಅಗತ್ಯವಾದ ಆಮತರಿಕ ಪರಿವರ್ತನೆ ಅಗತ್ಯವೆಂದು ಭಾವಿಸಿತು. ಅದು ಸಾಮಾಜಿಕ ಮತ್ತು ರಾಷ್ಟ್ರೀಯ ಭಾವೈಕ್ಯತೆಯನ್ನು ಬಲಪಡಿಸುವುದು ಹಾಗೂ ಸಾಮಾಜಿಕ, ನೈತಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳನ್ನು ಪೋಷಿಸುವ ಗುರಿ ಹೊಂದಿದ ಶಿಕ್ಷಣವನ್ನು ಶಿಫಾರಸ್ಸು ಮಾಡಿತು.

ಭಾರತವು 1986 ರಲ್ಲಿ ಒಂದು ಸಮಗ್ರ ರಾಷ್ಟ್ರೀಯ ಶಿಕ್ಷಣ ನೀತಿ (ಎನ್.ಪಿ.ಇ–1986) ಯನ್ನು ರೂಪಿಸಿತು. ಈ ನೀತಿಯು ಶಿಕ್ಷಣ ಬಗ್ಗೆ ದೇಶದ ಮಹಾತ್ವಾ ಕಾಂಕ್ಷೆಗಳು ಮತ್ತು ಮೌಲ್ಯಗಳನ್ನು ಬಿಂಬಿಸುತ್ತದೆ ಈ ನೀತಿಯು ಹೇಳಿರುವಂತೆ, “ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಯು ಒಂದು ಸಾಮಾನ್ಯ ಕೇಂದ್ರ ವಸ ುವನ್ನು ಹಾಗೂ ನಮ್ಯತೆಯುಳ್ಳ ಇತರ ಘಟಕಾಂಶಗಳನ್ನು ಒಳಗೊಂಡಿರುವ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟನ್ನು ಆಧರಿಸುತ್ತದೆ.

ಭಾರತವು 1986 ರಲ್ಲಿ ಒಂದು ಸಮಗ್ರ ರಾಷ್ಟ್ರೀಯ ಶಿಕ್ಷಣ ನೀತಿ (ಎನ್.ಪಿ.ಇ–1986) ಯನ್ನು ರೂಪಿಸಿತು. ಈ ನೀತಿಯ ಶಿಕ್ಷಣ ಬಗ್ಗೆ ದೇಶದ ಮಹತ್ವಾಕಾಂಕ್ಷೆಗಳು ಮತ್ತು ಮೌಲ್ಯಗಳನ್ನು ಬಿಂಬಿಸುತ್ತದೆ. ಈ ನೀತಿಯು ಹೇಳಿರುವಂತಹ, "ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಯು ಒಂದು ಸಾಮಾನ್ಯ ಕೇಂದ್ರ ವಸ್ತುವನ್ನು ಹಾಗೂ ನಮ್ಯತೆಯುಳ್ಳ ಇತರ ಘಟಕಾಂಶಗಳನ್ನು ಒಳಗೊಂಡಿರುವ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟನ್ನು ಆದರಿಸಿರುತ್ತದೆ. ಸಾಮಾನ್ಯ ಕೇಂದ್ರ ವಸ್ತುವು ಭಾರತದ ಸ್ವಾತಂತ್ರ್ಯ ಹೋರಾಟದ ಇತಿಹಾಸ, ಸಾಂವಿಧಾನಿಕ ಕರ್ತವ್ಯಗಳು (ಬದ್ಧತೆಗಳು) ಮತ್ತಿತರ, ರಾಷ್ಟ್ರೀಯ ಗುರುತನ್ನು ಪೋಷಿಸುವುದು ಅತ್ಯವಶ್ಯ ವಿಷಯವಸ್ತುಗಳನ್ನು ಒಳಗೊಂಡಿರುತ್ತದೆ. ಈ ಅಂಶಗಳು ಎಲ್ಲಾ ವಿಷಯ ಕ್ಷೇತ್ರಗಳಲ್ಲಿ ಹಾಸು ಹೊಕ್ಕಾಗಿದ್ದ ಭಾರತದ ಸಾಮಾನ್ಯ ಸಾಂಸ್ಕೃತಿಕ ಪರಂಪರೆ, ಸಮಾನತೆಯ ತತ್ವ, ಪ್ರಜಾಪ್ರಭುತ್ವ ಮತ್ತು ಜಾತ್ಯಾತೀತತೆ, ಲಿಂಗ ಸಮಾನತೆ, ಪರಿಸರ ಸಂರಕ್ಷಣೆ, ಸಾಮಾಜಿಕ ಅಡೆತಡೆಗಳ ನಿರ್ಮೂಲನ ಚಿಕ್ಕ ಕುಟುಂಬದ ನೀತಿಯನ್ನು ಅನುಸರಣೆ ಮತ್ತು ವೈಜ್ಞಾನಿಕ ಪ್ರವೃತ್ತಿಯನ್ನು ನೆಲೆಗೊಳಿಸುವ ಮೌಲ್ಯಗಳನ್ನು ಪ್ರೋತ್ಸಾಹಿಸುವಂತೆ ವಿನ್ಯಾಸಗೊಳಿಸಲಾಗುತ್ತದೆ. ಎಲ್ಲಿ ಶೈಕ್ಷಣಿಕ ಕಾರ್ಯಕ್ರಮಗಳೂ ಜಾತ್ಯಾತೀತ ಮೌಲ್ಯಗಳಿಗೆ ಅನುರೂಪವಾಗಿರುವಂತೆ ನಡೆಸಲ್ಪಡುತ್ತವೆ. "ಸಮಾಜ ವಿಜ್ಞಾನ ಪಠ್ಯಕ್ರಮವು ಯಾವ ದಿಕ್ಕಿನಲ್ಲಿ ಸಾಗಬೇಕೆಂಬ ಅಪೇಕ್ಷೆಗಳನ್ನು ಈ ಕೇಂದ್ರವಸ್ತು ಮೌಲ್ಯಗಳು ತೀರ್ಮಾನಿಸುತ್ತದೆ.

ಸ್ವತಂತ್ರ್ಯ ಭಾರತದಲ್ಲಿ ಸಮಾಜ ವಿಜ್ಞಾನ ಪಠ್ಯಕ್ರಮ ಯೋಜಿಸುವ ವ್ಯಕ್ತಿಗಳ ಗಮನ ಸೆಳೆದ ವಿಚಾರಗಳು ಹಲವಾರು ಸಂಖ್ಯೆಯದಾಗಿವೆ. ಒಂದು ಸ್ವತಂತ್ರ ದೇಶವಾಗಿ ಭಾರತವು ಬಹು ಸಮಖ್ಯೆಯ ಸಮಸ್ಯೆಗಳನ್ನು ಎದುರಿಸಿತು. ಬಡತನ, ಅನರಕ್ಷತೆ, ಹಿಂದುಳಿಯುವಿಕೆ, ಸಾಮಾಜಿಕ ನತ್ತು ಕೋಮು ಸಂಬಂದಿತ, ವಿಭಜನೆಗಳನ್ನು ನಿಭಾಯಿಸುವುದು ರಾಷ್ಟ್ರೀಯ ಆದ್ಯತೆಯಾಯಿತು. ಹೆಚ್ಚು ಆಹಾರ ಬೆಳೆಯುವುದು ಅನರಕ್ಷತೆ ನಿರ್ಮೂಲನ, ಸ್ಫೋಟಗೊಳ್ಳುತ್ತಿದ್ದ ಜನಸಂಖ್ಯೆಯ ನಿಯಂತ್ರಣ ಮತ್ತು ಹೆಚ್ಚುತ್ತಿರುವ ಬಾಹ್ಯ ಹಾಗೂ ಆಂತರಿಕ ಒಡಕುಂಟು ಮಾಡುವ ಶಕ್ತಿಗಳ ಮುಂದೆ ರಾಷ್ಟ್ರದ ಏಕತೆಯನ್ನು ಕಾಪಾಡುವುದಕ್ಕೆ ನಮ್ಮ ಪ್ರಜಾಪ್ರಭುತ್ವ ಹಾಗೂ ಸಂವಿಧಾನದ ಧ್ಯೇಯಗಳನ್ನು ಎತ್ತಿ ಹಿಡಿದು ಪೋಷಿಸವುದಕ್ಕೆ ಎಷ್ಟು ಗಮನ ಹರಿಸಬೇಕೋ ಅಷ್ಟೇ ಗಮನ ಹರಿಸಬೇಕಾಗಿತ್ತು. ಆದ್ದರಿಂದ ಈ ಎಲ್ಲಾ ವಿಚಾರಗಳು, ಸಮಾಜ ವಿಜ್ಞಾನ ಪಠ್ಯಕ್ರಮದೊಳಗೆ ಅಳವಡಿಸಲ್ಪಟ್ಟವು. ಹಾಗೂ ವಿದ್ಯಾರ್ಥಿಗಳು ತಾವು ಜೀವಿಸುತ್ತಿದ್ದ ಸಮಾಜದ ಕಾಳಜಿಗಳ ಬಗ್ಗೆ ಸೂಕ್ಷ್ಮತೆ ಮೂಡಿಸಲಾಯಿತು.

### 2.2.3. ರಾಷ್ಟ್ರೀಯ ಬಾವೈಕ್ಯತೆ ಮತ್ತು ಅಂತರಾಷ್ಟ್ರೀಯ ತಿಳುವಳಿಕೆ

ಭಾರತದ ಶ್ರೀಮಂತಿಕೆಯು ಅದರ ಬಹುತ್ವದಲ್ಲಿ ಅಡಗಿದೆ. ಆದರೆ, ಬಹುತ್ವದ ತನ್ನೊಂದಿಗೆ, ವಿವಿಧ ಬಾಷೆಗಳನ್ನು ಮಾತನಾಡುವ ವಿಭಿನ್ನ ಉಡುಪು ಧರಿಸುವ, ವಿವಿಧ ಸ್ಥಳಗಳಲ್ಲಿ ಪೂಜಿಸುವ ವಿವಿಧ ರೀತಿಗಳಲ್ಲಿ, ವಿವಿಧ ಸಿದ್ದಾಂತಗಳನ್ನು ಒಪ್ಪುವ ವಿವಿಧ ಸಮುದಾಯಗಳಿಗೆ ಸೇರಿರುವ, ವಿಭಿನ್ನ ಆಸಕ್ತಿಗಳಿರುವ ಹಾಗೂ ಅಪಾರ ವ್ಯತ್ಯಾಸವುಳ್ಳ ಪ್ರಮಾಣದ ಆದಾಯಗಳಿರುವ ಹಾಗೂ ವೈವಿದ್ಯತೆಯುಳ್ಳ ಪ್ರಮಾಣದ ಆದಾಯಗಳಿರುವ–ಮಹಾನ್ ಐಕ್ಯತೆಯನ್ನು ಸಾಧಿಸುವ–ಬೃಹತ್ ಸವಾಲನ್ನು ಒಡ್ಡಿದೆ ಭಾರತೀಯರಲ್ಲಿ ಏಕತೆಯ ಭಾವನೆಯನ್ನು ಪೋಷಿಸುವುದು ದೇಶದ, ಆದುದರಿಂದ ಶಿಕ್ಷಣದ ಪ್ರಮುಖ ಉದ್ದೇಶಗಳಲ್ಲೊಂದಾಗಿದೆ.

ರಾಷ್ಟ್ರೀಯ ಏಕತೆ ಮತ್ತು ಭಾವನಾತ್ಮಕ ಐಕ್ಯತೆಗೆ ಸಂಬಂಧಿಸಿದ ಇತಿಹಾವು ಭಾರತಕ್ಕೆ ಸಾಕಷ್ಟು ಪಾಠಗಳನ್ನು ಕಲಿಸಿದೆ. ಐಕ್ಯತೆ ಇಲ್ಲದ, ವಿಭಜಿತ ಭಾರತವನ್ನು ಸೋಲಿಸುವುದು ವಿದೇಶೀ ಶಕ್ತಿಗಳಿಗೆ ಯಾವಗಲೂ ಸುಲಭವಾಗಿದೆ. ಭಾರತದ ಶಿಕ್ಷಣ ಆಯೋಗ (1964–66)ವು ಸಾಮಾಜಿಕ ಮತ್ತು ರಾಷ್ಟ್ರೀಯ ಭಾವೈಕ್ಯತೆಯನ್ನು ಬಲಪಡಿಸುವುದು ಶಿಕ್ಷಣದ ಪ್ರಮುಖ ಗುರಿಗಳಲ್ಲೊಂದೆಂದು ಪರಿಗಣಿಸಿದೆ.

ಸಾಮಾಜಿಕ ಮತ್ತು ಭಾವನಾತ್ಮಕ ಭಾವೈಕ್ಯತೆಗಳನ್ನು ಬಲಪಡಿಸುವುದು ಸಹ ಭಾರತೀಯರ ನಡುವೆ ಭಾವನಾತ್ಮಕ ಐಕ್ಯತೆಯನ್ನು ಬಲಪಡಿಸುವುದ ಅಷ್ಟೇ ಮುಖ್ಯವಾಗಿದೆ. ಆನರು ತಮ್ಮ ಸಮುದಾಯ, ಸಿದ್ದಂತ ಅಥವಾ ಆದಾಯಗಳನ್ನು ಹೊರತುಪಡಿಸಿಯೂ ದೇಸದಲ್ಲಿ ತಮಗೆ ತಮ್ಮ ಮಾತುಗಳಿಗೆ ಮೌಲ್ಯವಿದೆ. ದನಿ ಕೇಳಿಸಿಕೊಳ್ಳಲಾಗುತ್ತದೆ. ಎಂಬ ಭಾವನೆ ಮೂಡಿದಾಗ ಮಾತ್ರವೇ ತಾವೆಲ್ಲಾ ಒಂದೇ, ಒಂದು ದೇಶಕ್ಕೆ ಸೇರಿದವರು ಎಂಬ ಭಾವನೆ ಮೂಡಲು ಸಾಧ್ಯ ರಾಷ್ಟ್ರದ ವಿಚಾರ, ವ್ಯವಹಾರಗಳಲ್ಲಿ ಭಾಗವಹಿಸುವ ಭಾವನೆಯು ಜನತೆಯನ್ನು ಪರಿಧಿಯಿಂಧ ಕೇಂದ್ರ ದತ್ತ ತರಬಲ್ಲದು ಸಾಮಾಜಿಕ

ಆರ್ಥಿಕ ಮತ್ತು ವಿಕಾಸಾತ್ಮಕ ಒಳಗೊಳಿಸುವಿಕೆಯು ಏಕತೆಯ, ಒಟ್ಟಾಗಿರುವುಕೆಯ ಭಾವನೆಗೆ ಹೇಗಾದರೂ ಸಂಬಂಧಿಸಿದೆ ಎಂದು ನಿಮಗೆನಿಸುವುದೆ? ನಮ್ಮ ಜನತೆಯಲ್ಲಿನ ಹಿಂದುಳಿದ ಮತ್ತು ದುರ್ಬಲ ವರ್ಗದವರಿಗೆ ಇದು ಮುಖ್ಯ ನಿಹಿತಾರ್ಥ ಹೊಂದಿದೆಯೇ?

ಇಂದು ರಾಷ್ಟ್ರೀಯ ಭಾವೈಕ್ಯತೆಗಿರುವ ಬೆದರಿಕೆಗಳೇನು ? ಜನರಲ್ಲಿ ಏಕತೆಯ ಭಾವನೆಯನ್ನು ದುರ್ಬಲಗೊಳಿಸುವ ಶಕ್ತಿಗಳು ದೇಶದೊಳಗೇ ಇವೆ ಎಂದು ಭಾವಿಸುತ್ತೀರಾ? ವರ್ತಮಾನದಲ್ಲಿ ಅನೇಕ ಪ್ರತ್ಯೇಕತೆಯ ಗುಂಪುಗಳು ದೇಶದ ವಿವಿಧ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಇಮ,ತಹ ದಾರಿತಪ್ಪದ ಗುಂಪುಗಳು ಕೇವಲ ಸ್ವಾರ್ಥದ ಆಸಕ್ತಿಯಿಂದ ಹಿಡಿದು ಕೋಮುದ್ವೇಷ, ವಿದೇಶಿ ಶಕ್ತಿಗಳು ಭಾರತೀಯ ಸಮಾಜದೊಳಗೇ ಇರುವ ಕ್ಯಾನ್ಸರ್ ನಂತೆ, ಆದ್ದರಿಂದ ಇವುಗಳನ್ನು ಪತ್ತೆಮಾಡಿ ನಿಯಂತ್ರಿಸಬೇಕು. ಕೋಮುವಾದ ಜಾತಿವಾದ, ಪ್ರತ್ಯೇಕಿತವಾದ, ಪ್ರಾದೇಶಿಕತಾವಾದ, ಪ್ರಾದೇಶಿಕತೆ, ಆರ್ಥಿಕ ವಿಕಾಸದಲ್ಲಿ ಪ್ರಾದೇಶಿಕ ಅಸಮತೋಲನ, ಆದಾಯ ಅಸಮಾನತೆ, ಶ್ರೀಮಂತ ಹಾಗೂ ಬಡವರ ನಡುವೆ ಹೆಚ್ಚುತ್ತಲ್ಲೇ ಇರುವ ಅಂತರ, ಹಾಗೂ ಪ್ರತ್ಯೇಕಿಸಿ ಹೊರಗುಳಿಸಿರುವ ಭಾವನೆ ಮುಂತಾದುವು ಇಂತಹ ಕೆಲವು ಶಕ್ತಿಗಳಾಗಿರಬಹುದು ನೀವು ಇನ್ನೂ ಕೆಲವನ್ನು ಕಂಡುಕೊಳ್ಳಬಹುದು.

ರಾಷ್ಟ್ರೀಯ ಭಾವೈಕ್ಯತೆಯನ್ನು ಬಳಗೊಳಿಸಲು ಸಮಾಜವಿಜ್ಞಾನ ಏನು ಮಾಡಬಹುದು? ಸಮಾಜ ವಿಜ್ಞಾನವು ರಾಷ್ಟ್ರೀಯ ಎಖತೆ ಮತ್ತು ಮಢಬಹುದು? ಸಮಾಜವಿಜ್ಞಾನವು ರಾಷ್ಟ್ರೀಯ ಏಕತೆ ಮತ್ತು ಭಾವೈಕ್ಯತೆಗಳ ಸ್ಫೂರ್ತಿಯನ್ನು ನೆಲೆಗೊಳಿಸಲು ಅತ್ಯಂತ ಶಕ್ತಿಯುತ (ಬಲವಾದ) ವಿಷಯವೆಂದು ಪರಿಗಣಿಸಲ್ಪಟ್ಟಿದೆ. ರಾಷ್ಟ್ರೀಯ ಏಕತೆಯ ಪ್ರಾಮುಖ್ಯತೆ ಕುರಿತು ವಿದ್ಯಾರ್ಥಿಗಳಲಿ ಅದು ಸೂಕ್ಷ್ಮತೆ ಮೂಡಿಸಬಲ್ಲದು, ಆ ವಿಚಾರ ಕುರಿತು ಐತಿಹಾಸಿಕ ದೃಷ್ಟಿಕೋನವನ್ನು ವಿರಿಸಬಹುದು ಮತ್ತು ರಾಷ್ಟ್ರೀಯ ಅನನ್ಯತೆ ಮತ್ತು ಏಕತೆಗಳ ಮಹತ್ವದ ಚಿಹ್ನೆ (ಸಂಕೇತ)ಗಳ ಬಗ್ಗೆ ಭೋಧಿಸಬಹುದು ರಾಷ್ಟ್ರೀಯ ಶಿಕ್ಷಣ ನೀತಿ (1986) ಯು ರಾಷ್ಟ್ರೀಯ ಅನನ್ಯತೆಯನ್ನು ಪೋಷಿಸಲು ಅತ್ಯವಶ್ಯವಾದ ಭಾರತದ ಸಾಮಾನ್ಯ ಸಾಂಸ್ಕೃತಿಕ ಪರಂಪರೆ, ಭಾರತದ ಸ್ವತಂತ್ರ್ಯ ಹೋರಾಟದ ಇತಿಹಾಸ, ಸಂವಿಧಾನಿಕ ಬದ್ಧತೆಗಳು ಮತ್ತಿತರ ವಿಷಯ ವಸ್ತುವು ಕಲಿಕಾರ್ಥಿಗಳಲ್ಲಿ ಒಂದೆ ದೇಶಕ್ಕೆ ಸೀರಿರುವ ಭಾವನೆಯನ್ನು ಉಂಟುಮಾಡಬಹುದು ಎಂದು ಹೇಳಿದೆ. ರಾಷ್ಟ್ರದ ಇತಿಹಾಸ ಮತ್ತು ರಾಷ್ಟ್ರದ ಭೂಗೋಳವನ್ನು ಬೋಧಿಸುವುದರಿಂದ ದೇಶದ ಸಮಗ್ರ ಗ್ರಹಿಕೆ ಉಂಟಾಗುವುದು. ಸಮಾಜ ವಿಜ್ಞಾನವು ವಿದ್ಯಾರ್ಥಿಗಳಲ್ಲಿ ರಾಷ್ಟ್ರೀಯ ಭಾವೈಕ್ಯತೆಯನ್ನು ಚರ್ಚಿಸುವ ಮತ್ತು ಪ್ರೋತ್ಸಾಹಿಸುವ ಜವಾಬ್ದಾರಿ ಹೊರಬೇಕು. ರಾಷ್ಟ್ರೀಯ ಭಾವೈಕ್ಯತೆಯ ಪರಿಕಲ್ಪನೆಗೆ ಸಂಬಂಧಿಸಿದ ಮತ್ತೊಂದು ಪರಿಕಲ್ಪನೆ ಅಂತರಾಷ್ಟ್ರೀಯ ತಿಳುವಳಿಕೆಯಾಗಿದೆ. ನಾವು ಒಂದು ಜಾಗತೀಕೃತ ಯುಗದಲ್ಲಿ ಜೀವಿಸುತ್ತಿದ್ದೇವೆ. ರಾಷ್ಟ್ರಗಳು ಮತ್ತು ದೇಶಗಳು ಪ್ರತ್ಯೇಕವಾಗಿ, ಒಂಟಿಯಾಗಿ ಬಾಳಲಾರವು. ಮಾನವ ಜನಾಂಗವು ಎದುರಿಸುತ್ತಿರುವ ಪ್ರಮುಖ ಸಮಸ್ಯೆಗಳಲ್ಲಿ ಹಲವು ಸಮಸ್ಯೆಗಳು ರಾಷ್ಟ್ರೀಯ ಸ್ವರೂಪದಲ್ಲ; ಅವು ಜಾಗತಿಕ ಆಯಾಮಗಳನ್ನು ಹೊಂದಿದ್ದು, ಎಲ್ಲ ಜನರು ಹಾಗೂ ದೇಶಗಳೂ ಅನುಭವಿಸಬೇಕಾಗಿದೆ. ಪರಿಣಾಮವಾಗಿ, ಅವು ಪ್ರಪಂಚದ ಎಲ್ಲ ಜನರ ಮತ್ತು ಎಲ್ಲ ದೇಶಗಳ ಗಮನವನ್ನು ಬೇಡುತ್ತವೆ. 'ಇಂತಹ ಕೆಲವು ಸಮಸ್ಯೆಗಳನ್ನು ನೀವು ಪಟ್ಟಿ ಮಾಡಬಲ್ಲಿರಾ?' ಪರಿಸರಾತ್ಮಕ ಕಾಳಜಿಗಳು ವ್ಯಾಪಾರ, ವಾಣಿಜ್ಯ ಮತ್ತು ಆರ್ಥಿಕ ವಿಚಾರಗಳು, ಹಾಗೂ ವಿಶ್ವಶಾಂತಿ ಇವು ಇಂತಹ ಕೆಲವು ಕ್ಷೇತ್ರಗಳಾಗಿವೆ. ಅಂತರಾಷ್ಟ್ರೀಯ ತಿಳುವಳಿಕೆಯ ಕೊರತೆಯು ವಿಶ್ವವನ್ನು ಎರಡು ಬಾರಿ ವಿಶ್ವಯುದ್ಧಗಳಡೆ ನೂಕಿದ್ದು, ಇದರಿಂದಾಗಿ ಅಪಾರ ಜೀವಹಾನಿ, ಆಸ್ತಿ ಹಾನಿ ಮತ್ತು ಮಾನವೀಯತೆಯ ಮೌಲ್ಯಗಳ ನಷ್ಟ ಸಂಭವಿಸಿದೆ. ಮಾನವ ಜನಾಂಗವು ವಿಶವದ ಎಲ್ಲ ಜನತೆ ಹಾಗೂ ದೇಶಗಳ ನಡುವೆ ತಿಳುವಳಿಕೆ ಮತ್ತು ಸಹಕಾರಗಳನ್ನು ಸಾಧಿಸುವಲ್ಲಿ ಸಂತೃಪ್ತಿ, ನೆಮ್ಮದಿಯಿಂದ ಇರಲು ಸಾಧ್ಯವಿಲ್ಲ. ಮಾನವ ಹಕ್ಕುಗಳು ಮತ್ತು ಮಾನವ ಅಭಿವೃದ್ಧಿಯ ವಿಚಾರಗಳು ಅತ್ಯಂತ ಮುಖ್ಯವಾಗಿದ್ದು ಆಯಾ ದೇಶಗಳಿಗೆ ಬಿಡಲು ಸಾಧ್ಯವಿಲ್ಲ.

ಮಾನವತೆಗೆ ಎಉರಾಗಿರುವಸವಾಲುಗಳನ್ನು ಜನರು ಒಂದಾಗಿ ಎದುರಿಸಿ, ಇತರ ಎಲ್ಲ ಜನರ ಬಗ್ಗೆ ಕಾಳಜಿ ತೋರಿಸುವಂತಹ ಉತ್ತಮ ವಿಶ್ವ ವ್ಯವಸ್ಥೆಗೆ ಅಗತ್ಯವಾದ ಅನುಕೂಲಕ ಮನೋಭಾವಗಳನ್ನು ಕಲಿಕಾರ್ಥಿಗಳಲ್ಲಿ ಸೃಷ್ಟಿಸುವ ಅಂತಸ್ವತ್ವ ಸಮಾಜ ವಿಜ್ಞಾನಕ್ಕಿದೆ. ಪ್ರಪಂಚದ ಭೂಗೋಳ ಮತ್ತು ಪ್ರಪಂಚದ ಇತಿಹಾಸದ ಬೋಧನೆಯು ಇಡೀ ವಿಶ್ವದ ಬಗ್ಗೆ ವಿದ್ಯಾರ್ಥಿಗಳಿಗೆ ಪರಿಚಯ ಮಾಡಿಸಬಲ್ಲದು. ಪ್ರಪಂಚದ ಇತಿಹಾಸವು ಇಂದಿನ ತಲೆಮಾರಿಗೆ ಅಂತರರಾಷ್ಟ್ರೀಯ ಶಾಂತಿ, ಸಹಕಾರ, ತಿಳುವಳಿಕೆ, ಪರಸ್ಪರ ಗೌರವ, ಹಂಚಿಕೊಂಖಡ ಭಾವನೆಗಳು, ಮತ್ತು ಸಾಮೂಹಿಕ ಪ್ರಯತ್ನಗಳ

ಮಹತ್ವವನ್ನು ಮೆಚ್ಚಿಕೊಳ್ಳಲು ಸಾಕಷ್ಟು ಪಾಠಗಳನ್ನು ಒಳಗೊಂಡಿದೆ. ವಿಶ್ವವು ಈಗಾಗಲೇ ಪರಸ್ಪರ ಸಮಾಲೋಚನೆ ಮತ್ತು ಅಂತರರಾಷ್ಟ್ರೀಯ ಸಹಕಾರಕ್ಕಾಗಿ ಅಂತರಾಷ್ಟ್ರೀಯ ಸಂಸ್ಥೆಗಳ ಮೂಲ ಸೌಕರ್ಯಗಳನ್ನು ಸೃಷ್ಟಿಸಿದೆ. ಮಕ್ಕಳಿಗೆ ಈ ಅಂತರಾಷ್ಟ್ರೀಯ ಸಂಸ್ಥೆಗಳು ಮತ್ತು ಅವುಗಳ ಪಾತ್ರಗಳನ್ನು ಪರಿಚಯಿಸಬೇಕಾಗಿದೆ. ಪರಿಸರ, ಜನಸಂಖ್ಯೆ, ಅಭಿವೃದ್ಧಿ, ಶಿಕ್ಷಣ, ಆರ್ಥಿಕತೆ ಮತ್ತು ವ್ಯಾಪಾರ ಮತ್ತು ವಿವಿಧ ಜನರು ಮತ್ತು ದೇಶಗಳ ನಡುವೆ ಸಶಸ್ತ್ರ ಘರ್ಷಣೆಗಳಿಗೆ ಸಂಬಂಧಿಸಿದಂತೆ ಈಗ ಗೋಚರಿಸುತ್ತಿರುವ ಅಂತರರಾಷ್ಟ್ರೀಯ ಸನ್ನಿವೇಶಗಳ ಬಗ್ಗೆಯೂ ಅವರು ತಿಳಿದಿರಬೇಕು. ಗೋಚರಿಸುತ್ತಿರುವ (ಉದ್ಭವಿಸುತ್ತಿರುವ) ಸವಾಲುಗಳನ್ನು ನಿಭಾಯಿಸಲು ವಿವಿಧ ಜಾಗತಿಕ ಸಂಸ್ಥೆಗಳ ಚೌಕಟ್ಟುಗಳ ಸಮರ್ಪಕತೆಯ ಬಗ್ಗೆಯೂ ವಿದ್ಯಾರ್ಥಿಗಳು ತಿಳಿದಿರಬೇಕು. ರಾಷ್ಟ್ರೀಯ ಭಾವಕೈತೆ ಮತ್ತು ಅಂತರರಾಷ್ಟ್ರೀಯ ತಿಳುವಳಿಕೆಯ ಕಾಳಜಿಗಳು ಸಮಾಜವಿಜ್ಞಾನ ಪಠ್ಯಕ್ರಮದಲ್ಲಿ ಪ್ರತಿಬಿಂಬಿಸುತ್ತಿವೆ.

### 2.2.4 ಜಾತ್ಯತೀತತೆ ಮತ್ತು ಕೋಮುವಾದ

ಭಾರತದಲ್ಲಿ ಆಚರಣೆಯಲ್ಲಿರುವ ವಿವಿಧ ಧರ್ಮಗಳ ಬಗ್ಗೆ ಮಾತನಾಡುವಾಗ ಮತ್ತೊಮ್ಮೆ ದೇಶದ ಬಹುಸಂಸ್ಕೃತಿಯು ಪ್ರಾಮುಖ್ಯತೆ ಪಡೆಯುತ್ತದೆ. ನಾವು ಎಲ್ಲ ಕಾಲದಲ್ಲಿಯೂ ಹಲವಾರು ನಂಬಿಕೆಗಳು ಹಾಗೂ ಸಿದ್ಧಾಂತಗಳು ಒಟ್ಟಾಗಿ ಮಳಿಗೆ ಹೊಂದಿರುವ ಪರಂಪರೆ ಹೊಂದಿದ್ದೇವೆ. ಹಲವರು ಧಾರ್ಮಿಕ ನಂಬಿಕೆಗಳು ಜನರ ಬೆಂಬಲ ಮತ್ತು ಸಹಿಷ್ಣುತೆಗಳೊಂದಿಗೆ ಈ ದೇಶದಲ್ಲಿ ಜನಿಸಿ ಪ್ರವರ್ಧನ ಮಾನಕ್ಕೆ ಬಂದುವು, ಮತ್ತು ಜಗತ್ತಿನ ಇತರ ಭಾಗಗಳಿಗೂ ಹರಡಿದುವು. ಇತರ ಹಲವು ನಂಬಿಕೆಗಳು ಬೇರೆ ಪ್ರದೇಶಗಳಿಂದ ಈ ದೇಶಕ್ಕೆ ಬಂದುವು ಮತ್ತು ಸ್ವೀಕೃತಿ ಹಾಗೂ ಅವಕಾಶಗಳನ್ನು ಕಂಡವು. ಈ ದೇಶವು ಒಟ್ಟಾಗಿ ಜೀವಿಸುವ ಶ್ರೀಮಂತ ಪರಂಪರೆಯನ್ನು ಹೊಂದಿದೆ. ಜನರು ವಿಭಿನ್ನ ಧಾರ್ಮಿಕ ನಂಬಿಕೆಗಳ ಹಬ್ಬಗಳನ್ನು ಒಟ್ಟಿಗೆ ಆಚರಿಸುತ್ತಾರೆ. ಆದರೆ, ಬೇರೆ ಬೇರೆ ಧರ್ಮಗಳಿಗೆ ಸೇರಿದ ಜನರ ನಡುವೆ ಸಮಸ್ಯೆಗಳಿರಲೇ ಇಲ್ಲವೆಂದಲ್ಲ, ಈ ಸಮಸ್ಯೆಗಳನ್ನು ನಾವು ಚರ್ಚಿಸಬೇಕು ಮತ್ತು ಅದರಲ್ಲಿರುವ ವಿವಿದಾಂಶಗಳನ್ನು ಸಂಭೋಧಿಸಬೇಕು.

**ಚಟುವಟಿಕೆ–2**

ನಮ್ಮ ದೇಶಗಳಲ್ಲಿ ರೂಢಿಯಲ್ಲಿರುವ ವಿವಿಧ ಧರ್ಮಗಳ ಪಟ್ಟಿ ಮಾಡಿ ಮತ್ತು ರಾಷ್ಟ್ರೀಯ ಜನಗಣತಿ ದತ್ತಾಂಶಗಳನ್ನು ಬಳಸಿ ಈ ಧರ್ಮಗಳನ್ನು ಆಚರಿಸುವ ಜನಸಂಖ್ಯೆ ಪ್ರಮಾಣ ಕಂಡುಕೊಳ್ಳಿರಿ.

ಭಾರತವು ಒಂದು ಜಾತ್ಯಾತೀತ ರಾಷ್ಟ್ರವಾಗಿರಬೇಕು ಎಂಬುದಾಗಿ ನಮ್ಮ ಸಂವಿಧಾನವು ಸ್ಪಷ್ಟವಾಗಿ ಹೇಳಿದೆ. ಆದರೆ ಭಾರತೀಯ ಜಾತ್ಯಾತೀತತೆಯು ಬೇರೆ ದೇಶಗಳ ಜಾತ್ಯಾತಿತ ನಂಬಿಕೆಗಳಿಂದ ಭಿನ್ನವಾಗಿದೆ :ಏಗೆಂದರೆ, ಭಾರತ ಜಾತ್ಯತೀತತೆಯು ಎಲ್ಲ ಧರ್ಮಗಳಿಂದ ದೂರವಿರುವ ಬದಲು ಎಲ್ಲ ಧರ್ಮಗಳನ್ನು ಸಮಾನವಾಗಿ ಕಾಣುತ್ತದೆ. ಭಾರತದ ಜಾತ್ಯಾತೀತೆ ಧರ್ಮರಹಿತವಲ್ಲ. ಹಾಗಾದರೆ, ಭಾರತದಲ್ಲಿ ಕೋಮುದಳ್ಳಿರಿ ಇದೆ? ಹಿಂದೆ ನಡೆದ ಕೋಮುಗಲಬೆಗಳಿಗೆ ನಿಜವಾದ ಕಾರಾನ ಏನಿರಬಹುದು ? ಅದು ಅಜ್ಞಾನದಿಂದಲೇ ಅದು ಒಡಕುಂಟು ಮಾಡುವ ಮತ್ತು ದೇಶವಿರೋಧಿ ಶಕ್ತಿಗಳ ತಂತ್ರಗಳಿಂದಲೇ? ಪದೇ ಪದೇ ಕೋಮು ಸಂಬಂಧಿತ ವಿವಾದಾಂಶಗಳನ್ನು ಮುಂದೆ ತಂದು ಕೋಮು ಬಾವನರಗಳನ್ನು ಕೆರಳಿಸುವ ಕೆಲವು ಗುಂಪುಗಳ ರಹಸ್ಯವಾದ ಒಡೆಯುವ ಕಾರ್ಯ ತಂತ್ರವೇ ಕೋಮು ಭಾವೋದ್ರೇಕಗಳನ್ನು ಕೆರಳಿಸುವ ಸಾಧ್ಯತೆಗಳಿರುವ ವಿಚಾರಗಳು ಯಾವುವು? ಮತಾಂತರ ಮತ್ತು ಧಾರ್ಮಿಕ ಪರಿವರ್ತನೆ (ಮತ ಪರಿವರ್ತನೆ) "ಇತರ ದೃಷ್ಟಿಕೋನ/ಅಭಿಪ್ರಾಯ"ಗಳ ಬಗ್ಗೆ ಅಸಹಿಷ್ಣುತೆ ಮತ್ತು ಕ್ಷುಲ್ಲಕ ವೈಯಕ್ತಿಕ ಹಿತಾಸಕ್ತಿಗಳು ಇಂತಹ ವಿಷಯದ ಕೇಂದ್ರದಲ್ಲಿರಬಹುದು. ಈ ವಿವಾದಾಂಶಗಳು ಮತ್ತು ಕಾಳಜಿಗಳನ್ನು ದೇಸದ ಭವಿಷ್ಯದ ನಾಗರೀಕರೋದಿಗೆ ಮುಕ್ತವಾಗಿ ಚರ್ಚಿಸುವ ಅಗತ್ಯವಿದೆ. ಮಕ್ಕಳು ವಿಚಾರ/ವಿವಾದಾಂಶಗಳನ್ನು ವಿವೇಕಯುತ ತಾರ್ಕಿಕ ಹಾಗೂ ನಿಷ್ಪಕ್ಷಪಾತ ನಿಲುವಿನಿಂದ ಸ್ವೀಕರಿಸುವಂತೆ ಮಾಡಲು ಅವರೊಂದಿಗೆ ಈ ವಿಚಾಗಳ ಚರ್ಚೆಯ ಮಾರ್ಗವನ್ನು ಆಲೋಚಿಸಬಲ್ಲಿರಾ?

ಚಟುವಟಿಕೆ–3

1. ಆರ್ಥಿಕ ಮತ್ತು ಸಮಾಜಿಕ ಕಾರ್ಯಕ್ರಮಗಳು ರಾಷ್ಟ್ರೀಯ ಭಾವೈಕ್ಯತೆಯನ್ನು ಬಲಗೊಳಿಸಲು ಸಹಾಯ ಮಾಡಬಹುದಾದ ಕೆಲವು ರೀತಿ/ಮಾರ್ಗಗಳನ್ನು ಪಟ್ಟಿಮಾಡಿ.
2. ಭಾರತದ ಏಕತೆ ಮತ್ತು ಸಮಗ್ರತೆಗಳನ್ನು ದುರ್ಬಲಗೊಳಿಸುತ್ತಿರುವ ಎಲ್ಲ ಭಿನ್ನ ಶಕ್ತಿಗಳನ್ನು ಪಟ್ಟಿಮಾಡಿ.
3. ಶಾಲೆಗಳಲ್ಲಿ ರಾಷ್ಟ್ರೀಯ ಭಾವೈಕ್ಯತೆಯನ್ನು ಪ್ರೋತ್ಸಾಹಿಸಲು ವಿದ್ಯಾರ್ಥಿಗಳು ನಿರ್ವಹಿಸಬಹುದಾದ ಕೆಲವು ಚಟುವಟಿಕೆಗಳನ್ನು ಪಟ್ಟಿಮಾಡಿ.
4. ರಾಷ್ಟ್ರೀಯ ಏಕತೆ ಮತ್ತು ಸಮಗ್ರತೆಗಳ ಮೇಲೆ ಪ್ರಭಾವ ಬೀರಬಲ್ಲ ಸಮಾಜವಿಜ್ಞಾನ ವಸ್ತುವಿಷಯ ಕ್ಷೇತ್ರಗಳನ್ನು ಪಟ್ಟಿಮಾಡಿ.
5. ಅಂತರಾಷ್ಟ್ರೀಯ ಸಂಘಟನೆಗಳು ಮತ್ತು ಸಂಸ್ಥೆಗಳು ಹಾಗೂ ಅವುಗಳ ಕಾರ್ಯಗಳ ಬಗ್ಗೆ ಮಾಹಿತಿ ಸಂಗ್ರಹಿಸಿ, ನೀವು UNO. UNESCO, UNICEF, WTO WHO, FAO ಮುಂತಾದವುಗಳ ಕಾರ್ಯ ಮತ್ತು ಇತ್ತೀಚಿನ ಚಟುವಟಿಕೆಗಳ ಬಗ್ಗೆ ಮಾಹಿತಿ ಕಂಡುಕೊಳ್ಳಬಹುದು.
6. UNO ದಿನ, ಆತವಾ ವಿಶ್ವಪರಿಸರದ ಮುಂದಾದ ಎಲ್ಲಾ ಅಂತರಾಷ್ಟ್ರೀಯ/ವಿಸ್ವದಿನಗಳ ಪಟ್ಟಿಮಾಡಿ. ಶೈಕ್ಷಿಕ ವರ್ಷದಲ್ಲಿ ನಿಮ್ಮ ಶಾಲೆಯಲ್ಲಿ ಈ ದಿನಗಳನ್ನು ಹೇಗೆ ಆಚರಿಸಬಹುದು ಎಂಬುದಕ್ಕೆ ಒಂದು ಯೋಜನೆ ತಯಾರಿಸಿ.
7. ನಿಮ್ಮ ವಾಸಸ್ಥಳದಲ್ಲಿ ಒಂದು ಕೋಮುಗಲಬೆ ಆಗಿರುವುದಾಗಿ ಊಹಿಸಿ. ಕೋಮುಭಾವನೆಗಳನ್ನು ನಿಯಮತ್ರಿಸಲು ನೀವು ಮತ್ತು ನಿಮ್ಮ ವಿದ್ಯಾರ್ಥಿಗಳು ಕೈಗೊಳ್ಳಬಹುದಾದ ಸಂಭಾವ್ಯ ಚಟುವಟಿಕೆಗಳನ್ನು ಆಲೋಚಿಸಿ.

ನಿಮ್ಮ ಪ್ರಗತಿ ಪರಿಶೀಲಿಸಿ–2

1. ಸಮಾಜ ವಿಜ್ಞಾನವು ವಿದ್ಯಾರ್ಥಿಗಳಲ್ಲಿ ಬೇರೂರಬೇಕಾದ ಸಾಂವಿಧಾನಿಕ ಮೌಲ್ಯಗಳನ್ನು ಪಟ್ಟಿಮಾಡಿ.
   ------------------------------------------------------------------------
   ------------------------------------------------------------------------
   ----------------------------------------------
2. ಯಾವ ಶಿಕ್ಷಣ ಆಯೋಗವು ಪ್ರಜಾಪ್ರಭುತ್ವಕ್ಕಾಗಿ ವಸ್ತು ಹೊಂದಿರುವ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನ ಬಗ್ಗೆ ಹೇಳಿದೆ?
   ------------------------------------------------------------------------
   ------------------------------------------------------------------------
   ----------------------------------------------
3. ಯಾವ ಶಿಕ್ಷಣ ಆಯೋಗವು ಪ್ರಜಾಪ್ರಭುತ್ವಕ್ಕಾಗಿ ತರಬೇತಿಯನ್ನು ಶಿಫಾರಸ್ಸು ಮಾಡಿದೆ?
   ------------------------------------------------------------------------
   ------------------------------------------------------------------------
   ----------------------------------------------
4. ಮಾನವ ಜನಾಂಗದ ಕಲ್ಯಾಣಕ್ಕಾಗಿ ಶ್ರಮಿಸುತ್ತಿರುವ ಕೆಲವು ಅಂತರಾಷ್ಟ್ರೀಯ ಸಂಘಟನೆಗಳನ್ನು ಹೆಸರಿಸಿ.
   ------------------------------------------------------------------------
   ------------------------------------------------------------------------
   ----------------------------------------------

2.2.5 ಸಮಾಜ ವಿಜ್ಞಾನ ಪಠ್ಯಕ್ರಮದ ಮೇಲೆ ಕೆಳಸ್ತರದಲ್ಲಿರುವವರ ದೃಷ್ಟಿಕೋನದ ಪ್ರಭಾವ.

ಇತ್ತೀಚೆಗೆ, ಅನೇಕರು, ಅದರಲ್ಲಿಯೂ, ಮಾರ್ಕ್ಸ್ ಸಿದ್ಧಾಂತದ ಒಲವು ಇರುವವರು, ಸಮಾಜದಲ್ಲಿ ಮತ್ತು ಇತಿಹಾಸದಲ್ಲಿ ಗಣ್ಯರಲ್ಲದ ಸದಸ್ಯರ ಪಾತ್ರವನ್ನು ಅನ್ವೇಷಿಸಲು ಆರಂಭಿಸಿದ್ದಾರೆ. ಈ ಗಣ್ಯರಲ್ಲಿದ್ದ ಸದಸ್ಯರನ್ನು 'ಕೆಳಸ್ತರದಲ್ಲಿರುವವರು' ಎಂದು ಉಲ್ಲೇಖಿಸಲಾಗಿದೆ. ಈ ಪದವು ನಿರ್ದಿಷ್ಟವಾಗಿ ಪ್ರಬಲರ ಜಾಗತೀಕರಣ ಮತ್ತು

ಸಾಮಾಜಿಕ ಪ್ರತ್ಯೇಕಿಸುವಿಕೆಗಳ ವಿರುದ್ಧ ಹೋರಾಟ ನಡೆಸುತ್ತಿರುವ ಜನಸಾಮಾನ್ಯ ಪ್ರಧಾನ್ಯತೆ ಇಲ್ಲದವರು ಮತ್ತು ದಮನಿಕರನ್ನು ಸೂಚಿಸಲು 1980ರ ದಶಕದಿಂದೀಚೆಗೆ ಸಾಮಾಜಿಕ ಮತ್ತು ಐತಿಹಾಸಿಕ ಸನ್ನಿವೇಶಗಳಲ್ಲಿ ಹೆಚ್ಚು ಹೆಚ್ಚಾಗಿ ಬಳಸಲಾಗುತ್ತಿದೆ. ಈ ಪದವು ಕೆಳವರ್ಗದವರು, ದಮನಿತರು, ಕೆಳಮಟ್ಟದ ಸ್ಥಾನದಲ್ಲಿರುವವರು ಮುಂತಾದವರಿಗೂ ಅನ್ವಯಿಸುತ್ತದೆ. ಕೆಳಸ್ತರದವರ ದೃಷ್ಟಿಕೋನವು ಇತಿಹಾಸವನ್ನು ಕೆಳಮಟ್ಟದಿಂದ ನೋಡುತ್ತದೆ ಮತ್ತು ಬ್ರಿಟಿಷರು ಬರೆದಿರುವ ಅಥವಾ ಭಾರತೀಯ ರಾಷ್ಟ್ರೀಯತಾವಾದಿಗಳು ಬರೆದಿರುವ ಇತಿಹಾಸದಲ್ಲಿನ ಪ್ರಬಲರ ವಿಶಿಷ್ಟರ ಪಕ್ಷಪಾತವನ್ನು ಸರಿಪಡಿಸುವ ಗುರಿ ಹೊಂಇದೆ. ಅದು ಪ್ರಾಬಲ್ಯ – ಅಧಿನತೆಗಳ ಸಂಬಂಧವನ್ನು ಅಧ್ಯಯನ ಮಾಡಬಹುಸುತ್ತದೆ. ಕೆಳಸ್ತರದವರ ಅಧ್ಯಯನದ ತತ್ವಸಿದ್ಧಾಂತವು ತೃತೀಯ ಜಗತ್ತಿನ ದೇಶಗಳಲ್ಲಿ ಇತಿಹಾಸ, ಅರ್ಥಶಾಸ್ತ್ರ ಮತ್ತು ಸಮಾಜ ವಿಜ್ಞಾನಗಳ ಅಧ್ಯಯನಕ್ಕೆ ಹೆಚ್ಚಿನ ಕೊಡುಗೆ ನೀಡಿದೆ. ಕೆಳಸ್ತರದ ದೃಷ್ಟಿಕೋನವು ನಮ್ಮ ಸ್ವಾತಂತ್ರ್ಯ ಹೋರಾಟವೂ ಸೇರಿದಂತೆ ಇತಿಹಾಸದಲ್ಲಿ ಎಲ್ಲ ಮನ್ನಣೆಯನ್ನೂ ತಾವೇ ಪಡೆಯಬಯಸುವ ಸ್ರೇಷ್ಠರ ಪ್ರಾಬಲ್ಯದ ಶಕ್ತಿಗೆ ಕೆಳಸ್ತರದಿಂದ ಬಂದ ಪತ್ಯುತ್ತರ / ಪ್ರತಿಕ್ರಿಯೆ ಆಗಿದೆ. ಸಂಥಾಲ್ ದಂಗೆ (1955), ಚಂಪಾರಣ್ ಸತ್ಯಾಗ್ರಹ (1917–18) ಮತ್ತು ಬಾರ್ಡೋಲಿ ಸತ್ಯಾಗ್ರಹ (1928) ಗಳಂತಹ ರೈತ ಚಳುವಳಿಗಳನ್ನು ತಮ್ಮ ಹಕ್ಕುಗಳ ಬೇಡಿಕೆ ಮತ್ತು ಸಮರ್ಥನೆಗಾಗಿ ಕೆಳಸ್ತರದವರ ಪ್ರತಿಕ್ರಿಯೆಗಳಾಗಿದ್ದ್ದವು. ಈ ಚಳುವಳಿಗಳು ಮುಖ್ಯವಾಗಿ ವತಾಹತು ಆಡಳಿತದ ಹೊಸ ಭೂಕಂದಾಯ ವ್ಯವಸ್ಥೆ ಮತ್ತು ದಬ್ಬಾಳಿಕೆಯ ಆರ್ಥಿಕ ನೀತಿಗಳ ಕಾರಣದಿಂದ ನಡೆದುವು. ರೈತರು ಇವುಗಳನ್ನು ತಡೆದುಕೊಳ್ಳಲು ಸಾಧ್ಯವಾಗದೇ ಹೋದಾಗ ದಮನಿಕೆ ಮತ್ತು ಶೋಷಣೆಗಳ ವಿರುದ್ಧ ದಂಗೆ ಎದ್ದವು.

ಭಾರತದಂತಹ ಒಂದು ದೇಶದಲ್ಲಿ ಕೆಳಸ್ತರದ ಸ್ಥಾನಗಳಿಗೆ ಸೇರಿದವರ ಪ್ರಮಾಣ ಒಟ್ಟು ಜನಸಂಖ್ಯೆಯ ದೊಡ್ಡಪಾಲಿನಷ್ಟಾಗಿರುತ್ತದೆ. ನಮ್ಮ ಜನಸಂಖ್ಯೆಯ ಇಷ್ಟುದೊಡ್ಡ ಭಾಗವು ಹೊರಗಿಡಲ್ಪಟ್ಟು, ಪ್ರತ್ಯೇಕಿಸಿ, ದಮನಕ್ಕೊಳಪಟ್ಟಾಗ ಆಗಬಹುದಾದ ಪರಿಣಾಂಗಳನ್ನು ಆಲೋಚಿಸಿ, ಇಂತಹ ಸನ್ನಿವೇಶವು ಅಭಿವೃದ್ಧಿ ವಿಚಾರಗಳ ಮೇಲೆ ಹೆಚ್ಚಿನ ಪ್ರಭಾವ ಬೀರಬಹುದೆಂದು ನಿಮಗೆನಿಸುವುದೆ? ಸಾಮಾಜಿಕ ಹಾಗೂ ರಾಷ್ಟ್ರೀಯ ಪ್ರಕ್ರಿಯೆಗಳಲ್ಲಿ ಬಹುಸಂಖ್ಯೆಯ ಜನರನ್ನು ಸೇರಿಸದಿದ್ದರೆ ಪ್ರಜಾಪ್ರಭುತ್ವ ಸಫಲವಾಗಬಹುದೆ? ಕೆಳಸ್ತರದ ದೃಷ್ಟಿಕೋನವು ಸಮಾಜ, ಅಭಿವೃದ್ಧಿ ಮತ್ತು ಆಡಳಿತದ ವಿಚಾರಗಳನ್ನು ಹೇಗೆ ಕಾಣಬ ಏಕು ಎಂಬುದಕ್ಕೆ ಮುಖ್ಯ ಕೊಡುಗೆ ನೀಡಿದೆ. ಅದು ಬಹುಸಂಖ್ಯೆಯ ಜನರ ಧ್ವನಿಯನ್ನು ಹೇಗೆ ಕೇಳಿಸಿಕೊಳ್ಳಲಾಗುತ್ತದೆ ಎಂಬುದನ್ನೂ ಪರಿಶೀಲಿಸುತ್ತದೆ. ಈ ದೃಷ್ಟಿಕೋನವು ಶ್ರೇಷ್ಠರ / ಗಣ್ಯರ ಅಧಿಕಾರಕ್ಕೆ ಅಂಟಿಕೊಳ್ಳುವ ಅದೃಷ್ಟವನ್ನು, ಕೆಳಸ್ತರದವರ ಅದೃಷ್ಟವನ್ನೇ ನಿಯಂತ್ರಿಸುವ ಅಧಕಾರದ, ಪ್ರಾಬಲ್ಯದ ಪ್ರವೃತ್ತಿಯನ್ನು ತಿರಸ್ಕರಿಸುತ್ತದೆ. ಈ ದೃಷ್ಟಿಕೋನವು ಕೆಳಸ್ತರದವರ ದೃಷ್ಟಿಯಿಂದ ಈ ವಿಚಾರಗಳನ್ನು ಪರಿಶೀಲಿಸಬೇಕೆಂಬ ಬೇಡಿಕೆ, ಒತ್ತಾಯ ಮುಂದಿಡುತ್ತದೆ. ಅವರನ್ನು ತಮ್ಮ ಬಗ್ಗೆ ಮಾತನಾಡಲು ಬಿಡಬೇಕು. ಕೆಳಸ್ತರದವರೆಂದರೆ ಯಾರದ ದನಿ ಮೂಕವಾಗಿದೆಯೋ ಅವರೆಂಬ ವ್ಯಾಖ್ಯೆ ಇದ್ದರೂ ಸಹ ಈಗ ಅವರ ದೃಷ್ಟಿಕೋನಕ್ಕೆ ಗಮನ ಹೆಚ್ಚುತ್ತಿದೆ.

ನಾವು ಕೆಳಸ್ತಗರದವರ ಆಲೋಚನೆಗಳನ್ನು ನಿರ್ಲಕ್ಷಿಸಿ, ವಿದ್ಯಾರ್ಥಿಗಳಲ್ಲಿ ಈ ದೃಷ್ಟಿಕೋನದ ಬಗ್ಗೆ ಸೂಕ್ಷ್ಮತೆ ಬೆಳಸದೇ ಹೋದರೆ ಸಮಾಜದ ನಮ್ಮ ಗರಹಿಕೆಯು ಅಪೂರ್ಣವಾಗಿಯೇ ಉಳಿಯುತ್ತದೆ.

226, ಲಿಂಗತ್ವ, ಜಾತಿ ಮತ್ತು ಬುಡಕಟ್ಟಿನ ದೃಷ್ಟಿಕೋನಗಳು ಕೇಂದ್ರಾಡಳಿತ ಪ್ರದೇಶಗಳ ಎಲ್ಲ ವ್ಯಕ್ತಿಗಳು, ಪುರುಷರು ಮತ್ತು ಮಹಿಳೆಯರ ಸಾಕ್ಷರತಾ ಮಟ್ಟವನ್ನು ತೋರಿಸುತ್ತಿದೆ.

ಪಟ್ಟಿ 2.1. ಭಾರತದ ರಾಜ್ಯಗಳಲ್ಲಿ ಸಾಕ್ಷರತಾ ಪ್ರಮಾಣ–2ಡಿ 11ರ ಜನಗಣತಿ.

| ಕ್ರಮ ಸಂಖ್ಯೆ | ರಾಜ್ಯ | ಎಲ್ಲರೂ | ಪುರುಷರು | ಮಹಿಳೆಯರು |
|---|---|---|---|---|
| 1. | ಅಂಡಮಾನ್, ನಿಕೋಬರ್ ದ್ವೀಪ | 86.3% | 90.1% | 81.8% |
| 2. | ಆಂಧ್ರಪ್ರದೇಶ | 67.7% | 75.6% | 59.7% |
| 3. | ಅರುಣಾಚಲಪ್ರದೇಶ | 67.0% | 73.7% | 59.6% |
| 4. | ಅಸ್ಸಾಂ | 73.2% | 98.8% | 67.3% |

| | | | | |
|---|---|---|---|---|
| 5. | ಬಿಹಾರ | 63.8% | 73.5% | 53.3% |
| 6. | ಚಂಡೀಘರ್ | 86.4% | 90.5% | 81.4% |
| 7. | ಛತ್ತೀಸ್‌ಘರ್ | 71.0% | 81.5% | 60.6% |
| 8 | ದಾದ್ರ ಮತ್ತು ನಾಗರ್ ಹವೇಲಿ | 77.7% | 86.5% | 69% |
| 9 | ದಾಮನ್ ಮತ್ತು ದಿಯು | 87.1% | 91.0% | 80.9% |
| 10. | ದೆಹಲಿ | 86.3% | 91.0% | 80.9% |
| 11. | ಗೋವಾ | 87.4% | 92.8% | 81.8% |
| 12. | ಗುಜರಾತ್ | 79.3% | 87.32% | 70.7% |
| 13. | ಹರಿಹಾಣ | 76.6% | 85.4% | 66.8% |
| 14. | ಹಿಮಾಚಲಪ್ರದೇಶ | 83.8% | 90.8% | 76.6% |
| 15. | ಜಮ್ಮು ಮತ್ತು ಕಾಶ್ಮೀರ | 67.7% | 78.3% | 58.0% |
| 16. | ಝಾರ್‌ಖಂಡ | 67.6% | 78.5% | 56.2% |
| 17. | ಕರ್ನಾಟಕ | 75.6% | 82.8% | 68.1% |
| 18. | ಕೇರಳ | 93.9% | 96.0% | 92.0% |
| 19. | ಲಕ್ಷದ್ವೀಪ | 92.3% | 96.1% | 88.2% |
| 20. | ಮಧ್ಯಪ್ರದೇಶ | 70.6% | 80.5% | 60.0% |
| 21. | ಮಹಾರಾಷ್ಟ್ರ | 82.9% | 89.8% | 75.5% |
| 22. | ಮಣಿಪುರ್ | 79.8% | 86.5% | 73.2% |
| 23. | ಮೇಘಾಲಯ | 75.5% | 77.2% | 73.8% |
| 24. | ಮಿಜೋರಮ್ | 91.6% | 93.7% | 89.4% |
| 25. | ನಾಗಾಲ್ಯಾಂಡ್ | 80.1% | 83.3% | 76.7% |
| 26. | ಒರಿಸ್ಸಾ | 73.5% | 82.4% | 64.4% |
| 27. | ಪುದುಚೇರಿ | 86.5% | 92.1% | 81.2% |
| 28. | ಪಂಜಾಬ್ | 76.7% | 81.5% | 71.3% |
| 29. | ರಾಜಾಸ್ತಾನ | 67.1% | 80.5% | 52.7% |
| 30. | ಸಿಕ್ಕಿಂ | 82.2% | 87.3% | 76.4% |
| 31. | ತಮಿಳುನಾಡು | 80.3% | 86.8% | 73.9% |
| 32. | ತ್ರಿಪುರ | 87.8% | 92.2% | 83.1% |
| 33. | ಉತ್ತರಪ್ರದೇಶ | 69.7% | 79.2% | 59.3% |
| 34 | ಉತ್ತರಾಖಂಡ್ | 79.6% | 83.3% | 70.7% |
| 35. | ಪಶ್ಚಿಮ ಬಂಗಾಳ | 77.1% | 82.75 | 71.2% |
| | ಭಾರತ | 74.04% | 82.14% | 65.46% |

ಮೂಲ: (ಭಾರತ ಜನಗಣತಿ – 2011)

ಈ ಪಟ್ಟಿಯನ್ನು ನೀವು ಗಮನಿಸಿದಾಗ ವಿವಿಧ ರಾಜ್ಯಗಳಲ್ಲಿ ಪುರುಷ ಮತ್ತು ಮಹಿಳೆಯರ ಸಾಕ್ಷರತಾ ಪ್ರಮಾಣದಲ್ಲಿ ಅಂತರ ಇರುವುದನ್ನು ಕಾಣುವಿರಿ.

ನಮ್ಮ ಜನಸಂಖ್ಯೆಯ ಸುಮಾರು ಅರ್ಧದಷ್ಟು ಮಹಿಳೆಯರಿದ್ದಾರೆ. ಭಾರತೀಯ ಸಮಾಜವು ಮಾತೃಪೂಜೆಯ ಪರಂಪರೆಯನ್ನು ಹೊಂದಿದ್ದರೂ ಸಹ ಸಂಪೂರ್ಣ ದೇಶವನ್ನು ಗಮನಿಸಿದಾಗ ಪುರುಷರಷ್ಟೇ ಸಮನಾಗಿ ಮಹಿಳೆಯರನ್ನು ಕಾಣುವುದಿಲ್ಲ. ಜನಸಂಖ್ಯಾ ಗಣತಿಯ ಅಂಕಿಅಂಶಗಳನ್ನು ಗಮನಿಸಿದರೆ ಯಾವುದೇ ಗುಂಪಿನಲ್ಲಿ ಮಹಿಳೆಯರು – ಸಾಮನ್ಯವರ್ಗವಾಗಿರಲಿ, ಪರಿಶಿಷ್ಟಜಾತಿ, ಪರಿಶಿಷ್ಟ ವರ್ಗದವರಾಗಿರಲಿ ಅವರು ಪುರುಷರಿಗಿಂತ ಸಾಕ್ಷರತೆಯಲ್ಲಿ ಹಿಂದಿರುತ್ತಾರೆ ಎಂಬುದು ನಿಮ್ಮ ಗಮನಕ್ಕೆ ಬಂದಿರಬಹುದು. ಭಾರತದಲ್ಲಿ ಲಿಂಗಾನುಪಾತವೂ ಸಹ ಪುರುಷರಿಗೆ ಹೋಲಿಸಿದರೆ ಮಹಿಳೆಯರ ಸಂಖ್ಯೆ ಕಡಿಮೆಯಾಗುತ್ತಿರುವುದು ಕಂಡು ಬರುವುದು. ಭಾರತದಲ್ಲಿ ರಾಜಕೀಯ

ಪ್ರಕ್ರಿಯೆಯಲ್ಲಿ ಭಾಗವಹಿಸುವಿಕೆ ಕೂಡ ಪುರುಷರಿಗಿಂತ ಮಹಿಳೆಯರಲ್ಲಿ ಕಡಿಮೆ: ಚುನಾಯಿತ ಪ್ರತಿನಿಧಿಗಳಲ್ಲಿ ಅವರ ಸಂಖ್ಯೆ ಅತ್ಯಲ್ಪ: ಮತ್ತು ಆಸ್ತಿಯೂ ಸಹ ಬಹುಮಟ್ಟಿಗೆ ಪುರುಷರ ಹೆಸರಿನಲ್ಲಿಯೇ ಇರುತ್ತದೆ. ಮಹಿಳೆಯರನ್ನು ವಿವಿಧ ಸಾಮಾಜಿಕ ಅಂಶಗಳಲ್ಲಿ ಹೀನಾಯವಾಗಿ ಕಾಣುವುದು ಭಾತರದಲ್ಲಿ ಸರ್ವೇಸಾಮಾನ್ಯ. ನಮ್ಮ (ಸುಸಂಸ್ಕೃತ) ನಾಗರೀಕ ನಗರಗಳಲ್ಲಿಯೂ ಸಹ ರಸ್ತೆಗಳೂ ಸಹ ಅವರಿಗೆ ಸುರಕ್ಷಿತವಾಗಿಲ್ಲ. ಅವರದೇ ಮನೆಗಳಲ್ಲಿಯೂ ಅವರ ಸುರಕ್ಷತೆ ಮತ್ತು ಕ್ಷೇಮ, ಸೌಖ್ಯಗಳು ಎಷ್ಟು ಅಪಾಯಕ್ಕೊಳಗಾಗಿದ್ದುವೆಂದರೆ ಈ ದೇಶದಲ್ಲಿ ಕೌಟುಂಬಿಕ ಹಿಂಸೆಯ ವಿರುದ್ಧ ಒಂದು ಕಾಯ್ದೆಯನ್ನೇ ಅನುಷ್ಠಾನಗೊಳಿಸಬೇಕಾಯಿತು. ಮೇಲಿನ ವಾಸ್ತವಾಂಶಗಳಿಂದ ಕೇವಲ ಬಾಯಿಮಾತಿನಲ್ಲಿ ಸಮಾನತೆ ಮತ್ತು ಮಹಿಳೆಯರಿಗೆ ಗೌರವ, ಮತ್ತು ಅವರ ಸಬಲೀಕರಣ ಹಾಗೂ ಸ್ವಾತಂತ್ರ್ಯದ ಬಗ್ಗೆ ಹೇಳುವುದು ಸಾಲದು. ಅವರನ್ನು ಪ್ರತಿಕೂಲ ಸನ್ನಿವೇಶಗಳಿಗೆ ಒಡ್ಡುವ ಸಂದರ್ಭಗಳ ನಿಜವಾಗಿ ಎದುರಾದಾಗ (ಸಂಭವಿಸಿದಾಗ) ಪ್ರತಿಯೊಬ್ಬರೂ ಧನಾತ್ಮಕವಾಗಿ ಸ್ಪಂದಿಸಿ ಮಹಿಳೆಯರ ಹಿತಾಸಕ್ತಿಗಳನ್ನು ಕಾಪಾಡುವುದು ಅವಶ್ಯ. ಪರಂಪರಾಗತವಾಗಿ ಭಾರತೀಯರಲ್ಲಿರುವ, ಭಾರತೀಯ ತಾಯಂದಿರಲ್ಲಿಯೂ ಸಹ ಇರುವ ಗಂಡು ಮಗುವಿನ ಗೀಳು ಸನ್ನಿವೇಶವನ್ನು ಪ್ರಭಲವಾಗಿ ಹೆಣ್ಣುಮಕ್ಕಳ ವಿರುದ್ಧ ಬಾಗಿಸಿದೆ / ವಾಲಿಸಿದೆ.

ಲಿಂಗಾನುಜಪಾತ (1000 ಪುರುಷರಿಗೆ ಮಹಿಳೆಯರ ಸಂಖ್ಯೆ)

ಭಾರತ ಮತ್ತು ಆಯ್ದು ಕೆಲವು ರಾಜ್ಯಗಳಿಗೆ)

| ಭಾರತ | ಬಿಹಾರ | ಛತ್ತೀಸ್‌ಗಢ್ | ಝಾರ್‌ಖಂಡ್ | ಒಡಿಸಾ | ಪಂಜಾಬ್ | ಉತ್ತರ ಪ್ರದೇಶ | ನಿಮ್ಮ ರಾಜ್ಯ |
|---|---|---|---|---|---|---|---|
| 940 | 916 | 991 | 947 | 978 | 293 | 098 | ಪತ್ತೆಹಚ್ಚಿ ಬರೆಯಿರಿ. |

(ಮೂಲ: ಭಾರತ ಜನಗಣತಿ–2011)

ಸನ್ನಿವೇಶ ಮೆಚ್ಚುಕೊಳ್ಳುವಂತಹುದೇನೂ ಅಲ್ಲ ಭಾರತದಂತಹ ಆಧುನಿಕ, ಸ್ವತಂತ್ರ ಪ್ರಜಾಪ್ರಭುತ್ವ ರಾಷ್ಟ್ರವೊಂದರಲ್ಲಿ, ಅದೂ ತಾನು ವಿಶ್ವದಲ್ಲಿ 'ಅಭಿವೃದ್ಧಿ ಹೊಂದಿದ' ಸ್ಥಾನಮಾನವನ್ನು ಅಪೇಕ್ಷಿಸಿದಾಗ, ಈ ಸನ್ನಿವೇಶ ಮೆಚ್ಚುವಂತಹುದಲ್ಲ.

ಈ ಸನ್ನಿವೇಶವು ಭಾರತೀಯರಲ್ಲಿ ಒಂದು ಮನೋಭಾವನಾತ್ಮಕ ಮಾಪಾರ್ಡನ್ನು ಬೇಡುತ್ತದೆ. ಸಾಮಾಜಿಕ ಬದಲಾವಣೆನ್ನುಂಟುಮಾಡಲು ಕಾನೂನು ಮತ್ತು ಶಕ್ತಿ / ಬಲಪ್ರಯೋಗಗಳು ಸಾಕಾಗುವುದಿಲ್ಲ. ಒಂದು ವಿಷಯವಾಗಿ ಸಮಾಜ ವಿಜ್ಞಾನ ಹಾಗೂ ಸಮಾಜ ವಿಜ್ಞಾನ ಶಿಕ್ಷಕರಾಗಿ ನೀವು ಕಲಿಕಾರ್ಥಿಗಳಲ್ಲಿ ಇಂತಹ ಮನೋಭಾವಾತ್ಮಕ ಬದಲಾವಣೆ ತರಲು ಸಾಧ್ಯವಾಗಬಲ್ಲದು. ಸಮಾಜ ವಿಜ್ಞಾನವು ಪಠ್ಯಕ್ರಮದಲ್ಲಿ ಭಾರತದ ಮುಂದಿನ ನಾಗರೀಕರಲ್ಲಿ ಲಿಂಗತ್ವ ಸಮಾನತೆಯಂತಹ ವಿಚಾರಗಳ ಬಗ್ಗೆ ಸೂಕ್ಷ್ಮತೆ ಬೆಳೆಸಬೇಕು. "ಭಾತರದ ಸಮಾಜ ಮತ್ತು ಇತಿಹಾಸಕ್ಕೆ ಕೆಲವು ಆಧರ್ಶಪ್ರಾಯ ಮಹಿಳೆಯರ ಕೊಡುಗೆಗಳನ್ನು ಚರ್ಚಿಸಿದರೆ ಸಾಲದು. ನಮ್ಮ ಸಮಾಜದ ಅವಿಭಾಜ್ಯ ಅಂಗವಾಗಿ ಮಹಿಳೆಯರು, ಸಮಾಜದ ಯೋಗಕ್ಷೇಮ ಮತ್ತು ಪ್ರಗತಿಗೆ ಅವರ ಸಮಗ್ರವಾದ ಕೊಡುಗೆ, ದೇಶದ ಆರ್ಥಿಕತೆಯಲ್ಲಿ ಅದರ ಭಾಗವಹಿಸುವಿಕೆ, ಮತ್ತು ಆಸ್ತಿ, ಸಮತೆ, ಘನತೆ ಮತ್ತು ಗೌರವಗಳಿಗೆ ಅವರ ಹಕ್ಕು ಮುಂತಾದ ವಿಚಾರಗಳಿಗೆ ನಮ್ಮ ಗಮನ ಹರಿಸಬೇಕಾಗಿದೆ. ಹೆಣ್ಣು ಮಗುವಿನ ಶಿಕ್ಷಣವು ಒಂದು ಮುಖ್ಯ ವಿಚಾರವಾಗಿದೆ. ಇಂದು ಶಾಲೆಗಳಲ್ಲಿ ಹೆಚ್ಚು ಹೆಚ್ಚಾಗಿ ಹೆಣ್ಣು ಮಕ್ಕಳು ಓದುತ್ತಿರುವುದರಿಂದ ಸ್ವಾತಂತ್ರಾನಂತರದಿಂದ ಮಹಿಳಾ ಸಾಕ್ಷರತೆ ಹೆಚ್ಚುತ್ತಲೇ ಇದೆ ಹೆಣ್ಣು ಮಕ್ಕಳಿಗೆ ಗುಣಾತ್ಮಕ ಒಳಗೊಳಿಸುವ ಶಿಕ್ಷಣ ಒದಗಿಸಲು ವ್ಯವಸ್ಥೆ ಮಾಡುವ ಮೂಲಕ ಲಿಂಖಗತ್ವ ಸಮಾನತೆ ಸಾಧಿಸಲು ಈ ಕ್ಷೇತ್ರದಲ್ಲಿ ಇನ್ನೂ ಹೆಚ್ಚಿನ ಕಾರ್ಯ ಮಾಡಬೇಕಾಗಿದೆ.

ಭಾರತದ ಹಿಂದುಳಿದ ಜಾತಿಗಳು ಅನೇಕ ಸಮಾಜಿಕ, ಆರ್ಥಿಕ, ರಾಜಕೀಯ ಮತ್ತು ಧಾರ್ಮಿಕ ಸವಲತ್ತುಗಳಿಂದ ವಂಚಿತರಾಗಿದ್ದಾರೆ. ಜಾತಿ ಶ್ರೇಣಿಯಲ್ಲಿ ತಳದಲ್ಲಿರುವ ಅವರು ಬಡತನ, ಅಪಮಾನ, ಮತ್ತು ಶೋಷಣೆಗಳಿಂದ ಕಷ್ಟ ಅನುಭವಿಸಿದ್ದಾರೆ. ಭಾರತೀಯ ಸಮಾಜದ ಸಮಕಾಲೀನ ಸಂರಚನೆಯು ಹಿಂದುಳಿದ ಜಾತಿಗಳ ಪ್ರಾಬಲ್ಯವನ್ನು ಶಾಶ್ವತಗೊಳಿಸಿದೆ. ಹಿಂದುಳಿದ ಜಾತಿಗಳು ತರ್ಕಬದ್ಧ, ನಿವೇಶಪೂರ್ಣ ಮತ್ತು ವಿಮರ್ಶಾತ್ಮಕ ಚಿಂತನೆಗಳನ್ನು ಮಥುವ

ತಮ್ಮದೇ ಸಿದ್ಧಾಂತಗಳು ಹಾಗೂ ಸಾಮಾರ್ಥ್ಯಗಳನ್ನು ಬಳಸಿಕೊಂಡು ಮೇಲಕ್ಕೇರುವ ಆಸೆಯನ್ನು ಬಲಪಡಿಸುವುದು ಇಂದಿನ ಅಗತ್ಯವಾದ ತಮ್ಮದೇ ಸಾಮರ್ಥ್ಯಗಳು ಮತ್ತು ಗುಣಗಳನ್ನು ಹಿಂದುಳಿದ ಜಾತಿಗಳು ಬೆಳೆಸಿಕೊಳ್ಳುವ ಅಗತ್ಯವಿದೆ. ತಮ್ಮನ್ನು ಕೀಳಾಗಿಸುವ ಪರಂಪರಾಗತ ರೂಢೀಗಳಿಗೆ ಯಾವ ಸ್ಥಾನವೂ ಇಲ್ಲದಂತಹ ಆತ್ಮಗೌರವ ಮತ್ತು ಗೌರವಯುತ ಜೀವನ ಶೈಲಿಗಳಿಗಾಗಿ ಹಿರಿಯಾಸೆಗಳನ್ನು ನೆಲೆಗೊಳಿಸಬೇಕು. ಅರ್ಥಪೂರ್ಣ ಪರಿವರ್ತನಾ ಪ್ರಕ್ರಿಯೆಗಾಗಿ ಈ ಎಲ್ಲಾ ಕಾರ್ಯಗಳು ಮತ್ತು ಪ್ರಗತಿಯು ಕೆಳಗಿನಿಂದಲೇ ಬರಬೇಕು ಎಂದರೆ ಹಿಂದುಳಿದ ಜಾತಿಗಳ ಜನರಿಂದಲೇ ಬರಬೇಕು. ಸಾವಿರಾರು ವರ್ಷಗಳ ಭೇದಭಾವ ಮತ್ತು ದಮನಿಕೆಗಳನ್ನು ಮೀರಿ ಸಾಗುವ ಜಾಗೃತಿ ಮತ್ತು ಅಂತಶಕ್ತಿಗಳನ್ನು ಸೃಷ್ಟಿಸಲು ಶಿಕ್ಷಣವು ಒಂದು ಅತಿಮುಖ್ಯ ಮಾರ್ಗವಾಗಿದೆ. "ಪರಿಶಿಷ್ಟ ಜಾತಿಯವರ ಶೈಕ್ಷಣಿಕ ಅಭಿವೃದ್ಧಿಯಲ್ಲಿ ಕೇಂದ್ರ ಬಿಂದುವು, ಶಿಕ್ಷಣದ ಎಲ್ಲ ಹಂತಗಳು ಮತ್ತು ಮಟ್ಟಗಳಲ್ಲಿ, ಎಲ್ಲ ಕ್ಷೇತ್ರಗಳಲ್ಲಿ ಹಾಗೂ ಎಲ್ಲ ನಾಲಕು ಆಯಾಮಗಳಲ್ಲಿ – ಗ್ರಾಮೀಣ ಪುರುಷ, ಗ್ರಾಮೀಣ ಮಹಿಳಾ, ನಗರ ಪುರುಷ, ನಗರ ಮಹಿಳಾ ಆಯಾಮಗಳಲ್ಲಿ – ಪರಿಶಿಷ್ಟ ಜಾತಿಯಲ್ಲಿ ದವರೊಂದಿಗೆ, ಸಮೀಕರಣ ಮಾಡುವುದೇ ಆಗಿದೆ." (NPE – 1986).

| ರಾಜ್ಯಗಳು | ಪರಿಶಿಷ್ಟ ಜಾತಿ | | ಪರಿಶಿಷ್ಟ ವರ್ಗ | |
|---|---|---|---|---|
| | ಎಲ್ಲ ವ್ಯಕ್ತಿಗಳು | ಮಹಿಳೆಯರು | ಎಲ್ಲರೂ | ಮಹಿಳೆಯರು |
| ಬಿಹಾರ | 28.5 | 15.6 | 28.2 | 15.5 |
| ಛತ್ತೀಸ್‌ಗಡ್ | 64.0 | 49.2 | 52.1 | 39.3 |
| ಝಾರ್‌ಖಂಖಡ್ | 37.6 | 22.5 | 40.7 | 27.2 |
| ಒರಿಸ್ಸಾ | 55.5 | 40.3 | 87.4 | 23.4 |
| ಉತ್ತರಪ್ರದೇಶ | 46.3 | 30.5 | 35.1 | 20.7 |
| ಭಾರತ | 54.69 | | 47.10 | |

(ಮೂಲ : ಭಾರತದ ಜನಗಣತಿ – 2001)

ಕ್ರಾಂತಿಕಾರಿ ಸಮಾಜಿಕ ಪರಿವರ್ತನೆಯ ಹೋರಾಟಕ್ಕೆ ಶಿಕ್ಷಣವು ಒಂದು ಪ್ರಬಲ ಆಸ್ತ್ರವಾಗಿದೆ. ಹಿಂದುಳಿದ ಜಾತಿಗಳ ಮಕ್ಕಳು ಶಿಕ್ಷಣ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸುವ ಮೂಲಕ ಸುದೀರ್ಘ ಕಾಲದ ಸಾಮಾಜಿಕ, ಆರ್ಥಿಕ ಅಡೆತಡೆಗಳನ್ನು ನಿವಾರಿಸುವುದು ಅಗತ್ಯ. ಶಿಕ್ಷಣವು ಮಕಾನಸಿಕ ಜಾಗೃತಿ ಹಾಗೂ ಸಾಮಾಜಿ ಮತ್ತು ನೈತಿಕ ಪ್ರಜ್ಞೆಯನ್ನು ಉಂಟುಮಾಡುವ ಕಡೆಗೆ ಒಯ್ಯುಬೇಕು. ಶಿಕ್ಷಣವು ಕೆಳಮಕಟ್ಟದ ಸ್ಥಾನಮಾನ ಮತ್ತು ಮನ:ಸ್ಥಿತಿಗಳನ್ನು ಜಯಿಸುವ ಮಾರ್ಗವೂ ಆಗಿದೆ. ಪಠ್ಯಕ್ರಮವು ಈ ಜನರ ಸಂಸ್ಕೃತಿ, ಭಾಷೆ ಮತ್ತು ಜ್ಞಾನಗಳಿಗೂ ಸೂಕ್ಷ್ಮತೆ ಹೊಂದಿರಬೇಕು. ಹಿಂದುಳಿದ ಜಾತಿಯ ವಿದ್ಯಾರ್ಥಿಗಳು ತಾವು ಶಾಲೆಗಳಲ್ಲಿ ಏನನ್ನು ಕಲಿಯುತ್ತಾರೋ ಅದನ್ನು ತಮ್ಮ ನೆರೆಹೊರೆ ಮತ್ತು ಸಂಸ್ಕೃತಿಗೆ ಸಂಬಂಧ ಕಲ್ಪಿಸಲು ಸಮರ್ಥರಾಗಬೇಕು. ಇಲ್ಲದಿದ್ದರೆ ಅವರು ಪ್ರಬಲ ಗುಂಪುಗಳು ತಮಗೆ ನೀಡಿದುದನ್ನು ಒಪ್ಪಿ ಸ್ವೀಕರಿಸಿ ತಮ್ಮದನ್ನು ತಿರಸ್ಕರಿಸಿ ಪ್ರತ್ಯೇಕತೆಯ ಹಾಗೂ ಕೀಳರಿಮೆಯ ಸೂಕ್ಷ್ಮ ಭಾವನೆಗಳನ್ನು ಬೆಳೆಸಿಕೊಳ್ಳುವುದು ನಿಶ್ಚಿತ.

ಪರಿಶಿಷ್ಟ ವರ್ಗದವರು ಭಾರತದ ಜನಸಂಖ್ಯೆ ಗಣನೀಯ ಪ್ರಮಾಣದಲ್ಲಿದ್ದಾರೆ. ಪರಂಪರಾಗತವಾಗಿ, ಅವರು ತಮ್ಮದೇ ಭಾಷೆಗಳು ಮತ್ತು ವಿಶಿಷ್ಟ ಸಂಸ್ಕೃತಿಗಳೊಂದಿಗೆ ಸ್ವತಂತ್ರ ಜೀವನ ನಡೆಸುತ್ತಿದ್ದಾರೆ. ಬಹುತೇಕ ಬುಡಕಟ್ಟಿನವರು ತಮ್ಮದೇ ಆದ ಭಾಷೆಯನ್ನು ಹೊಂದಿದ್ದಾರೆ (ಅದು ಕೇವಲ ಮಾತನಾಡುವ ಭಾಷೆಯಾಗಿದ್ದರೂ ಸಹ) ಅವರು ತಮ್ಮದೇ ಪದ್ಧತಿಗಳು, ಪರಂಪರೆಗಳು ಮತ್ತು ಮೌಲ್ಯ ವ್ಯವಸ್ಥೆಗಳನ್ನೂ ಸಹ ಹೊಂದಿದ್ದಾರೆ. ಬುಡಕಟ್ಟು ಜನರು ತಮ್ಮದೇ ಆದ ಜ್ಞಾನದ ಚೌಕಟ್ಟನ್ನೂ ಹೊಂದಿದ್ದಾರೆ. ಪ್ರಕೃತಿಯ ಕುರಿತ ಅವರ ಸಮಗ್ರ. ಹತ್ತಿರದ ಜ್ಞಾನವು ಅವನ್ನು ವಿಶಿಷ್ಟ, ಅನನ್ಯರನ್ನಾಗಿ ಮಾಡಿದೆ; ಅವರು ನಿಸರ್ಗದೊಂದಿಗೆ ನಿಕಟ ಸಂಬಂಧ ಹೊಂದಿದ್ದು, ಪರಿಸರದ ಇತರ ಅಂಶಗಳೊಂದಿಗೆ ಸಾಮರಸ್ಯದಿಂದ ಬಾಳುತ್ತಾರೆ. ಅವರು ಹೆಮ್ಮೆಯುಳ್ಳವರಾಗಿದ್ದು ತಮ್ಮ ಘನತೆ ಹಾಗೂ ಜೀವನ ಕ್ರಮವನ್ನು ರಕ್ಷಿಸಿಕೊಳ್ಳಲು ಸಿದ್ಧರಾಗಿರುತ್ತಾರೆ. ಅವರಲ್ಲಿ ಅನೇಕರು ತಮ್ಮ ಭೂಮಿ ಮತ್ತು ಸಂಸ್ಕೃತಿಯನ್ನು ರಕ್ಷಿಸಿಕೊಳ್ಳಲು ಬ್ರಿಟಿಷರ ವಿರುದ್ಧ

ಧೈರ್ಯವಾಗಿ ಹೋರಾಡಿದರು. ಅವುಗಳಲ್ಲಿ 1855ರ ಸಂಥಲ್ ದಂಗೆ ಮತ್ತು ಬಿರ್ಸಾ ಮುಂಡಾ ನಾಯಕತ್ವದಲ್ಲಿ ಎದ್ದ ದಂಗೆಗಳು ಕೇವಲ ಕೆಲವೇ ಉದಾಹರಣೆಗಳಾಗಿವೆ.

ಬುಡಕಟ್ಟು ಜನರ ವಾಸಸ್ಥಳಗಳು ಬಹುತೇಕ ಕಠಿಣ ಭೂಪ್ರದೇಶ ಮತ್ತು ಬೆಟ್ಟಗಾಡು ಪ್ರದೇಶಗಲ್ಲಿರುವುದರಿಂದ ಅವರು ಬಹುಮಟ್ಟಿಗೆ ಆಧುನಿಕ ಕಾಲದ ಕೈಗಾರಿಕಾ ಮತ್ತು ರಾಜಕೀಯ ಕೇಂದ್ರಗಳಿಂದ ದೂರದಲ್ಲಿಯೇ ವಾಸಿಸುತ್ತಿದ್ದು, ಇದು ಅವರನ್ನು ಸ್ಪಷ್ಟವಾಗಿ ಪ್ರತಿಕೂಲ ಸನ್ನಿವೇಶದಲ್ಲಿಟ್ಟಿದೆ. ಅವರ ಪ್ರತ್ಯೇಕ ಭಾಷೆಯು ಅವರಿಗೆ ಅಪರಿಚಿತವಾದ, ಬೇರೊಂದು ಭಾಷೆಯಲ್ಲಿ ಶಿಕ್ಷಣ ಪಡೆಯಬೇಕಾಗಿರುವ ಮಕ್ಕಳ ಮೇಲೆ ಹೆಚ್ಚುವರಿ ಒತ್ತಡ ಹೇರುತ್ತಿದೆ. ಅವರ ಸ್ವಂತ ಸಂಸ್ಕೃತಿ ಮತ್ತು ಪರಂಪರೆಗಳು ಶಾಲಾ ಪಠ್ಯಕ್ರಮ ಮತ್ತು ಪಠ್ಯಪುಸ್ತಕಗಳಲ್ಲಿ ಪ್ರಾತಿನಿಧ್ಯ ಹೊಂದಿರುವುದೇ ಇಲ್ಲವಾದ ಕಾರಣ ಆ ಮಕ್ಕಳು ತಮ್ಮ ಶಾಲಾ ಕಲಿಕೆಯನ್ನು ತಮ್ಮ ತಕ್ಷಣವೇ ಪರಿಸರಕ್ಕೆ ಸಂಬಂಧಿಸಲಾಗದೆ ಸಮಸ್ಯೆ ಹೆಚ್ಚುತ್ತಿರಲು ಕಾರಣವಾಗಿದೆ ಎನ್.ಪಿ.ಇ (1986) ಹೇಳಿರುವಂತೆ, "ಶಿಕ್ಷಣದ ಎಲ್ಲ ಹಂತಗಳ ಪಠ್ಯಕ್ರಮವನ್ನೂ ಬುಡಕಟ್ಟು ಜನರ ಶ್ರೀಮಂತ ಸಾಂಸ್ಕೃತಿಕ ಗುರುತು (ವಿಶಿಷ್ಟ್ಯತೆ) ಮತ್ತು ಅವರ ಅಗಾಧ ಸೃಜನಶೀಲ ಪ್ರತಿಭೆಯ ಅರಿವು ಮೂಡಿಸುವಂತೆ ವಿನ್ಯಾಸಗೊಳಿಸಲಾಗುವುದು". ಇತಿಹಾಸ, ಸಂಸ್ಕೃತಿ, ಪರಿಸರ ಮತ್ತು ಅಭಿವೃದ್ಧಿಗಳ ಬಗ್ಗೆ ಬುಡಕಟ್ಟು ಜನರ ದೃಷ್ಟಿಕೋನಗಳನ್ನು ಚರ್ಚಿಸಲು ಸಮಾಜ ವಿಜ್ಞಾನವು ಅತ್ಯಂತ ಸೂಕ್ತ ವಿಷಯವಾಗಿದೆ.

**ಚಟುವಟಿಕೆ – 4**

1. ಜನಗಣತಿ ದತ್ತಾಂಶದಿಂಖದ ಭಾರತದಲ್ಲಿ ಮತ್ತು ನಿಮ್ಮ ರಾಜ್ಯದಲ್ಲಿ ಲಿಂಗಾನುಪಾತ (1000 ಪುರುಷರಿಗೆ ಮಹಿಳೆಯರ ಸಂಖ್ಯೆ) ವನ್ನು ಹುಡುಕಿಕೊಳ್ಳಿ.
2. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರ ಸಾಮಾನ್ಯ ಜಾತಿಗಳ ಸಾಕ್ಷರತಾ ಮಟ್ಟಗಳನ್ನು ಹೋಲಿಸಿ ಮಹಿಳೆಯರ ಸಾಕ್ಷರತಾ ಪ್ರಮಾಣವನ್ನು ಸಾಮಾನ್ಯ ಪುರುಷರ ಸಾಕ್ಷರತೆಯೊಂದಿಗೆ ಮತ್ತು ಪ.ಜಾ. ಪ.ಪಂ, ಜನಸಂಖ್ಯೆಗಳೊಂದಿಗೆ ಹೋಲಿಸಿ. ನೀವು ಗಮನಿಸಿದ ಅಂಶವೇನು? ಯಾವ ಗುಂಪು ಶೈಕ್ಷಣಿಕವಾಗಿ ಹಿಂದುಳಿದಿದೆ? ಎಲ್ಲ ಗುಂಪುಗಳಲ್ಲಿ ಶೈಕ್ಷಣಿಕವಾಗಿ ಅತ್ಯಂತ ಹಿಂದುಳಿದ ಗುಂಪು ಯಾವುದು?
3. ಯಾವ ರಾಜ್ಯಗಳು ಪ.ಜಾ. ಮತ್ತು ಪ.ಪಂ. ಜನಸಂಖ್ಯೆಯ ಅತಿಹೆಚ್ಚು ಸಾಂದ್ರತೆ (ಕೇಂದೀಕರಣ) ಹೊಂದಿವೆ ಎಂದು ಕಂಡುಕೊಳ್ಳಿ. ಇತರ ರಾಜ್ಯಗಳಿಗೆ ಹೋಲಿಸಿದರೆ, ಅತಿ ಹೆಚ್ಚು ಪ.ಜಾ ಮತ್ತು ಪ.ಪಂ ಜನಸಂಖ್ಯೆ ಇರುವ ರಾಜ್ಯಗಳ ಆರ್ಥಿಕ ಅಭಿವೃದ್ಧಿ ಪರಿಸ್ಥಿತಿಗಳ ಬಗ್ಗೆ ನಿಮಗೆ ತಿಳಿದು ಬಂದಿದ್ದೇನು? ನಿಮ್ಮ ಅಭ್ಯಯನದಿಂದ ನಿಮ್ಮ ತೀರ್ಮಾನವೇನು? ನಿಮ್ಮ ತೀರ್ಮಾನಗಳನ್ನು ಬರೆಯಿರಿ ಮತ್ತು ಅವುಗಳನ್ನು ನಿಮ್ಮ ವಿದ್ಯಾರ್ಥಿಗಳು ಹಾಗೂ ಸಹೋದ್ಯೋಗಿಗಳೊಂದಿಗೆ ಚರ್ಚಿಸಿ.
4. ಜನಗಣತಿ ದತ್ತಾಂಶಗಳ ನಿಮ್ಮ ಅಧ್ಯಯನದದಿಂದ ಭಾರತದಲ್ಲಿ ಅತ್ಯಂತ ದುರ್ಬಲ ಗುಂಪು ಯಾವುದೆಂದು ಗುರುತಿಸಿ.

ನಿಮ್ಮ ಪ್ರಗತಿ ಪರಿಶೀಲಿಸಿ–3

1. ಕೆಳಸ್ತರದಲ್ಲಿರುವವರೆಂದರೆ ಯಾರು?

______________________________

______________________________

______________________________

2. ಇತಿಹಾಸದಿಂದ ಕೆಳಸ್ತರದವರ ಚಳುವಳಿಯೊಂದನ್ನು ಹೆಸರಿಸಿ.

______________________________

______________________________

3. ಸಾಕ್ಷರತಾ ಪ್ರಮಾಣಗಳನ್ನು ಗಮನಿಸಿದರೆ ಯಾವ ಗುಂಪು ಅತ್ಯಂತ ಹಿಂದುಳಿದ ಗುಂಪಾಗಿದೆ.

______________________________

______________________________

2.2.7 ಸಮಾಜ ವಿಜ್ಞಾನ ಪಠ್ಯಕ್ರಮದ ಅಂತರಾಷ್ಟ್ರೀಯ ದೃಷ್ಟಿಕೋನ.

ನಾವು ಜಗತೀಕರಣದ ಯುಗದಲ್ಲಿ ಜೀವಿಸಿದ್ದೇವೆ. ಈ ಯುಗದಲ್ಲಿ ವಿಶ್ವದ ಜನತೆ ಮತ್ತು ದೇಶಗಳು ಪ್ರಸಪರ ಸಂಪರ್ಕ ಹೊಂದಿದ್ದು ಪರಸ್ಪರ ಅವಲಂಬಿತಳಾಗಿರುತ್ತಾರೆ. ಸಾರಿಗೆ ಮತ್ತು ಸಂವಹನಗಳ ಸುಧಾರಿತ ಮಾದರಿಗಳು ವಿಶ್ವದ ಜನರನ್ನು, ಸ್ಥಳಗಳನ್ನೂ ಸಮೂಪಕ್ಕೆ ತಂದಿವೆ. ಇಂದು ಜನರು ಮತ್ತು ಸಮಾಜಗಳು ಎದುರಿಸುವ ಹಲವು ಸವಾಲುಗಳು ಅಂತರರಾಷ್ಟ್ರೀಯ ಸ್ವರೂಪದ್ದಾಗಿದೆ. ಪರಿಸರಾತ್ಮಕ ಕಾಳಜಿಗಳನ್ನು ಉದಾಹರಣೆಗೆ, ವಿಶ್ವದ ಎಲ್ಲ ಜನರೂ ಎದುರಿಸುತ್ತಿದ್ದಾರೆ. ಪರಿಸರ ಸಂರಕ್ಷಣೆ, ಪರಿಸರ ಮಾಲಿನ್ಯ ನಿಯಂತ್ರಣ ಮತ್ತು ಪರಿಸರದ ಸಂಪನ್ಮೂಲಗಳ ಔಚಿತ್ಯಪೂರ್ಣ ಬಳಕೆಗಳು ಎಲ್ಲ ಜನರ ಮತ್ತು ಎಲ್ಲ ಸಮೂಹಗಳ ಕೆಲಸಗಳಾಗಿವೆ. ಸಂಪೂರ್ಣ ಮಾನವ ಜನಾಂಗದ ಮೇಲೆ ಪ್ರಭಾವ ಬೀರುವ ಎನ್ನೂ ಇತರ ವಿಚಾರಗಳೆಂದರೆ ವ್ಯಾಪಾರ ಮತ್ತು ವಾಣಿಜ್ಯ, ಅಂತರಾಷ್ಟ್ರೀಯ ಶಾಂತಿ, ರಾಷ್ಟ್ರಗಳ ನಡುವೆ ಘರ್ಷಣೆಗಳನ್ನು ಮತ್ತು ಶಸ್ತ್ರಾಸ್ತ್ರಗಳ ಪಂದ್ಯಾಟ ನಿಯಂತ್ರಣ, ಭಯೋತ್ಪಾದನೆ, ಸುನಾಮಿಯಂತಹ ಬೃಹತ್ ಪ್ರಮಾಣದ ನೈಸರ್ಗಿಕ ವಿಕೋಕಪಗಳು ಮುಂತದುವಾಗಿವೆ. ಈ ಎಲ್ಲ ಜಾಗತಿಕ ವಿಚಾರಗಳ ಬಗ್ಗೆ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸುವ ಜವಾಬ್ದಾರಿ ಸಮಾಜ ವಿಜ್ಞಾನದ್ದಾಗಿದೆ.

ಆಧುನಿಕ ಯುಗದ ಮಾನವ ಅಭಿವೃದ್ಧಿಯಲ್ಲಿ, ಜೀವನದ ಗುಣಮಟ್ಟ ಮತ್ತು ಮಾನವ ಹಕ್ಕುಗಳು ಸಹ ಜಾಗತಿಕ ನಿಹಿತಾರ್ತಗಳನ್ನು ಪಡೆದುಕೊಂಡಿವೆ. ವಿಶ್ವದ ಒಂದು ಭಾಗದಲ್ಲಿರುವ ಬೆಳವಣಿಗೆಯು ಇತರ ಭಾಗಗಳ ಮೇಲೂ ಪರಿಣಾಮ ಬೀರುತ್ತದೆ. ವಿಶ್ವದ ನಾಗರೀಕರು, ಈಗ, ಜಗತ್ತಿನ ಯಾವುದೇ ಮೂಲೆಯಲ್ಲಿ ವಾಸಿಸುವ ಜನರಿಗೆ ಏನಾಗುತ್ತಿದೆ ಎಂಬ ಬಗ್ಗೆ ಕಾಳಜಿ ಹೊಂದಿದ್ದಾರೆ. ಅಲ್ಲದೆ, ಸಮತೆ ಸ್ವಾತಂತ್ರ್ಯ, ನ್ಯಾಯ, ಲಿಂಗತ್ವ ಮತ್ತು ಜನಾಂಗ ಸಮಾನತೆಗಳಂತಹ ಮಾನವೀಯ ಮೌಲ್ಯಗಳು ಯಾವುದೇ ಒಂದು ಸಮಾಜಕ್ಕೆ ಸೀಮಿತವಾಗಿಲ್ಲ. ಬಹುತೇಕ ಸಮಾಜಗಳು ಈ ವಿಚಾರಗಳನ್ನು ಸಂಬೋಧಿಸಬೇಕಾಗಿದೆ. ವಿವಿಧ ದೇಶಗಳ ಸಮಾಜ ವಿಜ್ಞಾನ ಪಠ್ಯಕ್ರಮವು ಈ ಎಲ್ಲ ವಿಚಾರಗಳನ್ನು ಬಿಂಬಿಸುತ್ತದೆ.

ವಿಶ್ವದ ಬೇರೆ ಭಾಗಗಳಲ್ಲಿ ಸಮಾಜ ವಿಜ್ಞಾನ ಪಠ್ಯಕ್ರಮಕ್ಕೆ ಏನಾಗುತ್ತಿದೆ ಎಂಬುದನ್ನೇ ಪರಿಶೀಲಿಸೋಣ. ಸಮಾಜ ವಿಜ್ಞಾನದ ಮೇಲೆ ಅಂತರಾಷ್ಟ್ರೀಯ ವಿಚಾರಗಳ ಪ್ರಭಾವವನ್ನು ಗ್ರಹಿಸಲು ದಕ್ಷಿಣ ಆಫ್ರಿಕಾ ದೇಶದ ಉದಾಹರಣೆ ತೆಗೆದುಕೊಳ್ಳೋಣ.

ದಕ್ಷಿಣ ಆಫ್ರಿಕಾದ ಪರಿಷ್ಕೃತ ರಾಷ್ಟ್ರೀಯ ಪಠ್ಯಕ್ರಮವು ಸಮಾಜ ವಿಜ್ಞಾನವು ಎಂಟು ಪ್ರಧಾನ ಕ್ಷೇತ್ರಗಳೊಂದಾಗಿ ಅಳವಡಿಸಿದೆ. ಸಮಾಜ ವಿಜ್ಞಾನ ಕಲಿಕಾ ಕ್ಷೇತ್ರವು ಜನರ ನಡುವಿನ ಸಂಬಂಧಗಳು, ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ಪರಿಸರಾತ್ಮಕ ಸನ್ನಿವೇಶಗಳು ಹಾಗೂ ಜನರ ಮನೋಭಾವಗಳು, ಮೌಲ್ಯಗಳು ಮತ್ತು ನಂಬಿಕೆಗಳ ಪ್ರಭಾವದಿಂದಾಗಿ ಜನರು ಮತ್ತು ಪರಿಸರಗಳ ನಡುವಿನ ಸಂಬಂಧಗಳನ್ನು ಅಧ್ಯಯನ ಮಾಡುತ್ತದೆ. ಇತಿಹಾಸ ಮತ್ತು ಭೂಗೋಳದ ಪರಿಕಲ್ಪನೆಗಳು, ಕೌಶಲಗಳು ಮತ್ತು ಪ್ರಕ್ರಿಯೆಗಳು; ಪರಿಸರ ಶಿಕ್ಷಣ ಮತ್ತು ಮಾನವ ಹಕ್ಕುಗಳ ಶಿಕ್ಷಣ ಇವು ಈ ಕ್ಷೇತ್ರದ ಅವಿಭಾಜ್ಯ ಅಂಗಗಳಾಗಿವೆ. ಸಮಾಜ ವಿಜ್ಞಾನ ಕಲಿಕಾ ಕ್ಷೇತ್ರವು ಕಲಿಕಾರ್ಥಿಗಳು ಏನನ್ನು ಕಲಿಯುತ್ತಾರೆ. ಮತ್ತು ಹೇಗೆ ಕಲಿಯುತ್ತಾರೆ ಹಾಗೂ ಜ್ಞಾನವನ್ನು ರಚಿಸಿಕೊಳ್ಳುತ್ತಾರೆ ಎಂಬ ಎರಡೂ ಅಂಶಗಳನ್ನು ಒಳಗೊಂಡಿದೆ. ಕಲಿಕಾರ್ಥಿಗಳು ತಾವು ವಾಸಿಸುವ ಸಮಾಜ ಮತ್ತು ಪರಿಸರದ ಬಗ್ಗೆ ಪ್ರಶ್ನೆ ಕೇಳುವಂತೆ ಮತ್ತು ಉತ್ತರಗಳನ್ನು ಹುಡುಕುವಂತೆ ಉತ್ತೇಜಿಸಲಾಗುತ್ತದೆ. ಈ ಕಲಿಕಾಕ್ಷೇತ್ರವು ಸಾಂಸ್ಕೃತಿಕವಾಗಿ ವೈವಿಧ್ಯತೆಯುಳ್ಳ ಮತ್ತು ಬದಲಾಗುತ್ತಿರುವ ಸಮಾಜದಲದಲಿ ರಚನಾತ್ಮಕವಾಗಿ ಭಾಗವಹಿಸಬಲ್ಲ, ತಿಳುವಳಿಕೆಯುಳ್ಳ ವಿಮಕಶಾತ್ಮಕ ಹಾಗೂ ಜವಾಬ್ದಾರಿಯುತ ಪೌರರ ವಿಕಾಸಕ್ಕೆ ಕೊಡುಗೆ ನೀಡಬೇಕೆಂದು ಅಪೇಕ್ಷಿಸಲಾಗಿದೆ. ಜೊತೆಗೆ ಒಂದು ನ್ಯಾಯಯುತ ಹಾಗೂ ಪ್ರಜಾಪ್ರಭುತ್ವ ಸಮಾಜದ ಅಭಿವೃದ್ಧಿಗೆ ಕೊಡುಗೆ ನೀಡುವಂತೆ ಕಲಿಕಾರ್ಥಿಗಳನ್ನು ತಯಾರು ಮಾಡಬೇಕೆಂದೂ ಅಪೇಕ್ಷಿಲಾಗಿದೆ. ಪಠ್ಯಕ್ರಮವು ವರ್ಣಭೇದವಿಲ್ಲದ ವರ್ತಮಾನ ಮತ್ತು ಭವಿಷ್ಯಗಳ ನಿರ್ಮಾಣಕ್ಕಾಗಿ ಆರ್ಥಿಕ ಹಾಗೂ ಸಾಮಾಜಿಕ ಅಸಮಾನತೆ (ವರ್ಣಭೇದ ಹಾಗೂ ಲಿಂಗಭೇದಭಾವಗಳೂ ಒಳಗೊಂಡಂತೆ) ಗಳನ್ನು ಎದುರಿಸಿ, ಸವಾಲು ಮಾಡುವ ಮೂಲಕ ದೇಶದ ಭವಿಷ್ಯದ ಮೇಲೆ ಹೇಗೆ ಪ್ರಭಾವ ಬೀರಬಹುದು ಎಂಬ ಬಗ್ಗೆ ಜಾಗೃತಿ ಮೂಡಿಸುವ ಗುರಿಯನ್ನೂ ಹೊಂದಿದೆ.

ಸಮಾಜ ವಿಜ್ಞಾನ ಪಠ್ಯಕ್ರಮದ ಘಟಕಾಂಶಗಳು ಇತಿಹಾಸದಲ್ಲಿ ಭೂತಕಾಲ ಮತ್ತು ವರ್ತಮಾನಗಳೆರಡನ್ನೂ ತನಿಖೆ ಮಾಡಲು ಅಗತ್ಯವಾದ ವಿಚಾರಣಾ ಕೌಶಲಗಳನ್ನು; ಭೂಗೋಳದ ಮುಖ್ಯ ಪ್ರಕ್ರಿಯೆಗಳನ್ನು; ಜನರು, ಪರಿಸರ ಮತ್ತು ಸಂಪನ್ಮೂಲಗಳ ನಡುವಿನ ಸಂಬಂಧಗಳು; ಐತಿಹಾಸಿಕ ವ್ಯಾಖ್ಯಾನ ಕೌಶಲಗಳು; ಸ್ಥಳೀಯ, ರಾಷ್ಟ್ರೀಯ ಮತ್ತು ಜಾಗತಿಕ ಪ್ರಮಾಣಗಲ್ಲಿ ಅಭಿವೃದ್ಧಿ ವಿಚಾರಗಳನ್ನು ವಿಮರ್ಶಾತ್ಮಕ ವಿಶ್ಲೇಷಣೆ; ಸಂವಿಧಾನ ಆಧಾರಿತ ಮೌಲ್ಯಗಳು; ಮಾನವ ಹಕ್ಕುಗಳು ಮತ್ತು ಪರಿಸರಾತ್ಮಕ ವಿಚಾರಗಳನ್ನು ಒಳಗೊಂಡಿವೆ.

ಈ ಪಠ್ಯಕ್ರಮವು ಕಲಿಕಾರ್ಥಿಗಳಿಂದ – ಜನಾಂಗ, ಲಿಂಗತ್ವ, ವರ್ಗ; ಅನ್ಯದ್ವೇಶ, ನರಮೇಧ ಹಾಗೂ ಗತಕಾಲದಲ್ಲಿ ಹಾಗೂ ವರ್ತಮಾನದಲ್ಲಿ ಇವುಗಳಿಂದಾಗಿರುವ ಪರಿಣಾಮಗಳು – ಮುಂತಾದ ವಿವಿಧ ವಿಚಾರಗಳನ್ನು ಅನ್ವೇಷಿಸುವಂತೆ ಅಪೇಕ್ಷಿಸುತ್ತದೆ. ಪಠ್ಯಕ್ರಮವು ಸಂಪನ್ಮೂಲಗಳ ಹಂಚಿಕೆ ಹಾಗೂ ಅವಕಾಶ, ರಾಜಕೀಯ ಅಧಿಕಾರದ ಚಲಾವಣೆ, ಲಿಂಗತ್ವ ಸಂಬಂಧಗಳು, ಮತ್ತು ಜನರ ಜೀವನದ ಮೇಲೆ ಇವುಗಳ ಹಿಂದಿದ್ದ ಹಾಗೂ ಇಂದೂ ಮುಂದುವರೆದ ಪ್ರಭಾವಗಳೂ ಸೇರದಂತೆ ಗತಕಾಲದ ಹಾಗೂ ವರ್ತಮಾನದ ಅಧಿಕಾರ ಸಂಬಂಧಗಳನ್ನು ಪರಿಶೀಲಿಸುವುದು ಮುಖ್ಯವೆಂದು ಪರಿಗಣಿಸಿದೆ. ದಕ್ಷಿಣ ಆಫ್ರಿಕನ್ನರು ಮತ್ತು ವಿಶ್ವದಾದ್ಯಂತ ಪೌರರು ಎದುರಿಸುತ್ತಿರುವ ಸಾಮಾಜಿ, ನೈತಿಕ, ಆರ್ಥಿಕ ಮತ್ತು ನೀತಿಸಂಬಂಧಿತ ವಿಚಾರಗಳ ಅರಿವೂ ವಿದ್ಯಾರ್ಥಿಗಳಿರಬೇಕೆಂದು ಅದು ಅಪೇಕ್ಷಿಸುತ್ತದೆ.

**2.2.8 ರಾಷ್ಟ್ರಮಟ್ಟದಲ್ಲಿ ಸಮಾಜ ವಿಜ್ಞಾನ ಪಠ್ಯಕ್ರಮದಲ್ಲಿ ಪ್ರಚಲಿತ ಚಿಂತನೆ ಮತ್ತು ರೂಢಿ**

ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (2005) ಸಮಾಜ ವಿಜ್ಞಾನಕ್ಕೆ ವಿವರವಾದ ಯೋಜನೆಯನ್ನು ರೂಪುರೇಖೆ ಒದಗಿಸಿದೆ. ಸಮಾಜ ವಿಜ್ಞಾನವು ಸಮಾಜದ ವೈವಿಧ್ಯಮಯ ಕಾಳಜಿಗಳನ್ನು ಒಳಗೊಂಡಿದೆ. ಮತ್ತು ಇತಿಹಾಸ, ಭೂಗೋಳ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಸಮಾಜಶಾಸತ್ರ, ಮತ್ತು ಮಾನವಶಾಸ್ತ್ರಗಳಿಂದ ವಿಶಾಲ ವ್ಯಾಪ್ತಿಯ ವಿಷಯ ವಸ್ತುವನ್ನು ಆಯ್ದುಕೊಂಡಿದೆ. ಪಠ್ಯಕ್ರಮವು ಪರಿಚಿತ ಸಾಮಾಜಿಕ ವಾಸ್ತವಿಕತೆಯನ್ನು ವಿಮರ್ಶಾತ್ಮಕವಾಗಿ ಅನ್ವೇಷಿಸುವ ಮತ್ತು ಪ್ರಶ್ನಿಸುವ ಮೂಲಕ ವಿದ್ಯಾರ್ಥಿಗಳ ಜಾಗೃತಿಯನ್ನು ಹೆಚ್ಚಿಸುವ ಗುರಿ ಹೊಂದಿದೆ. ಕಲಿಕಾರ್ಥಿಗಳಿಗೆ ಹೆಚ್ಚುತ್ತಲೇ ಇರುವ ಪರಸ್ಪರ ಅವಲಂಭಿತ ಜಗತ್ತಿಗೆ ಹೊಂದಿಕೊಳ್ಳಲು ಅಗತ್ಯವಾದ, ಹಾಗೂ ರಾಜಕೀಯ ಮತ್ತು ಆರ್ಥಿಕ ವಾಸ್ತವಿಕರೆಗಳನ್ನು ನಿಭಾಯಿಸುವ ಸಾಮಾಜಿಕ, ಸಾಂಸ್ಕೃತಿಕ ಮತ್ತು ವಿಮರ್ಶಾತ್ಮಕ ಕೌಶಲಗಳನ್ನು ಒದಗಿಸಬಯಸುತ್ತದೆ. ಎನ್‌ಸಿಎಫ್ (2005) ನ ಪ್ರಕಾರ ಸಮಾಜ ವಿಜ್ಞಾನವು ಮೌಲ್ಯಗಳ ಬಲವಾದ ಭಾವನೆಯನ್ನು ಸೃಷ್ಟಿಸುವ, ಮತ್ತು ವಿದ್ಯಾರ್ಥಿಗಳಲ್ಲಿ ವಿಮರ್ಶಾತ್ಮಕ, ನೈತಿಕ ಹಾಗೂ ಮಾನಸಿಕ ಶಕ್ತಿಯನ್ನು ಉತ್ಪತ್ತಿ ಮಾಡಿ, ಈ ಮೌಲ್ಯಗಳನ್ನು ಬೆದರಿಸುವ ಸಾಮಾಜಿಕ ಶಕ್ತಿಗಳ ಬಗ್ಗೆ ಎಚ್ಚರವಹಿಸುವಂತೆ ಮಾಡುವ "ಜವಾಬ್ದಾರಿ ಹೊಂದಿದೆ.

ಈ ವರೆಗೆ ಸಮಾಜ ವಿಜ್ಞಾನ ಪಠ್ಯಕ್ರಮವು ಅಭಿವೃದ್ಧಿ ಸಂಬಂಧಿತ ವಿಚಾರಗಳಿಗೆ ಒತ್ತು ನೀಡಿದೆ. "ಇವುಗಳು ಮುಖ್ಯವಾಗಿವೆ. ಆದರೆ ಸಮಾನತೆ, ನ್ಯಾಯ ಮತ್ತು ಸಮಾಜ ಹಾಗೂ ರಾಜಕೀಯಗಳಲ್ಲಿ ಘನತೆಯಂತಹ ವಿಚಾರಗಳನ್ನೊಳಗೊಂಡ ಪ್ರಮಾಣಕಗಳ ಆಯಾಮವನ್ನು ಗ್ರಹಿಸಲು ಇವು ಸಾಲದು. ಈ "ಅಭಿವೃದ್ಧಿ'ಗೆ ಕೊಡುಗೆ ನೀಡುವಲ್ಲಿ ವ್ಯಕ್ತಿಗಳ ಪಾತ್ರವನ್ನು ಹಲವು ಬಾರಿ ಅತಿಯಾದ ಮಹತ್ವ ನೀಡಿ ಹೇಳಲಾಗಿದೆ", ಎಂದು ಎನ್‌ಸಿಎಫ್ (2005) ಹೇಳಿದೆ.

"ಪೌರ ನೀತಿ ಎಂಬುದಕ್ಕೆ ಬದಲಾಗಿ ರಾಜ್ಯರಾಸ್ತ್ರ ಎಂಬ ಪದವನ್ನು ಬಳ ಸಬೇಕಾಗಿ ಸಲಹೆ ನೋಡಲಾಗಿದೆ. ವಸಾಹತು ಆಳ್ವಿಕೆಯ ಕಾಲದಲ್ಲಿ ಬ್ರಿಟಿಷ್ ರಾಜ್' ಬಗ್ಗೆ ಭಾರತೀಯರ ಹೆಚ್ಚುತ್ತಿದ್ದ "ನಿಷ್ಠೆ ಇಲ್ಲದಿರುವಿಕೆ"ಯ ಹಿನ್ನೆಲೆಯಲ್ಲಿ ಭಾರತದ ಶಾಲಾ ಪಠ್ಯಕ್ರಮದಲ್ಲಿ 'ಪೌರನೀತಿ'ಯು ಕಂಡ ಬಂದಿತ್ತು. ವಿಧೇಯತೆ ಮತ್ತು ನಿಷ್ಠೆಗಳೀಗೆ ಒತ್ತು ನೀಡುವುದು ಪೌರನೀತಿಯ ಮುಖ್ಯ ಲಕ್ಷಣವಾಗಿತ್ತು. ರಾಜ್ಯಶಾಸ್ತ್ರವು ನಾಗರಿಕ ಸಮಾಜವನ್ನು ಸೂಕ್ಷ್ಮತೆಯುಳ್ಳ ಪ್ರಶ್ನಿಸುವ, ಜಾಗರೂಕತೆಯಿಂದ ಆಲೋಚಿಸುವ ಹಾಗೂ ಪರಿವರ್ತನಾತ್ಮಕ ಪೌರರನ್ನು ಹೊರತರುವ ಕ್ಷೇತ್ರವೆಂದು ಪರಗಣಿಸುತ್ತದೆ" (NCF 2005)

ಸಮಾಜ ವಿಜ್ಞಾನ ಪಠ್ಯಕ್ರಮದಲ್ಲಿ ರಾಷ್ಟ್ರೀಯ ದೃಷ್ಟಿಕೋನವನ್ನು ಸ್ಥಳೀಯ ಗ್ರಹಿಕೆಯಗಳೊಂದಿಗೆ, ಸಂತುಲಿತಗೊಳಿಸುವ, ಮತ್ತು ರಾಷ್ಟ್ರದ ಇತಿಹಾಸವನ್ನು ವಿಶ್ವದ ವಿವಿಧ ಭಾಗಗಳಲ್ಲಿನ ಅಭಿವೃದ್ಧಿಗಳಿಗೆ ಸಂಬಂಧಿಸಿದಂತೆ ಭೋಧಿಸಬೇಕೆಂಬ ಅವಶ್ಯಕತೆಯ ಭಾವನೆ ಇದೆ. ಇದರಿಂದಾಗಿ ಸ್ಥಳೀಯ, ರಾಷ್ಟ್ರೀಯ ಮತ್ತು ಜಾಗತಿಕ ಸನ್ನಿವೇಶಗಳು ಮತ್ತು ಗ್ರಹಿಕೆಗಳ ಸಮಗ್ರ ದೃಷ್ಟಿಯನ್ನು ಬೆಳೆಸುತ್ತದೆ. ಈಗ ಪಠ್ಯಕ್ರಮವು ಮಾನವ ಹಕ್ಕುಗಳು, ಒಳಗೊಳ್ಳುವಿಕೆ, ಪರಿಸರ ಮಾಲಿನ್ಯ, ಜನಸಂಖ್ಯಾ ವಿಚಾರಗಳು, ರಾಷ್ಟ್ರೀಯ ಭಾವೈಕ್ಯತೆ, ಬಡತನ, ಅನಕ್ಷರತೆ, ಬಾಲಾಕಾರ್ಮಿಕತೆ ಮತ್ತು ಜೀತ, ಬಹುತ್ವ ಮತ್ತು ಬದಲಾವಣೆ ಲಿಂಗತ್ವ ವರ್ಗ ಮತ್ತು ಜಾತಿಸಮತೆ ಇತ್ಯಾದಿ ಭಾರತ ಸಮಾಜ ಮತ್ತು ಜನತೆಯ ಪ್ರಚಲಿತ ಸಮಕಾಲೀನ ವಿಚಾರಗಳು ಮತ್ತು ಸಮಸ್ಯೆಗಳೊಂದಿಗೆ ವ್ಯವಹರಿಸಬೇಕಾಗಿದೆ. ಅದು ಮಕ್ಕಳ ಆರೋಗ್ಯಕ್ಕೆ ಸಂಭಂದಿಸಿದ ಕಾಳಜಿಗಳು ಮತ್ತು ಹದಿಹರೆಯದಲ್ಲಾಗುವ ಬದಲಾವಣೆ ಮತ್ತು ವಿಕಾಸಗಳಿಂದಾಗಿ ಪೋಷಕರೊಂದಿಗೆ, ಸಮವಯಸ್ಕರೊಂದಿಗೆ, ವಿರುದ್ಧ ಲಿಂಗದವರೊಂದಿಗೆ ಹಾಗೂ ಸಾಮಾನ್ಯವಾಗಿ ವಯಸ್ಕರೊಂದಿಗೆ ಬದಲಾಗುತ್ತಿರುವ ಸಂಬಂಧಗಳ ಬಗ್ಗೆಯೂ ಚಿಂತಿಸಿ ಸಂಭೋದಿಸಬೇಕಾಗಿದೆ. ಪಠ್ಯಕ್ರಮವು ಜಾಗತಿಕ ಸ್ಪರ್ಧೆಯ ಸವಾಲುಗಳನ್ನು ಎದುರಿಸಲು ಅಗತ್ಯವಾಧ ಪ್ರಮಾಣಕ ಮಟ್ಟಗಳನ್ನು ಸೃಷ್ಟಿಸಬೇಕಾಗಿದೆ. ಹಿರಿಯ ಪ್ರಾಥಮಿಕ ಹಂತದಲ್ಲಿ, "ಇತಿಹಾಸವು ಪ್ರಪಂಚಧಿತರ ಭಾಗಗಳಲ್ಲಿ ಆಗುವ ಘಟನೆಗಳು ಅಥವಾ ಬೆಳವಣಿಗೆಗಳನ್ನು ಗಣನೆಗೆ ತೆಗೆದುಕೊಳ್ಳುತ್ತದೆ. ಭೂಗೋಳವು ಸ್ಥಳೀಯದಿಂದ ಜಾಗತಿಕ ಮಟ್ಟದವರೆಗೆ ವಿವಿಧ ಹಂತಗಳಲ್ಲಿ ಪರಿಸರ, ಸಂಪನ್ಮೂಲಗಳು ಮತ್ತು ಅಭಿವೃದ್ಧಿಗಳಿಗೆ ಸಂಬಂಧಿಸಿದ ವಿಚಾರಗಳ ಬಗ್ಗೆ ಒಂದು ಸಂತುಲಿತ ದೃಷ್ಟಿಕೋನವನ್ನು ಬೆಳೆಸಬಹುದು. ರಾಜ್ಯಶಾಸ್ತ್ರದಲ್ಲಿ ವಿದ್ಯಾರ್ಥಿಗಳಿಗೆ ಸ್ಥಳೀಯ, ರಾಜ್ಯ ಮತ್ತು ಕೇಂದ್ರಗಳಲ್ಲಿ ಸರ್ಕಾರದ ರಚನೆ ಮತ್ತು ಕಾರ್ಯಗಳನ್ನು, ಹಾಗೂ ಪ್ರಜಾಸತ್ತಾತ್ಮಕ ಭಾಗವಹಿಸುವಿಕೆಯ ಪ್ರಕ್ರಿಯೆಗಳನ್ನು ಪರಿಚಯಿಸಲಾಗುವುದು. ಅರ್ಥಶಾಸ್ತ್ರದ ಘಟಕವು ವಿದ್ಯಾರ್ಥಿಗಳಲ್ಲಿ ಕುಟುಂಬ, ಮಾರುಕಟ್ಟೆ ಮತ್ತು ರಾಜ್ಯ (ಸರ್ಕಾರ) ಗಳಂತಹ ಆರ್ಥಿಕ ಸಂಸ್ಥೆಗಳನ್ನು ವೀಕ್ಷಿಸುವ ಸಾಮರ್ಥ್ಯ ಬೆಳೆಸುವುದು. ಈ ವಿಷಯ ಬಾಗಗಳಿಗೆ ಬಹುವಿಷಯಾತ್ಮಕ ಪದ್ಧತಿಯನ್ನು ಸೂಚಿಸುವ ಒಂದು ವಿಭಾಗವೂ ಇರುತ್ತದೆ" (NCF 2005)

ಪ್ರಚಲಿತ ಪಠ್ಯಕ್ರಮವು ಪಠ್ಯಪುಸ್ತಕಗಳನ್ನು ಕೇವಲ ಭೋಧಪ್ರದವಾಗಿರುವುದಕ್ಕಿಂತ ಹೆಚ್ಚು ಸೂಚಿತ ರೂಪದಲ್ಲಿರುವಂತೆ ಅವುಗಳ ಕಲ್ಪನೆಯ ಬದಲಾವಣೆಗೆ ಪ್ರಯತ್ನಿಸುತ್ತದೆ. ವಿದ್ಯಾರ್ಥಿಗಳು ಅಂತರ್ ಕ್ರಿಯಾತ್ಮಕ ಪರಿಸರದಲ್ಲಿ ಜ್ಞಾನ ಮತ್ತು ಕೌಶಲಗಳನ್ನು ಗಳಿಸಲು ಸಹಾಯಕವಾಗುವಂತೆ ಭೋಧನಾ-ಕಲಿಕಾ ಪದ್ಧತಿಗಳನ್ನು ಮರು ಸಬಲೀಕರಿಸುವ ಅಗತ್ಯವಿದೆ. ಸಮಾಜ ವಿಜ್ಞಾನವು ವಿದ್ಯಾರ್ಥಿಗಳಲ್ಲಿ ಸೃಜನಸೀಲತೆ, ಸೌಂದರ್ಯದರಿವು, ಮತ್ತು ವಿಮರ್ಶಾತ್ಮಕ ದೃಷ್ಟಿಕೋನಗಳನ್ನು ಪ್ರೋತ್ಸಾಹಿಸಿ, ಮಕ್ಕಳು ಗತಕಾಲ ಹಾಗೂ ವರ್ತಮಾನಗಳ ನಡುವೆ ಸಂಬಂಧಗಳನ್ನು ಗ್ರಹಿಸುವ, ಸಮಾಜದಲ್ಲಾಗುತ್ತಿರುವ ಬದಲಾವಣೆಗಳನ್ನು ತಿಳಿಯುವ ಸಾಮರ್ಥ್ಯಗಳನ್ನು ಪ್ರೋತ್ಸಾಹಿಸುವ ವಿಧಾನಗಳನ್ನು ಅಳವಡಿಸಿಕೊಳ್ಳಬೇಕು. ಸಮಸ್ಯಾ ಪರಿಹಾರ, ನಾಟಕಾಭಿನಯ ಮತ್ತು ಪಾತ್ರಾಭಿನಯಗಳಂತಹ, ಈ ವರೆಗೆ ಸಾಕಷ್ಟು ಅನ್ವೇಷಿಸದಿರುವ ಮಾರ್ಗೋಪಾಯಗಳನ್ನು ಬಳಸಬಹುದು. ಬೋಧನೆಯು ಭಾವಚಿತ್ರಗಳು, ಚಿತ್ರಪಟ ಮತ್ತು ಭೂಪಟಗಳು ಹಾಗೂ ಪುರಾತತ್ವ ಮತ್ತು ವಸ್ತು ಸಂಸ್ಕೃತಿಗಳ ಪ್ರತಿಕೃತಿಗಳನ್ನು ಒಳಗೊಂಡ ಶ್ರವ್ಯ – ದೃಶ್ಯ ಸಾಮಗ್ರಿಗಳ ಹೆಚ್ಚಿನ ಸಂಪನ್ಮೂಲಗಳನ್ನು ಬಳಸಬೇಕು. ಕಲಿಕಾ ಪ್ರಕ್ರಿಯೆಯು ಹೆಚ್ಚು ಸಹಭಾಗಿತ್ವದಿಂದ ಕೂಡಿರಲು, ಕೇವಲ ಮಾಹಿತಿ ನೀಡುವ ಕ್ರಿಯೆಯಿಂದ ಚರ್ಚೆಯ ಕಡೆಗೆ ಬದಲಾಗುವ ಅಗತ್ಯವಿದೆ. ಕಲಿಕೆಗೆ ಈ ಕ್ರಮವು ವಿದ್ಯಾರ್ಥಿ ಹಾಗೂ ಶಿಕ್ಷಕರಿಬ್ಬರನ್ನೂ ಸಾಮಾಜಿಕ ವಾಸ್ತವಿಕತೆಗಳಿಗೆ ಸ್ಪಂದಿಸುವಂತೆ ಮಾಡುತ್ತವೆ. ಬೋಧನಾ ಪದ್ಧತಿಯು ಮುಕ್ತಾಂತವಾಗಿರಬೇಕು. ಶಿಕ್ಷಕರು ತರಗತಿಗಳಲ್ಲಿ ಸಾಮಾಜಿಕ ವಾಸ್ತವಾಂಶಗಳ ವಿವಿಧ ಆಯಾಮಗಳನ್ನು ಚರ್ಚಿಸಬೇಕು ಮತ್ತು ತಮ್ಮಲ್ಲಿ ಹಾಗೂ ವಿದ್ಯಾರ್ಥಿಗಳಲ್ಲಿ ಹೆಚ್ಚುತ್ತಿರುವ ಸ್ವಯಂ-ಜಾಗೃತಿಯನ್ನು ಸೃಷ್ಟಿಸಲು ಕೆಲಸ ನಿರ್ವಹಿಸಬೇದು.

**ಚಟುವಟಿಕೆ – 5**

1. ಭಾರತ ಮತ್ತು ದಕ್ಷಿಣ ಆಫ್ರಿಕಾಗಳ ಸಮಾಜ ವಿಜ್ಞಾನ ಪಠ್ಯಕ್ರಮಗಳ ಹೋಲಿಕೆ ಮಾಡಿ ಮತ್ತು ಎರಡೂ ದೇಶಗಳಲ್ಲಿರುವ ಸಮಾನ ಅಂಶಗಳು ಮತ್ತು ವಿಚಾರಗಳನ್ನು ಗುರುತಿಸಿ.
2. ಭಾರತದಲ್ಲಿ ಸಮಾಜ ವಿಜ್ಞಾನ ಪಠ್ಯಕ್ರಮದಲ್ಲಿ ಅಳವಡಿಸಬೇಕೆಂದು ನೀವು ಯೋಚಿಸುವ ಎಲ್ಲ ವಿಚಾರ, ಕಾಳಜಿಗಳನ್ನು ಪಟ್ಟಿ ಮಾಡಿ.

3. ಭಾರತದಲ್ಲಿ ಸಮಾಜ ವಿಜ್ಞಾನ ಬೋಧನೆ ಕಲಿಕೆಯ ಹೊಸ ಪದ್ಧತಿಗಳಾಗುವುವು.

ನಿಮ್ಮ ಪ್ರಗತಿ ಪರಿಶೀಲಿಸಿ.

1. ಬಹುತೇಕ ದೇಶಗಳಿಗೆ ಸಾಮಾನ್ಯವಾಗಿರುವ ಕೆಲವು ವಿಚಾರ / ವಿವಾದಾಂಶಗಳನ್ನು ಪಟ್ಟಿಮಾಡಿ.

______________________________________________

______________________________________________

______________________________________________

2. ದಕ್ಷಿಣ ಆಫ್ರಿಕಾದ ಪಠ್ಯಕ್ರಮದಲ್ಲಿ ಸಮಾಜವಿಜ್ಞಾನ ಕ್ಷೇತ್ರವು ಏನನ್ನು ಅಧ್ಯಯನ ಮಾಡುತ್ತದೆ?

______________________________________________

______________________________________________

______________________________________________

3. ಪೌರನೀತಿಯ ಬದಲು (NCF 2005) ಸೂಚಿಸಿರುವ ಹೆಸರೇನು?

______________________________________________

______________________________________________

4. NCF 2005 ರ ಪ್ರಕಾರ, ಪ್ರಸಕ್ತ ಪಠ್ಯಕ್ರಮವು ಪಠ್ಯಪುಸ್ತಕಗಳ ಕಲ್ಪನೆಯನ್ನು ಮಾರ್ಪಡಿಸಲು ಯತ್ನಿಸುತ್ತದೆ. ಯಾವ ಬದಲಾವಣೆಗೆ ಶಿಫಾರಸ್ಸು ಮಾಡಿದೆ?

______________________________________________

______________________________________________

______________________________________________

### 2.3 ಸಾರಾಂಶಗಳಿಸೋಣ

ಹಲವು ವರ್ಷಗಳ ಅವಧಿಯಲ್ಲಿ ಹಲವಾರು ಬೆಳವಣಿಗೆಗಳು, ಮತ್ತು ಪ್ರಭಾವಗಳು ಸಮಾಜ ವಿಜ್ಞಾನ ಪಠ್ಯಕ್ರಮದ ವಿಷಯವನ್ನು ಬೆಳವಣಿಗೆ ಮತ್ತು ಪರಿವರ್ತನೆಗೆ ಯೋಗದಾನ ನೀಡಿದೆ. ಸಮಾಜ ವಿಜ್ಞಾನವು ಒಂದು ವಿಷಯವಾಗಿ ವಸಾಹತು ಆಳ್ವಿಕೆ ಅವಧಿಯಲ್ಲಿ ಪರಿಚಯಿಸಲ್ಪಟ್ಟು, ಈ ಅವಧಿಯಲ್ಲಿ ಪರಿಚಯಿಸಲ್ಪಟ್ಟು, ಈ ಅವಧಿಯ ಅನೇಕ ಬೆಳವಣಿಗೆಗಳು ಅದರ ಪಠ್ಯಕ್ರಮದ ಮೇಲೆ ಪ್ರಭಾವ ಬೀರಿದುವು. ಈ ಅವಧಿಯಲ್ಲಿ ಸಮಾಜ ವಿಜ್ಞಾನ ಪಠ್ಯಕ್ರಮದ ಮೇಲೆ ದೀರ್ಘಕಾಲಿಕ ಪರಿಣಾಮಕ ಬೀರಿದ ಅಂಶಗಳೆಂದರೆ, ಭಾರತದ ಇತಿಹಾಸದ ಬರೆವಣಿಗೆ, ಭಾರತ ಉಪಖಂಖಡದ ಸರ್ವೇಕ್ಷಣೆ, ಭಾರತದ ಜನಸಂಖ್ಯೆಯ ಗಣತಿ, ಇಂಗ್ಲಿಷ್ ಶಿಕ್ಷಣ ವ್ಯವಸ್ಥೆಯ ಆರಂಭ ಇತ್ಯಾದಿ. ಬ್ರಿಟಿಷರು ಭಾರತದ ಇತಿಹಾಸದಲ್ಲಿ ಋಣಾತ್ಮಕ ಅಂಶಗಳ ಹಾಗೂ ಯುರೋಪಿಯನ್ ಸಂಸ್ಕೃತಿಯ ಶ್ರೇಷ್ಠತೆಯ ಉತ್ಪ್ರೇಕ್ಷೆ ಮಾಡುತ್ತ ಭಾರತದಲ್ಲಿ ಅದರ ಆಳ್ವಿಕೆಯು ಒಂದು ನಾಗರೀಕರನ್ನಾಗಿಸುವ ಶಕ್ತಿ ಎಂದು ಸಮರ್ಥಿಸಿಕೊಳ್ಳಲು ಪ್ರಯತ್ನಿಸಿದರು. ವಸಾಹತು ಆಳ್ವಿಕೆಯ ಕಾಲದಲ್ಲಿ ಭಾರತದಾದ್ಯಂತ ಹರಡಿದ ರಾಷ್ಟ್ರೀಯತಾವಾದ ಭಾವನೆಯು ಬ್ರಿಟಿಷರು ರೂಪಿಸಿದ ಅಂಶಗಳ ಬದಲಾಗಿ ಪರ್ಯಾಯ ಅಂಶಗಳನ್ನು ಮುಂದಿಟ್ಟು, ಸಮಾಜ ವಿಜ್ಞಾನ ಪಠ್ಯಕ್ರಮದ ಮೇಲೆ ಪ್ರಭಾವ ಬೀರಲು ಸಮರ್ಥವಾಯಿತು.

ಸ್ವಾತಂತ್ರ್ಯಾನಂತರ ಭಾರತದ ಸಂವಿಧಾನದಲ್ಲಿ ಹೊಸ ಮೌಲ್ಯಗಳು ಮತ್ತು ಮಹಾತ್ವಾಕಾಂಕ್ಷೆಗಳು ಪ್ರತಿಬಿಂಬಿತವಾದಹುವು. ಸಮಾಜವಾದ, ಜಾತ್ಯತೀತತೆ, ಸ್ವಾತಂತ್ರ್ಯ, ಸಮಾನತೆ, ನ್ಯಾಯ ಮತ್ತು ಭ್ರಾತೃತ್ವಗಳಂತಹ ಮೌಲ್ಯಗಳೂ ಹೊಸ ಸಮಾಜ ವಿಜ್ಞಾನ ಪಠ್ಯಕ್ರಮದಲ್ಲಿ ಅಭಿವ್ಯಕ್ತಿ ಪಡೆದುವು. ಹೊಸ ಸಮಾಜ ವಿಜ್ಞಾನ ಪಠ್ಯಕ್ರಮವು ವೈವಿಧ್ಯತೆ, ರಾಷ್ಟ್ರೀಯ ಭಾವೈಕ್ಯತೆ, ಅಂತರರಾಷ್ಟ್ರೀಯ ತಿಳುವಳಿಕೆ, ಪರಿಸರ, ಅಭಿವೃದ್ಧಿ ಮುಂತಾದ ವಿಚಾರಗಳನ್ನೂ ಸಹ ಗಮನಕ್ಕೆ ತೆಗೆದುಕೊಂಡಿತು. ಕೆಳಸ್ತರದವರ, ಲಿಂಗತ್ವದ ಜಾತಿ ಮತ್ತು ಬುಡಕಟ್ಟಿನ ದೃಷ್ಟಿಕೋನಗಳು ಭಾರತ ಸಮಾಜದ

ಗಮನವನ್ನು ಯಾವಾಗಲೂ ಸೆಳೆದಿದೆ. ಈ ವಿಚಾರಗಳು ಸಮಾಜ ವಿಜ್ಞಾನ ಪಠ್ಯಕ್ರಮವನ್ನು ಯಾವಾಗಲೂ ಪ್ರಭಾವಿಸಿವೆ. ದಕ್ಷಿಣ ಆಫ್ರಿಕಾದ ಸಮಾಜ ವಿಜ್ಞಾನ ಪಠ್ಯಕ್ರಮವು ಸಮಾಜವಿಜ್ಞಾನ ಪಠ್ಯಕ್ರಮದ ಕ್ಷೇತ್ರದಲ್ಲಿ ಬೇರೊಂದು ದೇಶದಲ್ಲಿ ಏನಾಗುತ್ತದೆ ಎಂಬ ತಿಳುವಳಿಕೆಯಲ್ಲಿ ನೀಡುತ್ತದೆ. ಎರಡು ಬಹುತ್ವವಿರುವ ರಾಷ್ಟ್ರಗಳ ಸಮಾಜಿಕ ಕಾಳಜಿಗಳು ಎಷ್ಟು ಸಮಾನವಾಗಿರುತ್ತವೆಂಬುದನ್ನು ತಿಳಿಯುವುದು ಹಾಗೂ ಈ ಕಾಳಜಿಗಳು ಎರಡೂ ದೇಶಗಳ ಸಮಾಜವಿಜ್ಞಾನ ಪಠ್ಯಕ್ರಮದಲ್ಲಿ ಸ್ಥಾನ ಗಳಿಸಿವೆ ಎಂದು ತಿಳಿಯುವುದು ಬಹಲ ಆರ್ಕ್ಷಕ, ಮನಸೆಳೆಯುವಂತಿದೆ. ಭಾರತ ಸಮಾಜ ವಿಜ್ಞಾನ ಪಠ್ಯಕ್ರಮವು ವಿದ್ಯಾರ್ಥಿಗಳು ತಮ್ಮ ಸಮಾಜದ ಬಗ್ಗೆ ತಮ್ಮದೇ ಆದ ರೀತಿಯಲ್ಲಿ ಜ್ಞಾನ ಮತ್ತು ಗ್ರಹಿಕೆಗಳನ್ನು ರಚಿಸಿಕೊಳ್ಳುವಂತೆ ಮಾಡುವುದಕ್ಕೆ ಒತ್ತು ನೀಡುವಂತಹ ಹೊಸ ಭೋಧನಾ – ಕಲಿಕಾ ಪದ್ಧತಿಗಳೊಂದಿಗೆ ನಿರ್ಣಾಯಕ ರಾಷ್ಟ್ರೀಯ ಹಾಗೂ ಸಾಮಾಜಿಕ ವಿಚಾರಗಳನ್ನು ಸಂಭೋಧಿಸಬೇಕೆಂದು ಬಯಸುತ್ತದೆ.

## 2.4 ನಿಮ್ಮ ಪ್ರಗತಿ ಪರಿಶೀಲಿಸಿ – ಉತ್ತರಗಳು

### ನಿಮ್ಮ ಪ್ರಗತಿ ಪರಿಶೀಲಿಸಿ –1

1. ಜೇಮ್ಸ್ ಮಕಿಲ್
2. ಜೇಮ್ಸ್ ಪ್ರಿನ್ಸಿಸ್
3. ದೇಶವನ್ನು ಅನ್ವೇಷಿಸಿ ನಕ್ಷೆ ತಯಾರಿಸಲು
4. ಬರೋಡಾದ ಮಹಾರಾಜ ಮತ್ತು ಶಿವಾಜಿರಾವ್ ಗಾಯಕ್‌ವಾಡ್

### ನಿಮ್ಮ ಪ್ರಗತಿ ಪರಿಶೀಲಿಸಿ–2

1. ಪ್ರಜಾಪ್ರಭುತ್ವ ಜಾತ್ಯತೀತತೆ, ಸಮಾಜವಾದ, ಸ್ವತಂತ್ರ್ಯ, ಸಮಾನತೆ, ನ್ಯಾಯ ಮತ್ತು ಭ್ರತೃತ್ವ
2. ಪ್ರೌಢ ಶಿಕ್ಷಣ ಆಯೋಗ, 1948–49
3. ರಾಷ್ಟ್ರೀಯ ಶಿಕ್ಷಣ ನೀತಿ, 1986
4. UNO, UNESCO, UNICEF, ಇತ್ಯಾದಿ

### ನಿಮ್ಮ ಪ್ರಗತಿ ಪರಿಶೀಲಿಸಿ–3

1. ಕೆಳಸ್ತರದಲ್ಲಿರುವವರು ಎಂದರೆ ಪ್ರತ್ಯೇಕಿಸಲ್ಪಟ್ಟವರು ಮತ್ತು ದಮನಿತರು
2. ಸಿಂಥಾಲ್ ದಂಗೆ (1855/ಚಂಪಾರಣ್ ಸತ್ಯಾಗ್ರಹ (1917–18) ಬಾರ್ಜೋಲು ಸತ್ಯಾಗ್ರಹ (1928)
3. ಬುಡಕಟ್ಟು ಸ್ತ್ರೀಯರು

### ನಿಮ್ಮ ಪ್ರಗತಿ ಪರಿಶೀಲಿಸಿ–4

1. ಪರಿಸರ, ವ್ಯಾಪಾರ ಮತ್ತು ವಾಣಿಜ್ಯ, ಮಾನವ ಹಕ್ಕುಗಳು, ಸಮಾನತೆ ಇತ್ಯಾದಿ
2. ಸಮಾಜವಿಜ್ಞಾನ ಕಲಿಕಾ ಕ್ಷೇತ್ರವು, ಸಾಮಾಜಿಕ, ರಾಜಕೀಯ ಆರ್ಥಿಕ ಮತ್ತು ಪರಿಸರ ಸಂಬಂಧಿತ ಸನ್ನಿವೇಶಗಳಲ್ಲಿ ಮತ್ತು ಜನರ ಮನೋಭಾವಗಳು, ಮೌಲ್ಯಗಳು ಮತ್ತು ನಂಬಿಕೆಗಳಿಂದ ಪ್ರಭಾವಿತವಾಗಿರುವ, ಜನರ ನಡುವಿನ, ಜನರು ಮತ್ತು ಪರಿಸರಗಳ ನಡುವಿನ ಸಂಬಂಧಗಳನ್ನು ಅಧ್ಯಯನ ಮಾಡುತ್ತದೆ.
3. ರಾಜ್ಯಶಾಸ್ತ್ರ
4. ಪಠ್ಯಪುಸ್ತಕಗಳೂ ಕೇವಲ ಬೋಧಪ್ರದವಾಗಿರದೆ, ಸಲಹೆಗಳ ರೂಪದಲ್ಲಿಯೂ ಇರುವಂತೆ ಬದಲಾಗಬೇಕು.

## 2.5 SUGGESTED READINGS AND REFERENCES


| | |
|---|---|
| • Department of Education, Pretoria, South Africa (2002). Revised National Curriculum Statement Grades R-9 (Schools), Social Sciences<br>• His eastern and western Disples (2000) Life of Swami Vivekananda, 2 vols (Calcutta: Advaita Ashrama.<br>• National Policy of Education, 1986<br>• NCERT (2005), National Curriculum Framework 2005. New Delhi, NCERT.<br>• Seneviratna Anuradha, (1994). King Ashoka and Buddhism, Knndy, Sri Lanka, Buddhist Publication Society,<br>• Census of India, 2011<br>• http://www.mlm.nic.in/literacy01_nlm.htm<br>• http://www.censuindia.gov.in<br>• Thomas Babington Macaulay, "Minute of Ecuation," in Through Indian Eyes: The Living Tradition, Donald J. Johnson, et al. (New York: CITE Books, 1992). | Notes |


## 2.6 ಘಟಕಾಂತ್ಯದ ಅಭ್ಯಾಸಗಳು

ಕೆಳಗಿನ ಪ್ರಶ್ನೆಗಳನ್ನು ಉತ್ತರಿಸಿ.

1. ವಸಾಹತುಶಾಹಿ ಅವಧಿಯಲ್ಲಿ ಸಮಾಜ ವಿಜ್ಞಾನ ಪಠ್ಯಕ್ರಮದ ಮೇಲೆ ಪ್ರಭಾವ ಬೀರಿದ ವಿವಿಧ ಬೆಳವಣಿಗೆಗಳನ್ನು ಚರ್ಚಿಸಿ.
2. ಸಮಾಜ ವಿಜ್ಞಾನ ಪಠ್ಯಕ್ರಮದಲ್ಲಿ ಅಳವಡಿಸಲಾಗಿರುವ ವಿವಿಧ ಸಾಂವಿಧಾನಿಕ ಮೌಲ್ಯಗಳು ಮತ್ತು ಧ್ಯೇಯಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
3. ಕೆಳಸ್ತರದವರ ದೃಷ್ಟಿಕೋನವು ಮುಖ್ಯವೆಂದು ನೀವು ಏಕೆ ಪರಿಗಣಿಸುವಿರಿ?
4. ಭಾರತದಲ್ಲಿ ಸ್ತ್ರೀಯರ ಸ್ಥಾನಮಾನವೇನು? ಸಮಾಜ ವಿಜ್ಞಾನ ಪಠ್ಯಕ್ರಮದಲ್ಲಿ ಚರ್ಚಿಸಬೇಕಾದ ಲಿಂಗತ್ವ ಸಂಬಂಧಿತ ವಿಚಾರಗಳು ಯಾವುವು?
5. ಬುಡಕಟ್ಟು ಸಮಾಜಗಳನ್ನು ಪರಿವರ್ತಿಸುವುದು ಮತ್ತು ಅದೇ ವೇಳೆ ಅದರ ಸಂಸ್ಕೃತಿಯನ್ನು ಸಂರಕ್ಷಿಸುವುದು ಸಾಧ್ಯವೆಂದು ನಿಮಗೆನಿಸುತ್ತದೆಯೇ?
6. ಸಮಾಜ ವಿಜ್ಞಾನ ಪಠ್ಯಕ್ರಮಕ್ಕೆ ರಾಷ್ಟ್ರೀಯ ಭಾವೈಕ್ಯತೆ ಮತ್ತು ಅಂತರಾಷ್ಟ್ರೀಯ ತಿಳುವಳಿಕೆಗಳ ನಿಹಿತಾರ್ಥಗಳೇನು?
7. ದಕ್ಷಿಣ ಆಫ್ರಿಕಾದಲ್ಲಿ ಸಮಾಜ ವಿಜ್ಞಾನ ಪಠ್ಯಕ್ರಮದಲ್ಲಿ ಮುಖ್ಯ ಎಂದು ಪರಿಗಣಿಸಲಾಗಿರುವ ಮೌಲ್ಯಗಳು ಮತ್ತು ವಿಚಾರಗಳು ಯಾವುವು?
8. ಭಾರತದಲ್ಲಿ ಸಮಾಜ ವಿಜ್ಞಾನ ಪಠ್ಯಕ್ರಮವು ವಿದ್ಯಾರ್ಥಿಗಳಲ್ಲಿ ನೆಲೆಗೊಳಿಸಲು ಪ್ರಯತ್ನಿಸುತ್ತಿರುವ ಮೌಲ್ಯಗಳು ಯಾವುವು?
9. ಭಾರತದಲ್ಲಿ ಸಮಾಜ ವಿಜ್ಞಾನದಲ್ಲಿನ ಹೊಸ ಬೋಧನಾ–ಕಲಿಕಾ ಕ್ರಮಗಳನ್ನು ವಿವರಿಸಿ.

****